ಜನಶಕ್ತಿ

ಕನ್ನಡ ವಾರಪತ್ರಿಕೆ

Blog :janashakthi.wordpress.com e-mail : js_weekly@yahoo.com

ಸಂಪುಟ 6 ಸಂಚಿಕೆ 20
ಮೇ 13, 2012


ಪುಟ 16 ರೂ. 5/-



ಮೇ ದಿನಾಚರಣೆ : ಜಗದೆಲ್ಲೆಡೆ ಸಮರ ಸಂಕಲ್ಪ









ಶಿಕ್ಷಣ ರಂಗ : ಲಾಭ ಗರಿಷ್ಟಗೊಳಿಸಲು ಹೊಸ ಮಾರ್ಗಗಳು

ಹಾಸನ : ಮಲೆನಾಡಿಗೂ ಬಡಿದ ಬರ

ಮಳವಳ್ಳಿ : ದಲಿತರ ಮೇಲೆ ದೌರ್ಜನ್ಯ ಎಲ್ಲಿದೆ ನ್ಯಾಯ?

ಕಾಂ.ಪಿ. ಸುಂದರಯ್ಯ ಜನ್ಮ ಶತಮಾನೋತ್ಸವ ಆರಂಭ



'ವೀರ ತೆಲಂಗಾಣ' ಏಕೆ ಓದಬೇಕು ?

ಜಿ.ವಿ.ಶ್ರೀರಾಮರೆಡ್ಡಿ

ಕ್ರಿಯಾ ಪ್ರಕಾಶನವು ಇತ್ತೀಚೆಗೆ ಹೊರ ತಂದಿರುವ 'ವೀರ ತೆಲಂಗಾಣ' ಎಂಬ ಪುಸ್ತಕವು ಐತಿಹಾಸಿಕ ಮಹತ್ವದ ಮಹಾನ್ ಹೋರಾಟವೊಂದರ ಅಂತಃಸತ್ವವನ್ನು ತೆರೆದಿಡುವ ಒಂದು ಅತ್ಯಂತ ಮಹತ್ವದ ಕೃತಿ. ಎಲ್ಲರೂ ಕೊಳ್ಳಲೇ ಬೇಕಾದ ಓದಲೇಬೇಕಾದ, ಈ ಕೃತಿಯನ್ನು ಪರಿಚಯಿಸಿದ್ದಾರೆ ಸಿಪಿಐ(ಎಂ) ರಾಜ್ಯ ಕಾರ್ಯದರ್ಶಿಗಳು.


1946 ರಿಂದ 1951ರ ವರೆಗೂ ನಡೆದ ಐತಿಹಾಸಿಕ ತೆಲಂಗಾಣ ರೈತರ ಹೋರಾಟ ಭಾರತದಲ್ಲಿನ ರೈತರ ಹೋರಾಟಗಳ ಇತಿಹಾಸದಲ್ಲಿ ರಕ್ತಾಕ್ಷರಗಳಲ್ಲಿ ಬರೆದ ಹೋರಾಟ. ಇದರ ಹಿಂದೆ ಭೂಮಿಯ ಪಶ್ನೆಗಾಗಿ ನಮ್ಮ ದೇಶದಲ್ಲಿ ಹಲವಾರು ಹೋರಾಟಗಳು ನಡೆದಿವೆ. ಪುನ್ನಪ್ರ-ವಾಯಲಾರ್ ಹೋರಾಟ, ತೇಭಾಗ ಹೋರಾಟ, ಸುರ್ಮಾ ಕಣಿವೆ ಹೋರಾಟ ಮತ್ತು ಮಹಾರಾಷ್ಟ್ರದ ವಾರಲಿ ಹೋರಾಟಗಳು ನಡೆದಿವೆ. ಆದರೆ ಆಂಧ್ರಪ್ರದೇಶದ ತೆಲಂಗಾಣ ಪ್ರಾಂತದಲ್ಲಿ ನಡೆದ ಭೂಮಿಯ ಹೋರಾಟ ಅನನ್ಯವಾದದ್ದು.

ಊಳಿಗಮಾನ್ಯ ಪ್ರಭುಗಳ ವಿರುದ್ಧ, ಆ ಉಳಿಗಮಾನ್ಯ ಪ್ರಭುಗಳಿಗೆ ರಕ್ಷಣೆಯಾಗಿ ನಿಂತಿದ್ದ ಹೈದರಾಬಾದ್ ನಿಜಾಮನ ನಿರಂಕುಶಾಡಳಿತ ಮತ್ತು ಸ್ವಾತಂತ್ರ್ಯಾನಂತರ ಇವರಿಬ್ಬರ ರಕ್ಷಣೆಗಾಗಿ ಬಂದ ನೆಹರೂ ಸರ್ಕಾರದ ಸೈನ್ಯದ ವಿರುದ್ಧ ನಡೆದ, ರೈತರ ಸಶಸ್ತ್ರ ಹೋರಾಟವು ಭಾರತದಲ್ಲಿನ ರೈತ ಹೋರಾಟಗಳಲ್ಲಿ ಒಂದು ಪ್ರತ್ಯೇಕ ಸ್ಥಾನವನ್ನು ಪಡೆದಿದೆ. ಈ ಹೋರಾಟದ ಪ್ರತಿಫಲವೇ ಇಡೀ ದೇಶದ ಮುಂದೆ ಭೂಮಿಯ ಪ್ರಶ್ನೆಯನ್ನು ದೇಶದ ಒಂದು ಪ್ರಖರ ಕಾರ್ಯಸೂಚಿಯಾಗಿ ನಿಲ್ಲಿಸಿತು. 1946 ರಿಂದ 1951 ರವರೆಗೂ ನಡೆದ, ಈ ನಿರ್ಣಾಯಕ ಸಶಸ್ತ್ರ ಮಹಾನ್ ಕ್ರಾಂತಿಕಾರಿ ಜನತಾ ಹೋರಾಟವು ಅತ್ಯಂತ ಚಾರಿತ್ರಿಕವಾದದ್ದು. ಈ ಹೋರಾಟದಲ್ಲಿ ನಾಲ್ಕು ಸಾವಿರ ಜನ ರೈತರು ಹುತಾತ್ಮರಾಗಿದ್ದಾರೆ. ಇಂತಹ ಮಹತ್ತರ ಹೋರಾಟವನ್ನು ನಡೆಸಿದ್ದು ಕಮ್ಯುನಿಸ್ಟ್ ಪಕ್ಷದ ನಾಯಕತ್ವದಲ್ಲಿದ್ದ (ಸಂಘಂ ಎಂದು ಜನ ಕರೆಯುತ್ತಿದ್ದ) ವಿಶಾಲ ಪ್ರಜಾಸತ್ತಾತ್ಮಕ ಸಂಘಟನೆ ಆಂಧ್ರ ಮಹಾ ಸಭಾ.

ಇದರಿಂದಾಗಿಯೇ ಭೂಮಿಯ ಪ್ರಶ್ನೆ ಸ್ವತಂತ್ರ ಭಾರತದಲ್ಲಿ ರಾಷ್ಟ್ರೀಯ ಅಜೆಂಡಾಕ್ಕೆ ಬಂದಿದ್ದು. ಭೂಮಿ ಪ್ರಶ್ನೆ ಎಂದರೇನು? ಇದು ಇಂದಿಗೂ ಈ ದೇಶದಲ್ಲಿ ಬಹಳ ಗಂಭೀರವಾಗಿ ಚರ್ಚೆಗೆ ಒಳಪಟ್ಟಿದೆ. ಭೂಮಿಯ ಪ್ರಶ್ನೆ ಎಂದರೆ ಭೂಮಿ ಯಾರಿಗಿರಬೇಕು? ಅಂದರೆ, ಭೂಮಿ ಉಳುವವನಿಗೆ ಇರಬೇಕೇ ಅಥವಾ ಉಳುಮೆ ಮಾಡದೆ ಅದರ ಮೇಲೆ ಒಡೆತನವನ್ನು ಹೊಂದಿರುವ ಮಾಲಿಕರಿಗೆ ಇರಬೇಕೆ ಎಂಬುದೇ ಈ ಪ್ರಶ್ನೆ. ಭೂಮಿ ಉಳುವವನಿಗಿರಬೇಕು ಎಂಬುದೇ ತೆಲಂಗಾಣ ಹೋರಾಟದ ಒಂದು ಪ್ರಮುಖ ಉತ್ತರ. ಉಳುವವನಿಗೆ ಭೂಮಿ ಬೇಕೆಂಬ ಈ ಹೋರಾಟವು ದೇಶದ ಹಲವಾರು ಪ್ರಶ್ನೆಗಳಿಗೆ ಉತ್ತರವನ್ನು ಕೊಡುತ್ತದೆ.

ಈ ಹೋರಾಟವು ಸುಮಾರು ಐದು ವರ್ಷಗಳ ದೀರ್ಘಕಾಲ ನಡೆದಿರುವುದು ಒಂದು ವೀರೋಚಿತ ದಾಖಲೆಯಾಗಿದೆ. ಆದರೂ, ಇದು ಏಕಾಏಕಿಯಾಗಿ 1946ರಲ್ಲಿ ಪ್ರಾರಂಭವಾಗಿದ್ದಲ್ಲ. 1920ರಲ್ಲಿ ತೆಲಂಗಾಣ ಪ್ರಾಂತ್ಯದ ಅತಿದೊಡ್ಡ ಭೂಮಾಲಿಕರಲ್ಲಿ ಒಬ್ಬರಾದ ವಿಸನೂರ ದೇಶಮುಖ್ ಎಂಬ ಅತ್ಯಂತ ಕ್ರೂರ ಜಮೀನ್ದಾರನ ವಿರುದ್ಧ ಬಡ ಮುಸ್ಲಿಂ ರೈತ ನಡೆಸಿದ ಹೋರಾಟದಿಂದಲೇ ಸ್ಫೂರ್ತಿ ಪಡೆಯುತ್ತದೆ. 1946–51ರ ಅವಧಿಯಲ್ಲಿ ನಡೆದ ಹೋರಾಟಕ್ಕೆ ಸ್ಫೂರ್ತಿ ಕೊಟ್ಟಿದ್ದಲ್ಲದೆ, ಅವನ ಹೋರಾಟದ ಆಧಾರದಲ್ಲಿ ರಚಿಸಲಾದ 'ಮಾ ಭೂಮಿ'(ನನ್ನ ಭೂಮಿ) ಎಂಬ ನಾಟಕವು ತೆಲಂಗಾಣ ರೈತ ಹೋರಾಟಕ್ಕೆ ಅಸಂಖ್ಯಾತ ಜನರ ಬೆಂಬಲವನ್ನು ತಂದು ಕೊಟ್ಟಿತು.

ವಾಸ್ತವವಾಗಿ ಈ ಹೋರಾಟದ ಕಿಡಿಯನ್ನು ಹಚ್ಚಿದ್ದು ಇಡಿ ಜನ ಸಮೂಹವೇ ದ್ವೇಷಿಸುತ್ತಿದ್ದ ವಿಸನೂರ ದೇಶಮುಖ್ ರಾಮಚಂದ್ರಾರೆಡ್ಡಿ ವಿರುದ್ಧ ರೈತರನ್ನು ಒಗ್ಗೂಡಿಸಿ ರೈತ ಸಂಘವನ್ನು ಕಟ್ಟುತ್ತಿದ್ದ ಅಯಿಲಮ್ಮ ಎಂಬ ಮಹಿಳೆ. ಈ ಕಿಡಿ ಜ್ವಾಲಾಗ್ನಿಯಾಗಿ ಇಡೀ ತೆಲಂಗಾಣಕ್ಕೆ ಹಬ್ಬಿದ್ದು 1946 ಜುಲೈ ತಿಂಗಳ 4ನೇ ತಾರೀಖು. ತೆಲಂಗಾಣ ಹೋರಾಟದ ಮೊದಲ ಹುತಾತ್ಮ ದೊಡ್ಡಿ ಕೊಮರಯ್ಯ. ಅಂದು ವಿಸನೂರ ಭೂಮಾಲಿಕ ಗೂಂಡಾಗಳು ಪ್ರತಿಭಟನೆಯಲ್ಲಿ ತೊಡಗಿದ್ದ ರೈತರ ಮೇಲೆ ನಡೆಸಿದ ಗುಂಡಿನ ದಾಳಿಯಲ್ಲಿ, ದೊಡ್ಡಿ ಕೊಮರಯ್ಯನ ಸಾವು ಇಡೀ ಹೋರಾಟಕ್ಕೆ ನಾಂದಿ ಹಾಡಿತು. ನಿರಕ್ಷರಕುಕ್ಷಿಗಳಾದ ಆರ್ಥಿಕವಾಗಿ ಮತ್ತು ಸಾಮಾಜಿಕವಾಗಿ ಅತ್ಯಂತ ಹಿಂದುಳಿದಿದ್ದ ಮತ್ತು ಕ್ರೂರ ಜಮೀನ್ದಾರರ ಅಮಾನುಷ ತುಳಿತಕ್ಕೆ ಸಿಕ್ಕಿದ್ದ ಬಡ ರೈತರು, ಕೃಷಿ ಕೂಲಿಕಾರರು, ಭೂಹೀನರು ನಡೆಸಿದ ಈ ಹೋರಾಟವು ಅನೇಕ ತಾತ್ವಿಕ ಪ್ರಶ್ನೆಗಳಿಗೂ ಉತ್ತರವನ್ನು ಕೊಟ್ಟಿದೆ.



ಈ ಹೋರಾಟವನ್ನು ಕಮ್ಯೂನಿಸ್ಟರ ದೌರ್ಜನ್ಯ ಕಾಂಡವೆಂದೂ, ಕಮ್ಯೂನಿಸ್ಟರು ದರೋಡೆಕಾರರೆಂದೂ ಕಮ್ಯೂನಿಸ್ಟ್ ವಿರೋಧಿಗಳು ಚಿತ್ರಿಸಿದರೆ, ಇನ್ನೊಂದು ಕಡೆ ಸ್ವಾತಂತ್ರ್ಯದ ನಂತರ ಆಗ ಅವಿಭಜಿತ ಕಮ್ಯೂನಿಸ್ಟ್ ಚಳುವಳಿಯ ಭಾಗವಾಗಿದ್ದ ಪರಿಷ್ಕರಣವಾದಿಗಳು (ವಿಭಜನೆಯ ನಂತರ ಸಿ.ಪಿ.ಐ. ಎನಿಸಿಕೊಂಡವರು) ಇದೊಂದು ಎಡ ದುಸ್ಸಾಹಸವಾದವೆಂದು ಚಿತ್ರಿಸಿದರು. 1951 ಸೆಪ್ಟಂಬರ್ ನಲ್ಲಿ ಈ ಹೋರಾಟವನ್ನು ಹಿಂಪಡೆಯುವ ತೀರ್ಮಾನವನ್ನು ತೆಗೆದುಕೊಂಡ ನಂತರ, ಎಡ ಸಂಕುಚಿತವಾದಿಗಳು ಈ ತೀರ್ಮಾನವನ್ನು ವರ್ಗಶಾಮೀಲಿನ ಪರಿಷ್ಕರಣವಾದವೆಂದು ಚಿತ್ರಿಸಿದರು. ಮಾವೋವಾದಿಗಳು ಇಂದಿಗೂ ಇದೇ ಚಿತ್ರಣ ಮುಂದುವರೆಸಿದ್ದಾರೆ. ಆದರೆ ಈ ಹೋರಾಟವು ಭಾರತದ ಜನತಾ ಪ್ರಜಾಪ್ರಭುತ್ವ ಕ್ರಾಂತಿಯ ನಾಯಕತ್ವವನ್ನು ವಹಿಸುತ್ತಿರುವ ಕಮ್ಯೂನಿಸ್ಟ್ ಚಳುವಳಿಗೆ ಒಂದು ಪ್ರಮುಖ ಸಹಾಯವನ್ನು ಮಾಡಿದೆ. ಭಾರತದಲ್ಲಿನ ಜನತಾ ಪ್ರಜಾಪ್ರಭುತ್ವ ಕ್ರಾಂತಿಗೆ ಸಂಬಂಧಪಟ್ಟ ವ್ಯೂಹ ಮತ್ತು ತಂತ್ರಗಳಿಗೆ ಸಂಬಂಧಿಸಿದ ಪ್ರಮುಖ ಅಂಶಗಳನ್ನು ಮುನ್ನೆಲೆಗೆ ತಂದು, ಅದರ ಬಗ್ಗೆ ದೀರ್ಘ ಸೈದ್ಧಾಂತಿಕ ಮಂಥನ ನಡೆದು, ಅದರ ಸ್ಥೂಲ ರೂಪುರೇಷೆ ವಿಕಾಸಗೊಳ್ಳಲು ಸಹಾಯ ಮಾಡಿದೆ. ಜಮೀನ್ದಾರರ ಕ್ರೂರ ಶೋಷಣೆ ಮತ್ತು ದಬ್ಬಾಳಿಕೆಗೆ ವಿರುದ್ಧವಾಗಿ ಮತ್ತು ಹೈದರಾಬಾದ್ ನಿಜಾಮ ಸರ್ಕಾರದ ಅಸಹನೀಯ ದಬ್ಬಾಳಿಕೆಗೆ ವಿರುದ್ಧವಾಗಿ ನಡೆದ ಹೋರಾಟವು ಇಂದಿಗೂ ಭೂಮಿಯ ಹೋರಾಟಕ್ಕೆ ಸ್ಫೂರ್ತಿಯಾಗಿ ನಿಂತಿದೆ.

ಇಂತಹ ಮಹತ್ತರ ಹೋರಾಟವನ್ನು ನಡೆಸಿದ್ದು ಕಮ್ಯುನಿಸ್ಟ್ ಪಕ್ಷದ ನಾಯಕತ್ವದಲ್ಲಿದ್ದ ಆಂಧ್ರ ಮಹಾ ಸಭಾ. ಈ ಹೋರಾಟದ ಅಗ್ರಗಣ್ಯ ನಾಯಕರಲ್ಲಿ ಒಬ್ಬರಾದ ಮತ್ತು ರಥಸಾರಥಿಗಳಲ್ಲಿ ಪ್ರಮುಖರಾದ ಕಾಂ. ಪುಚ್ಚಲಪಲ್ಲಿ ಸುಂದರಯ್ಯನವರು, ಆ ಹೋರಾಟವನ್ನು ಕಣ್ಣಿಗೆ ಕಟ್ಟುವ ರೀತಿಯಲ್ಲಿ ಬರೆದು 1972ರಲ್ಲಿ ಪ್ರಕಟವಾದ ಒಂದು ಮಹತ್ವ ಪೂರ್ಣವಾದ 450 ಪುಟಗಳ ಬೃಹತ್ ಗ್ರಂಥ- 'ತೆಲಂಗಾಣ ಜನತೆಯ ಸಶಸ್ತ್ರ ಹೋರಾಟ ಮತ್ತು ಅದರ ಪಾಠಗಳು'(ತೆಲಂಗಾಣ ಪೀಪಲ್ಸ್ ಆರ್ಮ್ಡ್ ಸ್ಟ್ರಗಲ್ ಅಂಡ್ ಇಟ್ಸ್ ಲೆಸನ್ಸ್). ಈ ಬೃಹತ್ ಗ್ರಂಥದ ಸಂಕ್ಷಿಪ್ತ ರೂಪ, 1973ರಲ್ಲಿ ಧಾರಾವಾಹಿಯಾಗಿ 'ಸೋಶಿಯಲ್ ಸೈಂಟಿಸ್ಟ್' ಪತ್ರಿಕೆಯ ನಾಲ್ಕು (ಸಂಪುಟ 1, ಸಂಚಿಕೆ 7–10) ಸಂಚಿಕೆಗಳಲ್ಲಿ ಅವರೇ ಬರೆದ ಲೇಖನಗಳ ರೂಪದಲ್ಲಿ ಪ್ರಕಟವಾಗಿತ್ತು. ಈ ಲೇಖನಗಳನ್ನು ಕಾ.ಪಿ.ಸುಂದರಯ್ಯನವರ ನಿಧನಾನಂತರ ಅಗಸ್ಟ್ 1985 ರಲ್ಲಿ ನವದೆಹಲಿಯ ನ್ಯಾಶನಲ್ ಬುಕ್ ಸೆಂಟರ್ 120 ಪುಟಗಳ ಪುಸ್ತಕದ ರೂಪದಲ್ಲಿ ಪ್ರಕಟಿಸಿತ್ತು. ಈ ಪುಸ್ತಕದ ಕನ್ನಡ ಭಾಷಾಂತರವೇ ಪ್ರಸ್ತುತ ಪುಸ್ತಕ. ಇದು ವಿವರವಾದ ಮತ್ತು ವಿಶಾಲವಾದ ಅಂಶಗಳನ್ನೊಳಗೊಂಡಿರುವ ಮೂಲ ಪುಸ್ತಕದ ಸಂಕ್ಷಿಪ್ತ ರೂಪವಷ್ಟೆ. ಇದರ ಹೆಚ್ಚಿನ ವಿವರಗಳು ಬೇಕಾದರೆ ಸುಂದರಯ್ಯನವರ ಮೂಲ ಪುಸ್ತಕವನ್ನು ಓದಬೇಕಾಗುತ್ತದೆ. ಈ ಮೂಲ ಪುಸ್ತಕವನ್ನು ಸುಂದರಯ್ಯ ವಿಜ್ಞಾನ ವೇದಿಕೆ ಪರವಾಗಿ ಕೇಂಬ್ರಿಜ್ ಯೂನಿವರ್ಸಿಟಿ ಪ್ರೆಸ್ 2006 ರಲ್ಲಿ ಪುನಃ ಮುದ್ರಿಸಿದ್ದು ಈಗ ಇಂಗ್ಲೀಷಿನಲ್ಲಿ ಲಭ್ಯವಿದೆ.

ನಮ್ಮ ನೆರೆಯ ರಾಜ್ಯದಲ್ಲಿ ನಡೆದ ಇಂತಹ ಚಾರಿತ್ರಿಕ ಜನತಾ ಹೋರಾಟದ ಬಗ್ಗೆ ಕನ್ನಡದಲ್ಲಿ ಕೆಲವು ಕಿರು ಹೊತ್ತಗೆ ಮತ್ತು ಲೇಖನಗಳನ್ನು ಬಿಟ್ಟರೆ, ಹೆಚ್ಚಿನ ಮಾಹಿತಿ ಲಭ್ಯವಿಲ್ಲ. ಈ ವರೆಗೆ ಇದರ ಬಗ್ಗೆ ವಿವರವಾದ ಮಾಹಿತಿ ವಿಶ್ಲೇಷಣೆ, ಪುಸ್ತಕ ರೂಪದಲ್ಲಿ ಇಲ್ಲದಿರುವುದು ಕರ್ನಾಟಕದ ರೈತ ಚಳುವಳಿ, ಚರಿತ್ರೆಯ ವಿದ್ಯಾರ್ಥಿಗಳು, ಸಾರಸ್ವತ ಲೋಕ, ಎಡ ಮತ್ತು ಪ್ರಜಾಸತ್ತಾತ್ಮಕ ಚಳುವಳಿ, ಮತ್ತು ಜನತೆ ಈ ವರೆಗೆ ಎದುರಿಸುತ್ತಿದ್ದ ದೊಡ್ಡ ಕೊರತೆ. ಈ ಹಿನ್ನೆಲೆಯಲ್ಲಿ, ಈ ಪುಸ್ತಕವನ್ನು ಕ್ರಿಯಾ ಪ್ರಕಾಶನವು ತರುವ ಮೂಲಕ ಈ ದೊಡ್ಡ ಕೊರತೆಯನ್ನು ತುಂಬುತ್ತಿರುವುದು ಬಹಳ ಸಂತೋಷದ ವಿಷಯವಾಗಿದೆ. ಅದರಲ್ಲೂ, ಈ ವರ್ಷ ಅಂದರೆ 2012 ಮೇ ಒಂದಕ್ಕೆ ಸುಂದರಯ್ಯನವರ ಜನ್ಮಶತಾಬ್ದಿ ಆಚರಣೆ ದೇಶದಾದ್ಯಂತ ಆರಂಭವಾಗುತ್ತಿರುವ ಹಿನ್ನೆಲೆಯಲ್ಲಿ ಈ ಪುಸ್ತಕ ಹೊರತರುತ್ತಿರುವುದು ಒಂದು ವಿಶೇಷವಾಗಿದೆ.

ಆರು ದಶಕಗಳ ಹಿಂದಿನ ಚಳುವಳಿ ಒಂದರ

ಪುಟ 4 ಕ್ಕೆ

ಹಾಸನ : ಮಲೆನಾಡಿಗೂ ಬಡಿದ ಬರ

ಹಾಸನ ಜಿಲ್ಲೆ ಒಂದು ಕಡೆ ಮಲೆನಾಡು ಮತ್ತೊಂದು ಕಡೆ ಅರೆ ಮಲೆನಾಡಿನಿಂದ ಕೂಡಿದ್ದು, ಮೇಲ್ನೋಟಕ್ಕೆ ಇದೊಂದು ಸಮೃದ್ಧ ಜಿಲ್ಲೆಯಾಗಿ ಕಾಣುವ ಜಿಲ್ಲೆ. ಪ್ರಸಕ್ತ ವರ್ಷ ಗಂಭೀರ ಬರಕ್ಕೆ ತುತ್ತಾಗಿದೆ. ರಾಜ್ಯ ಸರ್ಕಾರ 4 ತಾಲ್ಲೂಕುಗಳನ್ನು (ಹಾಸನ, ಚನ್ನರಾಯಪಟ್ಟಣ, ಅರಸೀಕೆರೆ, ಬೇಲೂರು) ಬರಪೀಡಿತ ತಾಲೂಕುಗಳೆಂದು ಘೋಷಿಸಿದ್ದರೂ ಉಳಿದ ತಾಲೂಕುಗಳಾದ ಅರಕಲಗೂಡು, ಹೊಳೆನರಸೀಪುರ, ಆಲೂರು, ಸಕಲೇಶಪುರಗಳೂ ಕೂಡ ವಾಸ್ತವವಾಗಿ ಬರಕ್ಕೆ ತುತ್ತಾಗಿವೆ. ಹಾಸನ ಜಿಲ್ಲೆ ಕೃಷಿ ಪ್ರಧಾನ ಜಿಲ್ಲೆಯಾಗಿರುವುದರಿಂದ ಬರದಿಂದ ಜಿಲ್ಲೆಯ ರೈತರು ತೀವ್ರ ತೊಂದರೆಗೊಳಗಾಗಿದ್ದಾರೆ. ಒಂದೆಡೆ ಕೃಷಿ ಚಟುವಟಿಕೆಗಳಿಗೆ ನೀರಿಲ್ಲ, ಮತ್ತೊಂದೆಡೆ ಕುಡಿಯುವ ನೀರಿಗೂ ಅಭಾವ ಕಾಣಿಸಿಕೊಂಡಿದೆ.

ಬಣಗುಡುತ್ತಿರು ಜಲಾಶಯ ಮತ್ತು ಕೆರೆಗಳು

ಜಿಲ್ಲೆಯ ಬಹುತೇಕ ಕೃಷಿ ಪ್ರದೇಶಗಳಿಗೆ ನೀರನ್ನು ಒದಗಿಸುವ ಹೇಮಾವತಿ ಜಲಾಶಯದ ಗರಿಷ್ಠ ನೀರಿನ ಶೇಖರಣೆಯ ಸಾಮರ್ಥ್ಯ ಸಮುದ್ರ ಮಟ್ಟದಿಂದ 2,922 ಅಡಿ. ಕಳೆದ ವರ್ಷ 2,882 ಅಡಿ ನೀರು ಶೇಖರಣೆಯಾಗಿತ್ತು. ಆದರೆ ಪ್ರಸಕ್ತ ವರ್ಷ ಕೇವಲ 287 ಅಡಿಗಳಷ್ಟು ನೀರು ಮಾತ್ರ ಶೇಖರಣೆಯಾಗಿದೆ. (ಕಳೆದ ವರ್ಷ ಈ ಅವಧಿಗಾಗಲೇ 19.60 ಟಿ.ಎಂ.ಸಿ. ನೀರು ಸಂಗ್ರಹವಾಗಿತ್ತು. ಆದರೆ ಈ ವರ್ಷ ಕೇವಲ 6.3 ಟಿ.ಎಂ.ಸಿ. ನೀರು ಮಾತ್ರ ಸಂಗ್ರಹವಾಗಿದೆ. ಅಂದರೆ ಕಳೆದ ವರ್ಷ ಇದೇ ವೇಳೆಗೆ ಹೇಮಾವತಿ ಜಲಾಶಯಕ್ಕೆ 62,850 ಕ್ಯೂಸೆಕ್ ಒಳಹರಿವಿತ್ತು. ಆದರೆ ಈ ಬಾರಿ ಇದು 26,000 ಕ್ಯೂಸೆಕ್‌ಗೆ ಇಳಿದಿದೆ. ಇದರಿಂದ ಕಾಲುವೆಗಳಲ್ಲಿ ನೀರನ್ನು ಹರಿಸಲಾಗದೆ ಕೃಷಿ ಚಟುವಟಿಕೆಗಳು ಸಂಪೂರ್ಣ ಏರುಪೇರಾಗಿವೆ. ಇದರಿಂದ ರೈತರು ತೀವ್ರ ಸಂಕಷ್ಟಕ್ಕೀಡಾಗಿದ್ದಾರೆ. ಮತ್ತೊಂದೆಡೆ ಮಳೆ ಇಲ್ಲದಿರುವ ಕಾರಣಕ್ಕಾಗಿ ಕೆರೆಗಳಲ್ಲೂ ನೀರು ಸಂಗ್ರಹವಾಗಿಲ್ಲ. ಇದರಿಂದ ದನಕರುಗಳಿಗೂ ಮತ್ತು ನಗರ ಪ್ರದೇಶಗಳಲ್ಲಿ ಕುಡಿಯುವ ನೀರಿಗೆ ತೀವ್ರ ತೊಂದರೆಯಾಗಿದೆ. ಇದು ಮಾತ್ರವಲ್ಲದೆ ಜಿಲ್ಲೆಯಾದ್ಯಂತ ಕುಡಿಯುವ ನೀರಿಗೂ ತೀವ್ರ ಅಭಾವವಾಗಿದೆ. ಕುಡಿಯುವ ನೀರಿನ ಅಭಾವಕ್ಕೆ ಮತ್ತೊಂದು ಕಾರಣವೆಂದರೆ ಕೆರೆಗಳಲ್ಲಿ ನೀರಿಲ್ಲದಿರುವುದರಿಂದ ಅಂತರ್ ಜಲ ಕಡಿಮೆಯಾಗಿದ್ದು ಕೊಳವೆ ಬಾವಿಗಳಲ್ಲೂ ನೀರಿನ ಪ್ರಮಾಣ ಕುಸಿದಿದೆ. ದನಕರುಗಳಿಗೆ ಮೇವಿನ ಅಭಾವವು ಹೆಚ್ಚಾಗಿದ್ದು ಇದರಿಂದ ಕೃಷಿಕ ಚಿಂತೆಗೀಡಾಗಿದ್ದಾನೆ.

ಬೆಳೆದ ಬೆಳೆಗೆ ಬೆಲೆ ಇಲ್ಲ

ಮಳೆಯು ಕಾಲಕಾಲಕ್ಕೆ ಬರದಿರುವುದರಿಂದ ಜಿಲ್ಲೆಯಲ್ಲಿನ ರೈತರು ಬಿತ್ತನೆಗಾಗಿ ಕಾಯುತ್ತಿದ್ದಾರೆ. ಅದೇ ಸಮಯದಲ್ಲಿ ಕೃಷಿ ಇಲಾಖೆ ಮತ್ತು ಖಾಸಗಿ ಬಿತ್ತನೆ ಬೀಜ ಮಾರಾಟಗಾರರು ಬೆಲೆಗಳನ್ನು ಗಗನಕ್ಕೇರಿಸಿ ರೈತರಿಗೆ ಮತ್ತಷ್ಟು ತೊಂದರೆ ನೀಡುತ್ತಿದ್ದಾರೆ. ಜಿಲ್ಲೆಯ ಪ್ರಮುಖ ಬೆಳೆ ಆಲೂಗಡ್ಡೆ ಇದು ಕಳೆದ 3-4 ವರ್ಷಗಳಿಂದ ಅಂಗಮಾರಿ ರೋಗಕ್ಕೆ ತುತ್ತಾಗಿ ರೈತರು ವಿಪರೀತ ನಷ್ಟವನ್ನನುಭವಿಸಿದ್ದಾರೆ. ಒಂದೆಡೆ ಈ ಅಂಗಮಾರಿ ರೋಗವನ್ನು ತಡೆಗಟ್ಟಲು ಜಿಲ್ಲಾಡಳಿತವಾಗಲಿ ರಾಜ್ಯ ಸರ್ಕಾರವಾಗಲಿ, ಅಗತ್ಯ ಕ್ರಮಗಳನ್ನು ಕೈಗೊಳ್ಳಲಿಲ್ಲ. ಅದು ಮಾತ್ರವಲ್ಲದೆ ಪ್ರಸಕ್ತ ವರ್ಷದಲ್ಲಿ ಬಿತ್ತನೆ ಆಲೂಗಡ್ಡೆಯ ದರವನ್ನು ಕ್ವಿಂಟಾಲಿಗೆ 1,600 ರೂ ಗೆ ಏರಿಸಲಾಗಿದೆ. ಕಳೆದ ವರ್ಷ ಬೆಳೆದ ಶುಂಠಿಗೆ ಬೆಂಬಲ ಬೆಲೆ ಸಿಗದೆ ರೈತರು ಸಾಲದ ಶೂಲದಲ್ಲಿ ಒದ್ದಾಡುವಂತಾಗಿದೆ.

ತಾರತಮ್ಯ ಧೋರಣೆ

ಹಾಸನ ಜಿಲ್ಲೆಯ ಜನ ರಾಜಕೀಯ ಕಾರಣಗಳಿಗಾಗಿ ಅನ್ಯಾಯಕ್ಕೊಳಗಾಗಿ ಸೂಕ್ತ ಸೌಲಭ್ಯಗಳಿಂದ ವಂಚಿತರಾಗುತ್ತಿದ್ದಾರೆ. ಜಿಲ್ಲೆಯಲ್ಲಿ ಜೆಡಿ(ಎಸ್) ಪಕ್ಷದ ಪ್ರಾಬಲ್ಯ ಹೆಚ್ಚಿದ್ದು ಇದೇ ಕಾರಣವಾಗಿ ರಾಜ್ಯ ಬಿಜೆಪಿ ಸರ್ಕಾರ ಜಿಲ್ಲೆಯನ್ನು ರಾಜಕೀಯ ಉದ್ದೇಶಕ್ಕಾಗಿ ಬಳಸಿಕೊಂಡು ಜನತೆಗೆ ದ್ರೋಹವೆಸಗುತ್ತಿದೆ. ಮತ್ತೊಂದೆಡೆ ಇದನ್ನೇ ದಾಳವನ್ನಾಗಿ ಬಳಸುತ್ತಿರುವ ಜೆಡಿ(ಎಸ್)ನ ಜನಪ್ರತಿನಿಧಿಗಳು ಪ್ರಾಮಾಣಿಕವಾಗಿ ಜನರ ಸಮಸ್ಯೆಗಳಿಗೆ ಸ್ಪಂದಿಸುವ ಮತ್ತು ಸರ್ಕಾರದೊಂದಿಗೆ ಹೋರಾಡಿ ಸೂಕ್ತ ಸೌಲಭ್ಯಗಳನ್ನು ಜಿಲ್ಲೆಗೆ ತರುವ ಯಾವ ಪ್ರಯತ್ನಗಳನ್ನೂ ಮಾಡುತ್ತಿಲ್ಲ. ಇವರಿಬ್ಬರ ಜಗಳದಲ್ಲಿ ಜಿಲ್ಲೆಯ ಜನ ಅತಂತ್ರರಾಗಿದ್ದಾರೆ. ಜಿಲ್ಲೆಯ ಉಸ್ತುವಾರಿ ಸಚಿವರಾಗಿರುವ ವಿ.ಸೋಮಣ್ಣ ಅತಿಥಿಗಳಾಗಿದ್ದಾರೆ ಅಪರೂಪಕ್ಕೊಮ್ಮೆ ಜಿಲ್ಲೆಗೆ ಭೇಟಿ ನೀಡಿ ಜಿಲ್ಲೆಯನ್ನು ಸಿಂಗಾಪುರ ಮಾಡುತ್ತೇನೆಂದು ಒಂದು ಬಾರಿ ಹೇಳಿದರೆ, ಮತ್ತೊಂದು ಬಾರಿ ಈ ಜಿಲ್ಲೆಯ ಉಸ್ತುವಾರಿಯೇ ಬೇಡವೆನ್ನುತ್ತಾರೆ. ಮತ್ತೊಮ್ಮೆ ಅಧಿಕಾರಿಗಳ ಸಭೆಯಲ್ಲಿ ಜಿಲ್ಲೆಯ ಎಲ್ಲ ಸಮಸ್ಯೆಗಳಿಗೂ ನೀವೇ ಹೊಣೆಗಾರರು ಸರಿಯಾಗಿ ಕೆಲಸ ನಿರ್ವಹಿಸದಿದ್ದರೆ ಶಿಕ್ಷೆಗೆ ಗುರಿಪಡಿಸುತ್ತೇನೆ ಎನ್ನುತ್ತಾರೆ. ಇವರ ಮಾತುಗಳನ್ನು ಕೇಳಿದರೆ ಮಾನಸಿಕ ಸ್ಥಿಮಿತತೆಯನ್ನು ಕಳೆದುಕೊಂಡಂತಿದೆ. ಇಂತಹ ಉಸ್ತುವಾರಿ ಸಚಿವರನ್ನು ನಂಬಿಕೊಂಡಿರುವ ಜಿಲ್ಲೆಯ ಜನತೆಯ ಪಾಡು ಹೇಳತೀರದಾಗಿದೆ.

ಇಂತಹ ಬೀಕರ ಪರಿಸ್ಥಿತಿ ಜಿಲ್ಲೆಯಲ್ಲಿದ್ದರೂ ಅದನ್ನು ಸಮರ್ಥವಾಗಿ ಎದುರಿಸುವಲ್ಲಿ ಜಿಲ್ಲಾಡಳಿತ ಸಂಪೂರ್ಣ ವಿಫಲವಾಗಿದ್ದು, ಜನರು ಪ್ರತಿಭಟನೆಯ ಮಾರ್ಗವನ್ನು ಹಿಡಿದಿದ್ದಾರೆ. ಜನರ ಆಕ್ರೋಶ ಕಟ್ಟೆಯೊಡೆಯುವ ಮುನ್ನ ರಾಜ್ಯ ಸರ್ಕಾರ ಮತ್ತು ಜಿಲ್ಲಾಡಳಿತ ಎಚ್ಚೆತ್ತು ಜನರ ಸಂಕಷ್ಟಗಳಿಗೆ ಸ್ಪಂದಿಸಿದರೆ ಬಡವರ ಬದುಕು ಸ್ವಲ್ಪವಾದರೂ ಹಸನಾಗುತ್ತದೆ.

• ಎಚ್.ಆರ್.ನವೀನ್‌ಕುಮಾರ್

ಬರ ಪರಿಹಾರಕ್ಕೆ ಆಗ್ರಹ ಕೋಲಾರ - ಚಿಕ್ಕಬಳ್ಳಾಪುರಗಳಲ್ಲಿ ಪ್ರತಿಭಟನೆ

ರಾಜ್ಯದಲ್ಲಿ ಬರ ಪರಿಸ್ಥಿತಿಯಿಂದ ಜನ, ಜಾನುವಾರುಗಳು ತತ್ತರಿಸುವಂತಾಗಿರುವುದರಿಂದ ಸರ್ಕಾರ ಕಾಲಹರಣ ಮಾಡದೆ ಬರ ಪರಿಹಾರ ಕಾಮಗಾರಿಗಳನ್ನು ಸಮರೋಪಾದಿಯಲ್ಲಿ ಜಾರಿಗೊಳಿಸಲು ಒತ್ತಾಯಿಸಿ ಸಿಪಿಐ(ಎಂ)ಕೋಲಾರ ಜಿಲ್ಲಾ



ಸಮಿತಿಯಿಂದ ಏಪ್ರಿಲ್ 23 ರಂದು ಸೋಮವಾರ ಜಿಲ್ಲಾಧಿಕಾರಿಗಳ ಕಛೇರಿ ಮುಂದೆ ಪ್ರತಿಭಟನೆ ನಡೆಯಿತು.

ರಾಜ್ಯದ 123 ತಾಲೂಕುಗಳು ಬರಪೀಡಿತ ಪ್ರದೇಶಗಳು ಎಂದು ಘೋಷಣೆ ಮಾಡಿದ್ದರೂ ಇಲ್ಲಿಯ ತನಕ ಯಾವುದೇ ಬರ ಪರಿಹಾರ ಕಾಮಗಾರಿಗಳನ್ನು ಕೈಗೊಂಡಿಲ್ಲ. ಜಿಲ್ಲೆಯ ಬಹುತೇಕ ಎಲ್ಲಾ ಗ್ರಾಮಗಳು ಮತ್ತು ಪಟ್ಟಣ ಪ್ರದೇಶಗಲ್ಲಿ ಕುಡಿಯುವ ನೀರಿಗೆ ಜನ ಪರದಾಡುತ್ತಿದ್ದರೂ ಸರ್ಕಾರ ಸೂಕ್ತ ಕ್ರಮ ಕೈಗೋಳ್ಳದೇ ನಿರ್ಲಕ್ಷ್ಯ ವಹಿಸಿರುವುದನ್ನು ಮುಖಂಡರು ಖಂಡಿಸಿದರು.


ಕೊಳವೆಬಾವಿ ಕೊರೆದ ತಕ್ಷಣ ಪಂಪಸೆಟ್ ಮೋಟಾರ್ ಮತ್ತು ವಿದ್ಯುತ್ ಸಂಪರ್ಕವನ್ನು ಯಾವುದೇ ತಡ ಮಾಡದೇ ನೀಡಬೇಕೆಂದು ಆಗ್ರಹಿಸಿದರು. ಗ್ರಾಮೀಣ ಪ್ರದೇಶದ ಕೂಲಿಗಾರರು ಕೆಲಸವಿಲ್ಲದೆ ದೂರದ ಪ್ರದೇಶಗಳಿಗೆ ಗುಳೆ ಹೋಗುವಂತಹ ಪರಿಸ್ಥಿತಿ ಕಂಡು ಬರುತ್ತಿದ್ದು ಕೂಡಲೇ ಮಹಾತ್ಮಗಾಂಧಿ ರಾಷ್ಟ್ರೀಯ ಉದ್ಯೋಗ ಖಾತ್ರಿ ಯೋಜನೆಯಡಿ ಈ ಕೂಲಿಕಾರರಿಗೆ ಕೆಲಸ ನೀಡಿ, ಸಕಾಲಕ್ಕೆ ಕೂಲಿ ಹಣ ತಲುಪುವಂತೆ ಅಗತ್ಯ ಕ್ರಮ ಕೈಗೊಳ್ಳಬೇಕೆಂದು ಒತ್ತಾಯಿಸಲಾಯಿತು.

ಪ್ರತಿಭಟನೆಯ ನೇತೃತ್ವವನ್ನು ಸಿಪಿಐ(ಎಂ) ಜಿಲ್ಲಾ ಕಾರ್ಯದರ್ಶಿ ಗಾಂಧಿನಾರಾಯಣಸ್ವಾಮಿ, ಜಿಲ್ಲಾಕಾರ್ಯದರ್ಶಿ ಮಂಡಳಿ ಸದಸ್ಯರಾದ ಜಿ.ಅರ್ಜುನನ್, ಪಿ.ಆರ್. ಸೂರ್ಯ ನಾರಾಯಣ ಮುಂತಾದವರು ವಹಿಸಿದ್ದರು. ಮುಖಂಡರಾದ ಹೆಚ್.ಎಂ. ಯಲ್ಲಪ್ಪ, ಬಿ.ಎಸ್.ನಾಗರತ್ನ, ಆನಂದರಾಜ್, ವಿಜಯಕೃಷ್ಣ, ಅಂಬರೀಷ್, ನಾರಾಯಣರೆಡ್ಡಿ, ಕೃಷ್ಣೇಗೌಡ ಇದ್ದರು.

ಚಿಕ್ಕಬಳ್ಳಾಪುರದಲ್ಲಿ ಪ್ರತಿಭಟನೆ

ರಾಜ್ಯದಲ್ಲಿ ಬರಗಾಲದಿಂದ ಕುಡಿವ ನೀರಿನ ಸಮಸ್ಯೆ, ಮೇವಿನ ಕೊರತೆ ಹಾಗೂ ವಿದ್ಯುತ್ ಅಸಮರ್ಪಕ ಪೂರೈಕೆಯಿಂದ ನಾನಾ ಸಮಸ್ಯೆಗಳು ಕಾಡುತ್ತಿದ್ದರೂ ರಾಜ್ಯ ಬಿಜೆಪಿ ಸರ್ಕಾರ ಪರಿಹಾರ ನಿರ್ವಹಣೆಯಲ್ಲಿ ನಿರ್ಲಕ್ಷ್ಯ ವಹಿಸಿರುವದನ್ನು ಖಂಡಿಸಿ ಸಿಪಿಐ(ಎಂ)

ಪುಟ 4 ಕ್ಕೆ



ಭೂ, ಸ್ವಾಧೀನ ಕಾಯಿದೆ ತಿದ್ದುಪಡಿಯಿಂದ ಅಸಮಾನತೆ ಸೃಷ್ಟಿ: ಶ್ರೀರಾಮ ರೆಡ್ಡಿ ಕಳವಳ

ಸರ್ಕಾರಗಳು ತಮಗೆ ಮನಬಂದಂತೆ ಭೂ ಸ್ವಾಧೀನ ಕಾಯಿದೆಯನ್ನು ತಿದ್ದುಪಡಿ ಮಾಡಿಕೊಂಡು ರೈತರ ಭೂಮಿಗಳನ್ನು ಕಬಳಿಸುತ್ತಿರುವುದರಿಮದ ಅಸಮಾನತೆ ಸೃಷ್ಟಿಯಾಗುತ್ತಿದೆ ಎಂದು ಬಾಗೇಪಲ್ಲಿ ಕ್ಷೇತ್ರದ ಮಾಜಿ ಶಾಸಕ ಸಿಪಿಎಂ ಪಕ್ಷದ ರಾಜ್ಯ ಕಾರ್ಯದರ್ಶಿ ಜಿ.ವಿ. ಶ್ರೀರಾಮ ರೆಡ್ಡಿ ಕಳವಳ ವ್ಯಕ್ತಪಡಿಸಿದರು.

ಕರ್ನಾಟಕ ಪ್ರಾಂತರೈತ ಸಂಘ ಹಾಗೂ ಕೃಷಿ ಕೂಲಿ ಕಾರ್ಮಿಕರ ಸಂಘದಿಂದ ರಾಜ್ಯದ್ಯಂತ ಐದು ವಿಭಾಗಗಳಲ್ಲಿ ನಡೆಸುತ್ತಿರುವ ಭೂ ಹೋರಾಟ ಜಾಗೃತಿ ಜಾಥಾಕ್ಕೆ ಚಿಕ್ಕಬಳ್ಳಾಪುರದಲ್ಲಿ ಚಾಲನೆ ನೀಡಿ ಮಾತನಾಡಿದರು.

ಮಾಜಿ ಮುಖ್ಯಮಂತ್ರಿ ದೇವರಾಜ್ ಅರಸ್ ಅವರ ಅವಧಿಯಲ್ಲಿ ಕೃಷಿಯೇತರ ಉದ್ದೇಶಗಳಿಗೆ ರೈತರ ಕೃಷಿ ಭೂಮಿ ನೀಡಬಾರದು ಎಂದು ಭೂಸ್ವಾಧೀನ ಕಾಯಿದೆಯನ್ನು ತಿದ್ದುಪಡಿ ಮಾಡಿದ್ದರು. ಆದರೆ ಮಾಜಿ ಪ್ರಧಾನಿ ದೇವೆಗೌಡರು ಮುಖ್ಯಮಂತ್ರಿಯಾಗಿದ್ದಾಗ ಕೃಷಿಯೇತರರಿಗೆ ಕೃಷಿ ಭೂಮಿ ದೊರೆಯುವಂತೆ



ಕಾಯಿದೆಯನ್ನು ಸಡಿಲಗೊಳಿಸಿದರು. ಇಂದು 100 ಕ್ಕೆ ಕೇವಲ 80 ರಷ್ಟುಜನರ ಕೈಲಿ ಮಾತ್ರ ಭೂಮಿ ಇದೆ. ಭೂ ಮಾಲಿಕರ ಹಾವಳಿ ಹೆಚ್ಚಾಗಿದೆ. ಅಸಮಾನತೆಗೆ ಮೂಲ ಕಾರಣವಾಗುತ್ತಿದೆ ಎಂದು ಕಳವಳ ವ್ಯಕ್ತಪಡಿಸಿದರು.

ಪ್ರಾಂತರೈತ ಸಂಘದ ರಾಜ್ಯ ಅಧ್ಯಕ್ಷರಾದ ಮಾರುತಿ ಮಾನ್ಪಡೆ ಮಾತನಾಡಿ, ಸಮರ್ಪಕ ಭೂ ಸುಧಾರಣ ಕಾಯಿದೆ ಜಾರಿಯಾಗಬೇಕು. ಸರ್ಕಾರಗಳ ಭೂ ಕಬಳಿಕೆ ಬಗ್ಗೆ ಜಾಗೃತಿ ಮೂಡಿಸುವ ಸಲುವಾಗಿ ರಾಜ್ಯದ ಐದು ಭಾಗಗಳಿಂದ ಭೂ ಹೋರಾಟದ ಜಾಥಾ ನಡೆಸಲಾಗುತ್ತಿದೆ. ಇಂದು ಚಿಕ್ಕಬಳ್ಳಾಪುರದಲ್ಲಿ ಚಾಲನೆಪಡೆದುಕೊಂಡಿರುವ ಜಾಥ ಜಿಲ್ಲೆಯ ಬಳಿಕ ಬೆಂಗಳೂರು ಗ್ರಾಮಾಂತರ ಹಾಗೂ ಕೋಲಾರ ಜಿಲ್ಲೆಗಳಲ್ಲಿ ಸಂಚರಿಸಲಿದೆ ಎಂದರು. ಜಾಥಾಗಳ ಕೊನೆಯಲ್ಲಿ ಮೇ. 21 ರಂದು ಬೆಂಗಳೂರಿನ ಸ್ವಾತಂತ್ರ್ಯ ಉದ್ಯಾನವನದಲ್ಲಿ ಅನಿರ್ಧಿಷ್ಠ ಧರಣಿ ಆಯೋಜಿಸಲಾಗಿದ್ದು, ಎಲ್ಲ ಜಾಥಗಳು ಅಲ್ಲಿಗೆ ಬಂದು ಸೇರಲಿವೆ ಎಂದು ತಿಳಿಸಿದರು. ಚನ್ನರಾಯಪ್ಪ, ಗೋಪಿನಾಥ್, ನಿತ್ಯಾನಂದ ಸ್ವಾಮಿ, ಚಂದ್ರಕಾಂತ್, ಸೂರ್ಯನಾರಾಯಣ ಹಾಜರಿದ್ದರು.

ವೀರ ತೆಲಂಗಾಣ.....

ಪುಟ 2 ರಿಂದ

ಬಗೆಗಿನ ಈ ಪುಸ್ತಕಕ್ಕೆ ಇಂದಿನ ಕರ್ನಾಟಕದ ಸಂದರ್ಭದಲ್ಲಿ ಮಹತ್ವ ಏನು ? ಯಾರು ಇದನ್ನು ಯಾತಕ್ಕಾಗಿ ಓದಬೇಕು? ನವ-ಉದಾರವಾದಿ ನೀತಿಗಳ ದಾಳಿಯಿಂದ ರೈತ ಕೃಷಿಗೆ ಉಳಿಗಾಲವಿಲ್ಲ ಎಂಬ ಪರಿಸ್ಥಿತಿಯಲ್ಲಿ, ಅದರ ಚಾರಿತ್ರಿಕ ವಿಶ್ಲೇಷಣೆ, ಅದಕ್ಕೆ ಪ್ರತಿರೋಧ ಒಡ್ಡಲು ಬೇಕಾದ ಚಳುವಳಿಯ ಸೈದ್ಧಾಂತಿಕ ಸಂಘಟನಾ ಅಂಶಗಳ ಚಿಂತನ-ಮಂಥನಕ್ಕೆ ಮೂಲವಸ್ತುವಾಗಿ, ಚಾರಿತ್ರಿಕ ಸ್ಫೂರ್ತಿಯ ಮೂಲವಾಗಿ, ರೈತರು ಕೃಷಿ ಕೂಲಿಕಾರರು, ರೈತ ಮತ್ತು ಕೃಷಿ ಕೂಲಿಕಾರರ ಚಳುವಳಿಯ ಕಾರ್ಯಕರ್ತರು ಮತ್ತು ನಾಯಕರು ಓದಲೇಬೇಕಾದ ಪುಸ್ತಕ. ಇದು ಕರ್ನಾಟಕದ ರೈತ ಮತ್ತು ಕೃಷಿ ಕೂಲಿಕಾರರ ಚಳುವಳಿಯನ್ನು ಪುನಶ್ಚೇತನಗೊಳಿಸುವಲ್ಲಿ ಮಹತ್ವದ ಪಾತ್ರ ವಹಿಸಬಲ್ಲುದು.

'ವೀರ ತೆಲಂಗಾಣ' ಭಾರತದ ಆಧುನಿಕ ಚರಿತ್ರೆಯ ಮರೆತ ಮತ್ತು ಮರೆಸಲಾದ ಒಂದು ಪ್ರಮುಖ ಅಧ್ಯಾಯ. ಈ ಚಳುವಳಿಯ ಸಾಮಾಜಿಕ ಆರ್ಥಿಕ ಸಾಂಸ್ಕೃತಿಕ ರಾಜಕೀಯ ಅಂಶ ಮತ್ತು ಪರಿಣಾಮಗಳ ಬಗ್ಗೆ ಹೊಸ ಆಕರಗಳ ಸಂಶೋಧನೆ, ಇರುವ ಆಕರಗಳ ವಿವರವಾದ ಅಧ್ಯಯನ ಇಂದಿನ ತುರ್ತು ಅಗತ್ಯ. ಈ ಪುಸ್ತಕ ಇಂತಹ ವಿದ್ಯಾರ್ಥಿಗಳು ಮತ್ತು ಸಂಶೋಧಕರಿಗೆ ಅಗತ್ಯ ಹಿನ್ನೆಲೆ ಮತ್ತು ಮೂಲ ಮಾಹಿತಿ ಕೊಡಬಲ್ಲುದು. ಆ ಮೂಲಕ ನಿರ್ಲಕ್ಷ್ಯಕ್ಕೆ ಗುರಿಯಾಗಿರುವ ರೈತರ ಮತ್ತು ದುಡಿಯುವ ಜನರ ಇತಿಹಾಸವನ್ನು ಕಟ್ಟಿಕೊಡುವ ಕಾಯಕದಲ್ಲಿ ಮುನ್ನಡೆ ತರುವಲ್ಲಿ ನೆರವಾಗಬಲ್ಲುದು. ಎಡ ಮತ್ತು ಕಮ್ಯುನಿಸ್ಟ್ ಚಳುವಳಿಯ ಚರಿತ್ರೆಯ ವಿದ್ಯಾರ್ಥಿಗಳು ಮತ್ತು ಸಂಶೋಧಕರಿಗಂತೂ ಇದು ಅನಿವಾರ್ಯ ಓದು.

ಭೂಮಿ ಮತ್ತು ಕಾರ್ಷಕ ಪ್ರಶ್ನೆ, ಪ್ರಜಾಸತ್ತೆಯ ಉಳಿವು-ಬೆಳವಣಿಗೆ ಜತೆ ತಳುಕು ಹಾಕಿಕೊಂಡ ಪ್ರಶ್ನೆ. ಆದರೆ ಇದರ ಬಗ್ಗೆ ಪ್ರಜಾಸತ್ತಾತ್ಮಕ ಮೌಲ್ಯಗಳನ್ನು ಒಪ್ಪಿಕೊಂಡಿರುವವರಲ್ಲೂ ಗೊಂದಲವಿದೆ. ಪ್ರಜಾಸತ್ತಾತ್ಮಕ ಮೌಲ್ಯಗಳು, ಸಂಸ್ಥೆಗಳು ತೀವ್ರ ದಾಳಿ ಮತ್ತು ಸವಾಲುಗಳನ್ನು ಎದುರಿಸುತ್ತಿರುವ ಹಿನ್ನೆಲೆಯಲ್ಲಿ, ಮೂರು ಸಾವಿರ ಹಳ್ಳಿಗಳಲ್ಲಿ ಹಲವು ತಿಂಗಳುಗಳ ಕಾಲ 'ಜನತಾ ರಾಜ್ಯ' ಸ್ಥಾಪಿಸಿದ, ಆ ಮೇಲೆ ರಚಿಸಲಾದ ನಮ್ಮ ಸಂವಿಧಾನದ ಮೂಲಾಶಯಗಳನ್ನು ಮೊದಲೇ ರೂಪಿಸಿ ಜಾರಿಗೆ ತಂದ 'ವೀರ ತೆಲಂಗಾಣ'ದ ಅಧ್ಯಯನ, ಪ್ರಜಾಸತ್ತೆಯಲ್ಲಿ ನಂಬಿಕೆ ಇರುವ ಎಲ್ಲರಿಗೂ ಅವಶ್ಯ ಓದು.

ಎಡ ಚಳುವಳಿಯ ಕಾರ್ಯಕರ್ತರಿಗೆ ಮತ್ತು ನಾಯಕರಿಗೆ ಈ ಪುಸ್ತಕ ಅತ್ಯಗತ್ಯ. ಸ್ವತಂತ್ರ ಭಾರತದ ಎಡ ಚಳುವಳಿಯ ಒಳಗಿನ ಪ್ರಮುಖ ಸೈದ್ಧಾಂತಿಕ ಚರ್ಚೆಗಳ ಅಂಶಗಳನ್ನು ವಿಷದೀಕರಿಸಿ ಸರಿಯಾದ ಸ್ಪಷ್ಟ ನಿಲುವನ್ನು ಮಂಡಿಸುತ್ತದೆ ಈ ಪುಸ್ತಕ. ಕಮ್ಯುನಿಸ್ಟ್ ಚಳುವಳಿಯಲ್ಲಿ ಆದ ಪ್ರಮುಖ ವಿಭಜನೆಗೆ ಕಾರಣಗಳನ್ನು ಅರ್ಥ ಮಾಡಿಕೊಳ್ಳುವುದಕ್ಕೆ ಕೂಡ ಇದು ಪ್ರಮುಖ ಆಕರ.

ಇಂತಹ ಒಂದು ಮಹತ್ವ ಪುಸ್ತಕದ ಭಾಷಾಂತರ ಕೆ.ಎಸ್. ವಿಮಲ, ಟಿ. ಸುರೇಂದ್ರ ರಾವ್, ಎನ್.ಕೆ. ವಸಂತರಾಜ ಮತ್ತು ವೇದರಾಜ ಅವರದ್ದು. ಪುಸ್ತಕದ ವಿನ್ಯಾಸ ರಾಮು.ಎಂ.

ಬರ ಪರಿಹಾರಕ್ಕೆ ಆಗ್ರಹ ಕೋಲಾರ - ಚಿಕ್ಕಬಳ್ಳಾಪುರಗಳಲ್ಲಿ ಪ್ರತಿಭಟನೆ

ಪುಟ 4 ಕ್ಕೆ

ಚಿಕ್ಕಬಳ್ಳಾಪುರ ಜಿಲ್ಲಾ ಸಮಿತಿಯ ನೇತೃತ್ವದಲ್ಲಿ ಚಿಕ್ಕಬಳ್ಳಾಪುರ ಜಿಲ್ಲಾಧಿಕಾರಿ ಕಛೇರಿ ಮುಂದೆ ಪ್ರತಿಭಟನೆ ನಡೆಸಲಾಯಿತು.

ನಗರದ ಪ್ರವಾಸಿ ಮಂದಿರದಲ್ಲಿ ಪ್ರತಿಭಟನಾ ಮೆರವಣಿಗೆ ಪ್ರಾರಂಭಿಸಿ, ಡಿಸಿ ಕಛೇರಿಗೆ ಮುತ್ತಿಗೆ ಹಾಕಿದ ಪ್ರತಿಭಟನಾಕಾರರು ಸರ್ಕಾರದ ವಿರುದ್ಧ ಘೋಷಣೆಗಳನ್ನು ಕೂಗಿದರು. ತ್ವರಿತ ಪರಿಹಾರ ಕಾಮಗಾರಿಗಳನ್ನುಸಮ ರೋಪಾದಿಯಲ್ಲಿ ಕೈಗೊಳ್ಳ ಬೇಕೆನ್ನುವುದರ ಜತೆಗೆ ಬಗಪರಿಹಾರಕ್ಕೆ ಸಂಬಂಧಿಸಿ ಸಮಗ್ರ ಕ್ರಮವಹಿಸಬೇಕೆಂದು ಆಗ್ರಹಿಸಲಾಯಿತು. ಸಿಪಿಐ(ಎಂ) ಜಿಲ್ಲಾ ಕಾರ್ಯದರ್ಶಿ ಜಿ.ವಿ. ಶ್ರೀರಾಮರೆಡ್ಡಿ ಮಾತನಾಡಿ, ರಾಜ್ಯದ 123 ತಾಲೂಕುಗಳಲ್ಲಿ ಭೀಕರ ಬರಗಾಲದ ಪರಿಸ್ಥಿತಿ ಇದೆ. ಇಂತಹ ಪರಿಸ್ಥಿತಿ ನಡುವೆಯೂ ಪರ್ಯಾಯ ವ್ಯವಸ್ಥೆ ಕೈಗೊಳ್ಳಲು ಅಸಮರ್ಪಕ ವಿದ್ಯುತ್ ಸರಬರಾಜು ಪೆಟ್ಟು ಕೊಡುತ್ತಿದೆ.

ಜಿಲ್ಲೆಯಲ್ಲಿ ಉದ್ಯೋಗ ಖಾತ್ರಿ ಯೋಜನೆ ಸದುಪಯೋಗಪಡಿಸಿಕೊಂಡು ಅಭಿವೃದ್ಧಿ ಕೆಲಸಗಳನ್ನು ಮಾಡುವುದರ ಬದಲು ವ್ಯಾಪಕ ಭ್ರಷ್ಟಾಚಾರ ನಡೆಸಿ ಹಣ ಲೂಟಿ ಮಾಡಲಾಗುತ್ತಿದೆ. ಇದರಿಂದ ಅನೇಕ ಜನರಿಗೆ ಉದ್ಯೋಗವೂ ಸಿಗುತ್ತಿಲ್ಲ. ಪ್ರಮುಖ ಕಾಮಗಾರಿಗಳಲ್ಲಿ ಗೋಲ್‌ಮಾಲ್ ನಡೆಯುತ್ತಿದೆ. ಇದರಿಂದ ಜನರಿಗೆ ಪ್ರಯೋಜನವಿಲ್ಲದಂತಾಗಿರುವುದರ ನಡುವೆ ಸರ್ಕಾರದ ಹಣವೂ ವ್ಯರ್ಥವಾಗುತ್ತಿದೆ. ಇಷ್ಟಾದರೂ ಅಧಿಕಾರಿಗಳು ಗಮನಹರಿಸುತ್ತಿಲ್ಲ ಎಂದು ತೀವ್ರವಾಗಿ ಟೀಕಿಸಿದರು.

ಜಿಲ್ಲಾಧಿಕಾರಿ ಮೂಲಕ ಮುಖ್ಯಮಂತ್ರಿಗಳಿಗೆ ಮನವಿ ಪತ್ರ ಸಲ್ಲಿಸಲಾಯಿತು. ಜಿಲ್ಲಾ ಪಂಚಾಯತ್ ಮಾಜಿ ಉಪಾಧ್ಯಕ್ಷೆ ಸಾವಿತ್ರಮ್ಮ, ಸದಸ್ಯೆ ನಾರಾಯಣಮ್ಮ, ಚನ್ನರಾಯಪ್ಪ, ಮುನಿವೆಂಕಟಪ್ಪ, ಗೋಪಿನಾಥ್, ಚನ್ನರಾಯಪ್ಪ, ಮುನಿವೆಂಕಟಪ್ಪ, ಗೋಪಿನಾಥ್, ಬಿ.ಎನ್. ಮುನಿಕೃಷ್ಣಪ್ಪ, ಕೃಷ್ಣ ಭಾಗವಹಿಸಿದ್ದರು.

ಚಿಕ್ಕಬಳ್ಳಾಪುರ ಸಿಪಿಐ(ಎಂ) ಜಿಲ್ಲಾ ಕಾರ್ಯದರ್ಶಿಯಾಗಿ ಪಿ. ಮುನಿವೆಂಕಟಪ್ಪ ಆಯ್ಕೆ

ಜಿ.ವಿ. ಶ್ರೀರಾಮರೆಡ್ಡಿಯವರು ಸಿಪಿಐ(ಎಂ) ಕರ್ನಾಟಕ ರಾಜ್ಯ ಸಮಿತಿಯ ಕಾರ್ಯದಶಿಯಾಗಿ ಆಯ್ಕೆಯಾಗಿರುವ ಹಿನ್ನೆಲೆಯಲ್ಲಿ ಚಿಕ್ಕಬಳ್ಳಾಪುರ ಜಿಲ್ಲಾ ಸಮಿತಿಯ ಕಾರ್ಯದರ್ಶಿ ಸ್ಥಾನದಿಂದ ಬಿಡುಗಡೆಗೊಳಿಸಿ ಪಕ್ಷದ ರಾಜ್ಯ ಸಮಿತಿ ಸದಸ್ಯರಾಗಿರುವ ಕಾ. ಪಿ. ಮುನಿವೆಂಕಟಪ್ಪ ರವರನ್ನ ನೂತನ ಕಾರ್ಯದರ್ಶಿಗಳಾಗಿ ಅಯ್ಕೆ ಮಾಡಲಾಗಿದೆ. ನೂತನ ಕಾರ್ಯದರ್ಶಿಯವರಿಗೆ ಜನಶಕ್ತಿ ಶುಭಾಶಯಗಳು

ಜನಶಕ್ತಿ
ಕನ್ನಡ ವಾರಪತ್ರಿಕೆ

'ಭಾರತದ ಕ್ರಾಂತಿಯ ದಾರಿ ರೂಪಿಸಿದ ರಥಸಾರಥಿ ಕಾಂ ಪಿ. ಸುಂದರಯ್ಯ'

ಕಾಂ. ಪಿ.ಎಸ್. ಜನ್ಮ ಶತಮಾನೋತ್ಸವ ವರ್ಷಾಚರಣೆ ಆರಂಭ

ಚಿಕ್ಕಬಳ್ಳಾಪುರದಲ್ಲಿ ಉತ್ಸಾಹದ ಉದ್ಘಾಟನಾ ಸಮಾರಂಭ

'ಅನ್ಯಾಯ, ಅಸಮಾನತೆಗಳಿಂದ ಮುಕ್ತವಾದ ಒಂದು ನ್ಯಾಯಪರ ಸಮ ಸಮಾಜ ನಿರ್ಮಾಣದ ಕನಸು ಹೊತ್ತವರಿಗೆ ಸಮಾಜ ಬದಲಾವಣೆಯ ಕ್ರಾಂತಿಕಾರಿ ಆಶಯಗಳನ್ನು ಪ್ರೀತಿಸುವ ಮನಸುಗಳಿಗೆ ಕಾಮ್ರೇಡ್ ಪಿ. ಸುಂದರಯ್ಯ ಎಂಬ ಹೆಸರೇ ರೋಮಾಂಚನ ಉಂಟು ಮಾಡುವಂತಹದ್ದು. ಭಾರತದ ಕಮ್ಯುನಿಸ್ಟ್ ಚಳುವಳಿಯ ದಿಗ್ಗಜರಲ್ಲಿ ಒಬ್ಬರು, ಚಾರಿತ್ರಿಕ ತೆಲಂಗಾಣ ಶಸಸ್ತ್ರ ಹೋರಾಟದ ರೂವಾರಿಗಳೂ, ಸಿಪಿಐ(ಎಂ) ಪಕ್ಷದ ಪ್ರಥಮ ಪ್ರಧಾನ ಕಾರ್ಯದರ್ಶಿಗಳೂ ಆದ ಪುಚ್ಚಲಪಲ್ಲಿ ಸುಂದರಯ್ಯನವರ ಜನ್ಮ ಶತಮಾನೋತ್ಸವವನ್ನು ವರ್ಷವಿಡೀ ಆಚರಿಸಬೇಕೆಂಬ ಸಿಪಿಐ(ಎಂ)ಕೋಝಿಕ್ಕೋಡ್ ಮಹಾಧಿವೇಶನದ ಕರೆಯಂತೆ, ಕರ್ನಾಟಕದಲ್ಲಿ ಈ ಆಚರಣೆಯ ಉದ್ಘಾಟನಾ ಸಮಾರಂಭವು ಸುಂದರಯ್ಯನವರ ಜನ್ಮದಿನವಾದ ಮೇ 1 ರಂದು ಚಿಕ್ಕಬಳ್ಳಾಪುರದಲ್ಲಿ ನಡೆಯಿತು. ಒಂದು ವರದಿ.

ಆರ್. ರಾಮಕೃಷ್ಣ

ಸಿಪಿಐ(ಎಂ) ನ ರಾಜ್ಯ ಕಾರ್ಯದರ್ಶಿ ಮಂಡಳಿ ಸದಸ್ಯರೂ, ಸಿಐಟಿಯು ವಿನ ರಾಜ್ಯ ಅಧ್ಯಕ್ಷರೂ ಆದ ಕಾಂ. ವಿಜೆಕೆ ನಾಯರ್‌ರವರು ಅಧ್ಯಕ್ಷತೆ ವಹಿಸಿದ್ದ ಸಮಾರಂಭದಲ್ಲಿ ಕಾರ್ಯಕ್ರಮವನ್ನು ಉದ್ಘಾಟಿಸಿದ್ದು ಸಿಪಿಐ(ಎಂ)ನ ರಾಜ್ಯ ಕಾರ್ಯದರ್ಶಿ ಜಿ.ವಿ.ಶ್ರೀರಾಮರೆಡ್ಡಿ. ಮುಖ್ಯ ಅತಿಥಿಗಳಾಗಿ ಸಿಪಿಐ(ಎಂ) ಆಂಧ್ರ ಪ್ರದೇಶ ರಾಜ್ಯ ಸಮಿತಿ ಸದಸ್ಯರೂ, ಅನಂತಪುರ ಜಿಲ್ಲಾ ಸಮಿತಿ ಕಾರ್ಯದರ್ಶಿಗಳೂ ಆದ ಕಾಂ. ಓಬಲ ಕೊಂಡಾರೆಡ್ಡಿ , ಸಿಪಿಐ(ಎಂ) ರಾಜ್ಯ ಕಾರ್ಯದರ್ಶಿ ಮಂಡಳಿ ಸದಸ್ಯರಾದ ಕಾಂ. ಜಿ.ಎನ್. ನಾಗರಾಜ್ ಮುಂತಾದವರು ಭಾಗವಹಿಸಿ ಮಾತನಾಡಿದರು.

ಕಾರ್ಯಕರ್ತರನ್ನು ಸೆಳೆದ ಅಯಸ್ಕಾಂತ ಪಿ.ಎಸ್. – ಜೆವಿಎಸ್

ಸಾವಿರಾರು ಕಾರ್ಯಕರ್ತರನ್ನು ಅಯಸ್ಕಾಂತದಂತೆ ತಮ್ಮತ್ತ ಸೆಳೆದ ಮೇರು ವ್ಯಕ್ತಿತ್ವ ಕಾಂ.ಪಿ. ಸುಂದರಯ್ಯನವರದ್ದು. ಅಸಮಾನ ತ್ಯಾಗ ಧೀರೋದ್ದಾತ್ತ ಹೋರಾಟಗಳ ನೇತಾರ ಅವರು. ಭಾರತದ ಕ್ರಾಂತಿಯ ದಾರಿ ರೂಪಿಸಿದ ರಥಸಾರಥಿ ಅವರು. ಅವರು ಶಿಸ್ತು, ಸರಳತೆಯ ಪ್ರತೀಕ ಎಂದು ಸಮಾಂಭ ಉದ್ಘಾಟಿಸಿದ ಜಿ.ವಿ.ಶ್ರೀರಾಮರೆಡ್ಡಿ ಹೇಳಿದರು.


ಆಂಧ್ರ ಪ್ರದೇಶದ ನಲ್ಲೂರು ಜಿಲ್ಲೆಯ ಜಮೀನ್ದಾರಿ ಕುಟುಂಬದಲ್ಲಿ ಹುಟ್ಟಿದ ಸುಂದರಯ್ಯ ಜಮೀನ್ದಾರಿ ವ್ಯವಸ್ಥೆಯ ವಿರುದ್ಧವೇ ಸಿಡಿದೆದ್ದವರು. ಅವರ ಮೂಲ ಹೆಸರು ಸುಂದರ ರಾಮರೆಡ್ಡಿ. ಜಾತಿ ಸೂಚಕವಾದ ಆ ಹೆಸರು ಬೇಡವೆಂದು ತಮ್ಮ ಹೆಸರನ್ನೇ ಮಾರ್ಪಡಿಸಿಕೊಂಡು 'ಸುಂದರಯ್ಯ' ಆದವರು ಅವರು. ತಮ್ಮ ಬಾಲ್ಯದಲ್ಲೇ ಅವರು ತಮ್ಮ ಗ್ರಾಮದಲ್ಲಿ ಇದ್ದ ಅಸ್ಪೃಶ್ಯತೆ ವಿರುದ್ದ ಹೋರಾಟ ನಡೆಸಿದರು. 1920ರ ದಶಕದಲ್ಲೇ ವಿದ್ಯಾರ್ಥಿಯಾಗಿದ್ದಾಗಲೇ ಸ್ವಾತಂತ್ರ್ಯ ಚಳುವಳಿಗೆ ಧುಮುಕಿದ ಅವರು ಕಮ್ಯುನಿಸ್ಟ್ ಪಕ್ಷವನ್ನು ಸೇರಿ 22 ನೇ ವಯಸ್ಸಿಗೇ ಸಿಪಿಐ ನ ಕೇಂದ್ರ ಸಮಿತಿ ಸದಸ್ಯರಾದರು. ದೇಶದ ಅಂದಿನ ಕಮ್ಯುನಿಸ್ಟ್ ಚಳುವಳಿಯ ಕೇಂದ್ರವಾಗಿದ್ದ ಬಾಂಬೆಯಲ್ಲಿ ಚಳುವಳಿಯನ್ನು ಮುನ್ನಡೆಸುವುದಕ್ಕೆ ಅಗತ್ಯವಾಗಿದ್ದ ಹಣಕಾಸು ಹೊಂದಿಸಲು ತಮ್ಮ ಆಸ್ತಿಯನ್ನು ಮಾರಿ ಪಕ್ಷಕ್ಕೆ ಹಣವನ್ನು ಕೊಡಬೇಕೆಂದು ಪಕ್ಷ ನಿರ್ಧರಿಸಿದಾಗ ತಮ್ಮ ಪಾಲಿನ ಸಮಸ್ತ ಆಸ್ತಿಯನ್ನು ಮಾರಿ ಪಕ್ಷಕ್ಕೆ ನೀಡಿದರು. ಮಕ್ಕಳ ಲಾಲನೆ ಪಾಲನೆಯ



ಕೆಲಸಗಳಿಂದಾಗಿ ಚಳುವಳಿಯ ಕೆಲಸಗಳಿಗೆ ಯಾವುದೇ ಅಡ್ಡಿಯಾಗಬಾರದು ಎಂಬ ಉದ್ದೇಶದಿಂದ ಪತ್ನಿ ಲೀಲಾ ಅವರನ್ನು ಮದುವೆಯಾಗುವಾಗ ತಮಗೆ ಮಕ್ಕಳಾಗುವುದು ಬೇಡವೆಂದು ಒಪ್ಪಿದರೆ ಮಾತ್ರ ಮದುವೆಯಾಗೋಣ ಎಂಬ ಷರತ್ತಿನೊಂದಿಗೆ ಮದುವೆಯಾದರು. ಹಾಗೆಯೇ ಅದನ್ನು ಪಾಲಿಸಿದರು.

ಪಾಳೇಗಾರಿ ವ್ಯವಸ್ಥೆಯ ವಿರುದ್ಧ

ಕಾಂಗ್ರೆಸ್ ಪಕ್ಷ ಸಾಮ್ರಾಜ್ಯಶಾಹಿ ಬ್ರೀಟೀಷರ ವಿರುದ್ದ ಮಾತ್ರವೇ ತನ್ನ ಹೋರಾಟವನ್ನು ಸೀಮಿತಗೊಳಿಸಿಕೊಂಡಿದ್ದಾಗ ಸುಂದರಯ್ಯರಂತಹ ನೇತಾರರ ನಾಯಕತ್ವದಲ್ಲಿ ಕಮ್ಯುನಿಸ್ಟ್ ಪಕ್ಷ ಬ್ರೀಟೀಷ್ ಸಾಮ್ರಾಜ್ಯಶಾಹಿಗಳ ವಿರುದ್ದ ಹಾಗೂ ಪಾಳೇಯಗಾರಿ ವ್ಯವಸ್ಥೆಯ ವಿರುದ್ದ ಹಾಗೂ ಕಾರ್ಮಿಕ ವರ್ಗದ ಹಕ್ಕುಗಳಿಗಾಗಿ ಬಂಡವಾಳಶಾಹಿ ವಿರುದ್ದ ಧೀರೋದ್ದಾತ್ತವಾದ ಹೋರಾಟವನ್ನು ನಡೆಸಿತು. ಭೂಮಾಲಕರ ನಿರ್ದಯ ಶೋಷಣೆ, ಅಮಾನುಷ ದೌರ್ಜನ್ಯಗಳ ವಿರುದ್ದ ಹಾಗೂ



ಅದನ್ನು ರಕ್ಷಿಸುತ್ತಿದ್ದ ಹೈದರಾಬಾದಿನ ನಿಜಾಮನ ಪೋಲಿಸು, ಸೈನ್ಯದ ವಿರುದ್ದ 1946 ರಲ್ಲಿ ಆರಂಭವಾದ ತೆಲಂಗಾಣ ರೈತರ ಶಸಸ್ತ್ರ ಕ್ರಾಂತಿಕಾರಿ ಹೋರಾಟ ಮುಂದೆ ಐತಿಹಾಸಿಕ ಚಳುವಳಿಗಳಾದ ಕೇರಳದ ಪುನ್ನಪ್ರ ವಯಲಾರ್, ಬಂಗಾಳದ ತೇಭಾಗ, ಅಸ್ಸಾಂನ ಸುರ್ಮಾ ಕಣಿವೆ ಹೋರಾಟ, ಮಹಾರಾಷ್ಟ್ರದ ವಾರ್ಲಿ ಆದಿವಾಸಿಗಳ ಬಂಡಾಯ ಮುಂತಾದವುಗಳಿಗೆ ಸ್ಫೂರ್ತಿಯಾಯಿತು. ಈ ಹೋರಾಟಗಳು ಭೂಮಿಯ ಪ್ರಶ್ನೆಯನ್ನು ರಾಷ್ಟ್ರೀಯ ಅಜೆಂಡಾ ಆಗಿ ತಂದು ನಿಲ್ಲಿಸಿದವು. ಎಂದು ಶ್ರೀರಾಮ ರೆಡ್ಡಿಯವರು ಹೇಳಿದರು.

'ವೀರ ತೆಲಂಗಾಣ' ಪುಸ್ತಕ ಬಿಡುಗಡೆ

ಚಾರಿತ್ರಿಕ ತೆಲಂಗಾಣ ಹೋರಾಟದ ನೇರ ಅನುಭವದ ದಾಖಲೆಯಾಗಿ ಚಳುವಳಿಯ ಕುರಿತ ಆಳವಾದ ವಿಶ್ಲೇಷಣೆ, ಅದರಿಂದ ಕಲಿಯಬೇಕಾದ ಪಾಠಗಳನ್ನು ಕುರಿತ ಪಿ. ಸುಂದರಯ್ಯನವರು ಬರೆದ ಪುಸ್ತಕದ ಕನ್ನಡ ಅವತರಣಿಕೆಯಾದ 'ವೀರ ತೆಲಂಗಾಣ' ಪುಸ್ತಕವನ್ನು ಇದೇ ಸಮಾರಂಭದಲ್ಲಿ ಬಿಡುಗಡೆ ಮಾಡಲಾಯಿತು. ಕ್ರಿಯಾ ಪ್ರಕಾಶನದ 'ಓಬಲ ಕೊಂಡಾರೆಡ್ಡಿ'ಯವರು ಈ ಪುಸ್ತಕವನ್ನು ಬಿಡುಗಡೆ ಮಾಡಿದರು.

125 ಮುಖ ಬೆಲೆಯ ಪುಸಕ್ತವನ್ನು ಬಿಡುಗಡೆ ಸಂದರ್ಭದ ವಿಶೇಷ ರಿಯಾಯಿತಿ ಬೆಲೆಯಲ್ಲಿ ಅಂದರೆ 80 ರೂಪಾಯಿಗಳಿಗೆ ಮಾರಾಟ ಮಾಡಲಾಯಿತು. ಪಕ್ಷದ ಸದಸ್ಯರು, ಹಿತೈಷಿಗಳು, ಆಸಕ್ತಿಯಿಂದ ಪುಸ್ತಕಗಳನ್ನು ಖರೀದಿಸಿದರು.

ಅಸ್ಪೃಶ್ಯತೆ–ಸಾಮಾಜಿಕ ಅಸಮಾನತೆಗಳ ವಿರುದ್ದವೂ ಪ್ರಖರ ಹೋರಾಟ–

– ಓಬಲ ಕೊಂಡಾರೆಡ್ಡಿ

ಪಿ.ಸುಂದರಯ್ಯನವರು ಚಾರಿತ್ರಿಕ ತೆಲಂಗಾಣ ಹೋರಾಟ ಅಗ್ರಗಣ್ಯ ನಾಯಕರು. ತೆಲಂಗಾಣ ಭೂ ಹೋರಾಟವಾದರೂ ಅದು ಕೇವಲ ಭೂಮಿ ಹೋರಾಟವಾಗಿರಲಿಲ್ಲ. ಈ ಹೋರಾಟಕ್ಕೆ ಬೆಸೆದುಕೊಂಡಂತೆ ಅಸ್ಪೃಶ್ಯತೆ, ಜಾತಿ ತಾರತಮ್ಯ ವಿರೋಧಿ ಮನೋಭಾವವನ್ನೂ ಚಳುವಳಿಯ ಕಾರ್ಯಕರ್ತರಲ್ಲಿ ರೂಪಿಸಿದ್ದರು. ಅಲ್ಲಿ ಭೂಮಿ ಹೋರಾಟದ ಜೊತೆಜೊತೆಗೇ ಜಾತಿ ತಾರತಮ್ಯ ಅಸ್ಪೃಶ್ಯತೆಗಳ ವಿರುದ್ಧವೂ ಹೋರಾಟ ನಡೆಯುತ್ತಿತ್ತು.

ಈಗ ನಾವು ಭೂಮಿಗಾಗಿ, ಹೋರಾಡುತ್ತಲೇ ಅಸ್ಪೃಶ್ಯತೆ, ಜಾತೀಯತೆ ಅನ್ಯಾಯಗಳ ವಿರುದ್ಧ ಹೋರಾಟ ನಡೆಸುವುದೇ ಪಿ.ಸುಂದರಯ್ಯನವರಿಗೆ ಸಲ್ಲಿಸುವ ಗೌರವ ಎಂದು ಓಬಳ ಕೊಂಡಾರೆಡ್ಡಿಯವರು ಹೇಳಿದರು.

ನಮ್ಮ ಸಮಾಜದಲ್ಲಿ ಇಂದಿಗೂ ಜಾತಿಯತೆ, ಅಸ್ಪ್ರಶ್ಯತೆಗಳು ಮುಂದುವರಿದಿವೆ. ದೇವಸ್ಥಾನ ಪ್ರವೇಶ ನಿರಾಕರಣೆ, ಹೋಟೆಲ್‌ಗಳಲ್ಲಿ ಎರಡು ಲೋಟದ ಪದ್ಧತಿ ಈಗಲೂ ವ್ಯಾಪಕವಾಗಿವೆ. ಸುಂದರಯ್ಯನವರ ಹೋರಾಟದ ಸ್ಫೂರ್ತಿಯೊಂದಿಗೆ ಇಂತಹ ಪ್ರಶ್ನೆಗಳನ್ನು ಕೈಗೆತ್ತಿಕೊಳ್ಳಬೇಕು. ಅಸ್ಪೃಶ್ಯರ ಜೊತೆಗೆ ಅಗಸರು, ಕ್ಷೌರಿಕರುಮುಂತಾದ ಸಮುದಾಯಗಳನ್ನು ಸಂಘಟಿಸಿ ಅವರ ಸಮಸ್ಯೆಗಳ ವಿರುದ್ಧವೂ ಹೋರಾಟ ರೂಪಿಸಬೇಕು. ಇದರಿಂದ ಆಂಧ್ರ ಪ್ರದೇಶದಲ್ಲಿ ನಮ್ಮ ಚಳುವಳಿ ವಿಸ್ತರಿಸುತ್ತಿದೆ. ಕರ್ನಾಟಕದಲ್ಲಿಯೂ ಇಂತಹ ಹೋರಾಟಗಳಿಂದ ಪ್ರಯೋಜನಾಗಲಿದೆ ಎಂದು ಕೊಂಡಾರೆಡ್ಡಿ ಹೇಳಿದರು.

ಸ್ಲಮ್‌ಗಳು, ಬಡವರ ವಲಸೆ–ಗುಳೆ ಕಾಂಗ್ರೆಸ್ ಕೊಡುಗೆ ರೈತರಿಗೆ ಲಕ್ಷಾಂತರ ಎಕರೆ


ಪುಟ 15 ಕ್ಕೆ

ಕರಾವಳಿ ಜಿಲ್ಲೆಗಳಲ್ಲಿ ಸಾಗಿದ ಭೂಮಿ ಹೋರಾಟ ಜಾಥಾ

ಕರ್ನಾಟಕ ಪ್ರಾಂತ ರೈತ ಸಂಘ ಮತ್ತು ಕರ್ನಾಟಕ ಪ್ರಾಂತ ಕೃಷಿ ಕೂಲಿಕಾರರ ಸಂಘಗಳು ಸಂಯುಕ್ತವಾಗಿ ಹಮ್ಮಿಕೊಂಡ 5 ಜಾಥಾಗಳಲ್ಲಿ ಒಂದಾದ ಕರಾವಳಿ ಜಾಥಾವು ಏಪ್ರಿಲ್ 27 ರಂದು ಶಿವಮೊಗ್ಗದಲ್ಲಿ ಉದ್ಘಾಟನೆಗೊಂಡು ಉತ್ತರ ಕನ್ನಡ, ಉಡುಪಿ, ದಕ್ಷಿಣ ಕನ್ನಡ ಜಿಲ್ಲೆಗಳಲ್ಲಿ ಸಾಗಿ ಬಂದಾಗ ವಿವಿಧ ಬಗೆಯ ಭೂಮಿಯ ಹಕ್ಕಿಗಾಗಿ ಈ ಸಂಘಟನೆಗಳಡಿ ಸರಕಾರಕ್ಕೆ ಅರ್ಜಿ ಸಲ್ಲಿಸಿದವರು ಹೃದಯ ಪೂರ್ವಕವಾಗಿ ಜಾಥಾವನ್ನು ಸ್ವಾಗತಿಸಿದರು. ಜಾಥಾ ದಕ್ಷಿಣ ಕನ್ನಡ ಜಿಲ್ಲೆಯಿಂದ ಮುಂದುವರಿದು ಕೊಡಗಿಗೆ ಸಾಗಿ ಮೈಸೂರು ಜಿಲ್ಲೆಯಲ್ಲಿ ಸಮಾಪ್ತಿಗೊಳ್ಳಲಿದೆ.

ಉಡುಪಿ ಜಿಲ್ಲೆಯಲ್ಲಿ ಸಾಗಿದ 3 ದಿನಗಳಲ್ಲಿ ಪ್ರಾಂತ ಕೃಷಿಕೂಲಿಕಾರರ ಸಂಘಟನೆ ಕ್ರಿಯಾಶೀಲವಾಗಿರುವ ಹಲವಾರು ಹಳ್ಳಿಗಳಲ್ಲಿ ಜಾಥಾ ಕಾರ್ಯಕ್ರಮ ನೀಡಿದರೆ, ದಕ್ಷಿಣ ಕನ್ನಡ ಜಿಲ್ಲೆಯಲ್ಲಿ 2 ದಿನಗಳಲ್ಲಿ ತಾಲೂಕು ಕೇಂದ್ರಗಳಲ್ಲಿ ಧರಣಿ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿತ್ತು.

ಮೇ 2 ರಂದು ಜಿಲ್ಲಾ ಕೇಂದ್ರವಾದ ಉಡುಪಿಯ ತಾಲೂಕು ಕಚೇರಿಯ ಎದುರು ಕರ್ನಾಟಕ ಪ್ರಾಂತ ಕೃಷಿಕೂಲಿಕಾರರ ಸಂಘದ ಉಡುಪಿ ತಾಲೂಕು ಸಮಿತಿಯ ನೇತೃತ್ವದಲ್ಲಿ ನಿವೇಶನ ರಹಿತರಿಗೆ ನಿವೇಶನವನ್ನು ಸರಕಾರವು ಶೀಘ್ರ ಒದಗಿಸುವಂತೆ ಆಗ್ರಹಿಸಲಾಯಿತು. ಪ್ರಾಂತ ಕೃಷಿಕೂಲಿಕಾರರ ಸಂಘದ ರಾಜ್ಯ ಸಮಿತಿ ಅಧ್ಯಕ್ಷರಾದ ನಿತ್ಯಾನಂದ ಸ್ವಾಮಿಯವರು ಪ್ರತಿಭಟನಾ ಪ್ರದರ್ಶನವನ್ನು ಉದ್ದೇಶಿಸಿ ಮಾತನಾಡಿದರು. ಪ್ರಾಂತ ರೈತ ಸಂಘದ ರಾಜ್ಯ ಉಪಾಧ್ಯಕ್ಷರಾದ ಶಾಂತರಾಮ ನಾಯಕ್ ಅವರ ನೇತೃತ್ವದಲ್ಲಿ ಸ್ಥಳಕ್ಕೆ ಆಗಮಿಸಿದ ಜಾಥಾವನ್ನು ಸ್ವಾಗತಿಸಲಾಯಿತು. ನಿವೇಶನ ಕೋರಿದ ಹೆಚ್ಚುವರಿ 225 ಅರ್ಜಿಗಳನ್ನು ತಹಶೀಲ್ದಾರರಿಗೆ ಮನವಿಯೊಂದಿಗೆ ಸಲ್ಲಿಸಲಾಯಿತು. ಪ್ರತಿಭಟನೆಯಲ್ಲಿ ಪ್ರಾಂತ ರೈತ ಸಂಘ ರಾಜ್ಯ ಜತೆ ಕಾರ್ಯದರ್ಶಿ ಯಾದವ ಶೆಟ್ಟಿ, ಪ್ರಾಂತ ಕೃಷಿಕೂಲಿಕಾರರ ಸಂಘದ ಉಡುಪಿ ಜಿಲ್ಲಾ ಮುಖಂಡರಾದ ದೋಗು ಸುವರ್ಣ, ವೆಂಕಟೇಶ್ ಕೋಣಿ, ಕೆ.ಲಕ್ಷ್ಮಣ್, ಕಾರ್ಮಿಕ ಮುಖಂಡರಾದ ಪಿ.ವಿಶ್ವನಾಥ ರೈ ಮೊದಲಾದವರು ಭಾಗವಹಿಸಿದ್ದರು.



ವಾ.ಉ.

ಮೇ 3ರ ಪೂರ್ವಾಹ್ನ ದ.ಕ.ಜಿಲ್ಲಾ ಕೇಂದ್ರವಾದ ಮಂಗಳೂರಿನ ಜಿಲ್ಲಾಧಿಕಾರಿ ಕಚೇರಿ ಎದುರು ಕರ್ನಾಟಕ ಪ್ರಾಂತ ರೈತ ಸಂಘದ ನೇತೃತ್ವದಲ್ಲಿ ಭೂಮಿ ಆಗ್ರಹಿಸಿ ಪ್ರತಿಭಟನಾ ಧರಣಿ ಏರ್ಪಡಿಸಲಾಗಿತ್ತು. ಉಳ್ಳಾಲ, ಗುರುಪುರ, ಮೂಡಬಿದ್ರಿ ವಲಯದ ಗ್ರಾಮಾಂತರ ಪ್ರದೇಶಗಳಿಂದ ಮತ್ತು ಮಂಗಳೂರು ನಗರದ ದಲಿತರು ವಾಸಿಸುವ ಪ್ರದೇಶಗಳಿಂದ ನಿವೇಶನ ರಹಿತರು ಪ್ರತಿಭಟನೆಯಲ್ಲಿ ಬಾಗವಹಿಸಿದ್ದರು. ಜಾಥಾವನ್ನು ಪ್ರತಿಭಟನಾ ಸ್ಥಳದಲ್ಲಿಯೇ ಸ್ವಾಗತಿಸಲಾಯಿತು. ಸುಡು ಬಿಸಿಲಿನಲ್ಲಿ ಮಹಿಳೆಯರೇ ಹೆಚ್ಚಿರುವ ಪ್ರತಿಭಟನಾಕಾರರು ಡಾಮರು ರಸ್ತೆಯಲ್ಲಿ ಕುಳಿತಿದ್ದರು. ಪ್ರತಿಭಟನಾ ಪ್ರದರ್ಶನವನ್ನು ಹಿರಿಯ ರೈತ ಮುಖಂಡ ಪ್ರಾಂತ ರೈತ ಸಂಘದ ದ.ಕ.ಜಿಲ್ಲಾಧ್ಯಕ್ಷರಾದ ಕೆ.ಆರ್.ಶ್ರೀಯಾನ್ ಉದ್ಘಾಟಿಸಿ ಮಾತನಾಡಿದರು. ಸಭೆಯನ್ನುದ್ದೇಶಿಸಿ ಜಾಥಾ ನಾಯಕ ಶಾಂತರಾಮ ನಾಯಕ್, ಪ್ರಾಂತ ರೈತ ಸಂಘದ ಜಿಲ್ಲಾ ಪ್ರಧಾನ ಕಾರ್ಯದರ್ಶಿ ಯಾದವ ಶೆಟ್ಟಿ, ವಕೀಲರ ಸಂಘದ ಯಶವಂತ ಮರೋಳಿ, ಉಳ್ಳಾಲ ವಲಯ ನಿವೇಶನ ಹೋರಾಟ ಸಂಘಟನೆಯ ಅಶೋಕ ಶೆಟ್ಟಿ, ಮಾತನಾಡಿದರು. ಪ್ರಾಂತ ರೈತ ಸಂಘದ ಜಿಲ್ಲಾ ಉಪಾಧ್ಯಕ್ಷ ಕೃಷ್ಣಪ್ಪ ಸಾಲ್ಯಾನ ಸಭೆಯ ಅಧ್ಯಕ್ಷತೆ ವಹಿಸಿದ್ದರು. ಪ್ರಾಂತ ರೈತ ಸಂಘದ ವಾಸುದೇವ ಉಚ್ಚಿಲ್, ನೋಣಯ್ಯ ಗೌಡ, ಕಾರ್ಮಿಕ ಮುಖಂಡರಾದ ಜೆ.ಬಾಲಕೃಷ್ಣ ಶೆಟ್ಟಿ, ವಸಂತ ಆಚಾರಿ, ಯು.ಬಿ. ಲೋಕಯ್ಯ ಮತ್ತಿತರರು ಉಪಸ್ಥಿತರಿದ್ದರು.

ಅಪರಾಹ್ನ ಜಾಥಾ ಬಂಟ್ವಾಳ ತಾಲೂಕು ರೈತ ಸಂಘದ ನೇತೃತ್ವದಲ್ಲಿ ಬಿ.ಸಿ.ರೋಡ್‌ನಲ್ಲಿ ನಡೆಸುತ್ತಿದ್ದ ಪ್ರತಿಭಟನಾ ಧರಣಿ ಸ್ಥಳಕ್ಕೆ ತಲುಪಿತು. ಬೆಳಗ್ಗಿನಿಂದ ಬಂಟ್ವಾಳ ತಾಲೂಕು ಕಚೇರಿ ಎದುರುಗಡೆ ನಿವೇಶನ ರಹಿತರು ಪ್ರತಿಭಟನೆ ನಡೆಸುತ್ತಿದ್ದರು. ಹೊಸದಾಗಿ 150 ಅರ್ಜಿಗಳು ಸ್ವೀಕಾರವಾದುವು. ಘೋಷಣೆಗೆ ಪ್ರತಿಘೋಷಣೆಯೊಂದಿಗೆ ಜಾಥಾವನ್ನು ಪ್ರತಿಭಟನಾಕಾರರು ಸ್ವಾಗತಿಸಿದರು. ಪ್ರತಿಭಟನಾಕಾರರನ್ನುದ್ದೇಶಿಸಿ ಹಿರಿಯ ರೈತ ಕಾರ್ಮಿಕ ಮುಖಂಡ ವಾಸುಗಟ್ಟಿ, ಜಾಥಾ ನಾಯಕರಾದ ಶಾಂತರಾಮ ನಾಯಕ್, ಪ್ರಾಂತ ರೈತ ಸಂಘದ ಜಿಲ್ಲಾ ಪ್ರಧಾನ ಕಾರ್ಯದರ್ಶಿ ಯಾದವ ಶೆಟ್ಟಿ ಮಾತನಾಡಿದರು. ತಾಲೂಕು ಸಮಿತಿ ಅಧ್ಯಕ್ಷರಾದ ರಾಮಣ್ಣ ಸಭೆಯ ಅಧ್ಯಕ್ಷತೆ ವಹಿಸಿದ್ದರು. ಪ್ರತಿಭಟನೆಯಲ್ಲಿ ಪ್ರಾಂತ ರೈತ ಸಂಘದ ಜಿಲ್ಲಾ ಸಮಿತಿಯ ವಾಸುದೇವ ಉಚ್ಚಿಲ್, ತಾಲೂಕು ಸಮಿತಿ ಕಾರ್ಯದರ್ಶಿ ಬಿ.ನಾರಾಯಣ, ವೈ.ಕೆ.ನಾರಾಯಣ, ಮಾರಪ್ಪ ಬಡಕಬೈಲ್, ಶೀನ ಬಂಗೇರ, ಕಾರ್ಮಿಕ ಮುಖಂಡರಾದ ಸಂಜೀವ ಬಂಗೇರ ಮುಂತಾದವರು ಭಾಗವಹಿಸಿದ್ದರು. ಕೊನೆಯಲ್ಲಿ ತಹಶೀಲ್ದಾರರಿಗೆ ಮನವಿಯನ್ನು ಸಲ್ಲಿಸಲಾಯಿತು.

ಮೇ 4 ರಂದು ಜಾಥಾ ಬೆಳ್ತಂಗಡಿ, ಪುತ್ತೂರು, ಸುಳ್ಯಗಳನ್ನು ದಾಟಿ, ಕೊಡಗಿಗೆ ಸಾಗಲಿದೆ.

ರೈತರೊಂದಿಗೆ ಪೋಲೀಸರ ಚಕಮಕಿ, ತರಾಟೆ

ಬಿ.ಸಿ.ರೋಡಿನ ಭೂಮಿ ಹೋರಾಟದ ಧರಣಿ ವೇಳೆಗೆ ಪ್ರಾಂತ ರೈತ ಸಂಘದ ಪದಾಧಿಕಾರಿಗಳು ಸ್ವತಃ ರೈತರಿಂದ ಅಕ್ರಮ-ಸಕ್ರಮ ಮತ್ತು ನಿವೇಶನಕ್ಕಾಗಿ ಅರ್ಜಿ ಸ್ವೀಕರಿಸುತ್ತಿದ್ದರು.

ಇದೇ ವೇಳೆ ಅರ್ಜಿ ಪಡೆದುಕೊಳ್ಳಲು ರೂ.20 ಮೊತ್ತ ಪಡೆಯುತ್ತಿರುವ ಬಗ್ಗೆ ನಗರ ಪೋಲೀಸರು ಆಕ್ಷೇಪ ವ್ಯಕ್ತಪಡಿಸಿದಾಗ ಮಾತಿನ ಚಕಮಕಿ ನಡೆಯಿತು.

ತಾಲೂಕು ಕಚೇರಿಯಲ್ಲಿ ಪ್ರತಿಯೊಂದು ಅರ್ಜಿ ಸ್ವೀಕಾರಕ್ಕೂ ನೂರಾರು ಮೊತ್ತ ಪಡೆಯುವಾಗ ನೀವೆಲ್ಲಿ ಇರುತ್ತೀರಿ ಎಂದು ಪ್ರತಿಭಟನಾಕಾರರು ಪೋಲೀಸರನ್ನು ತರಾಟೆಗೆ ತೆಗೆದುಕೊಂಡ ಪ್ರಸಂಗ ನಡೆದಿದೆ.

ಬಿಜೆಪಿ, ಕಾಂಗ್ರೆಸ್ ಬೆಲೆ ಏರಿಕೆಯ ಸರಕಾರಗಳು

ಎಸ್. ಪ್ರಸನ್ನಕುಮಾರ್

ರಾಜ್ಯದಲ್ಲಿ ಸಿಗದೇ ಇರುವ ವಿದ್ಯುತ್‌ಗೆ ರಾಜ್ಯ ಸರಕಾರ ವಿದ್ಯುತ್ ಬೆಲೆ ಏರಿಕೆ ಮೂಲಕ ರಾಜ್ಯದ ಜನತೆಗೆ ಶಾಕ್ ನೀಡಿದೆ. ರಾಜ್ಯದಲ್ಲಿ ಬೆಲೆ ಏರಿಕೆ, ಬರ ಪರಿಸ್ಥಿತಿ, ನಿರುದ್ಯೋಗ ಹೆಚ್ಚುತ್ತಿದ್ದರೆ ಕಾರ್ಮಿಕರ ಕನಿಷ್ಠ ಕೂಲಿ ಮಾತ್ರ ಹೆಚ್ಚಳ ಮಾಡದೇ ಸರಕಾರ ವಂಚಿಸುತ್ತಿದೆ. ಬಿಜೆಪಿ ಕಾಂಗ್ರೆಸ್ ಬೆಲೆ ಏರಿಕೆ ಮಾಡಲು ಇರುವ ಸರಕಾರಗಳಾಗಿವೆ. ಇಂತಹ ಸರಕಾರಗಳನ್ನು ತಿರಸ್ಕರಿಸಿ ಎಂದು ಸಿಐಟಿಯು ರಾಜ್ಯ ಪ್ರಧಾನ ಕಾರ್ಯದರ್ಶಿ ಪ್ರಸನ್ನಕುಮಾರ್ ಹೇಳಿದರು.

ಅವರು ಕುಂದಾಪುರದ ಗಾಂಧಿಮೈದಾನದಲ್ಲಿ ಮೇ1 2012 ರಂದು ನಡೆದ ವಿಶ್ವ ಕಾರ್ಮಿಕರ ದಿನಾಚರಣೆಯಲ್ಲಿ ಬಹಿರಂಗ ಸಭೆಯನ್ನುದ್ದೇಶಿಸಿ ಮಾತನಾಡಿದರು. ಜೆಡಿ(ಎಸ್) ವಚನ ಭ್ರಷ್ಟತೆ ಮಾಡಿದೆ, ಬಿಜೆಪಿಗೆ ಅಧಿಕಾರ ಕೊಡಿ ಎಂದು ಜನತೆಯಲ್ಲಿ ಅಂಗಲಾಚಿದ ಬಿಜೆಪಿ ಲಿಖಿತವಾಗಿ (ಪ್ರಣಾಳಿಕೆ) 2 ರೂ. ದರದಲ್ಲಿ ಅಕ್ಕಿ, ಗೋಧಿ ನೀಡುತ್ತೇವೆ ಎಂದು ಅಧಿಕಾರಕ್ಕೆ ಬಂದು ನೀಡದೇ ಜನತೆಗೆ ವಚನ ಭ್ರಷ್ಟತೆ ಮಾಡಿದೆ. ಅಲ್ಲದೇ ಬಿಜೆಪಿ ಭೂಮಿ ನುಂಗುವವರ ಭ್ರಷ್ಟ ಜನರ ಪಕ್ಷ ಎಂಬುದಾಗಿದೆ ಎಂದರು.



ಬಿಜೆಪಿ ಮಹಿಳೆಯರನ್ನು ಮಾತೆಯರು ಎನ್ನುತ್ತದೆ. ಮಹಿಳಾ ಕಾರ್ಮಿಕರಿಗೆ 180 ದಿನ ಹೆರಿಗೆ ರಜೆಯನ್ನು ಕಾನೂನುಬದ್ಧಗೊಳಿಸಬೇಕು ಎಂದು ಸಿಐಟಿಯು ಹೋರಾಟ ಮಾಡುತ್ತಿದ್ದರೂ ಬಿಜೆಪಿ ಸರಕಾರ ಅದರ ಬಗ್ಗೆ ಅಸಡ್ಡೆ ಮಾಡುತ್ತಿದೆ ಎಂದರು.

1886 ಮೇ 01 ರಂದು ಜಗತ್ತಿನಾದ್ಯಂತ ನಡೆದ 8 ಗಂಟೆ ಕೆಲಸ 8 ಗಂಟೆ ನಿದ್ದೆ, 8 ಗಂಟೆ ವಿಶ್ರಾಂತಿಗಾಗಿ-ಲಕ್ಷಾಂತರ ಕಾರ್ಮಿಕರು ಹೋರಾಟ ನಡೆಸಿದಾಗ ಪ್ರಭುತ್ವ ಬೇಡಿಕೆಯನ್ನು ನಿರಾಕರಿಸಿತು. ಕಾರ್ಮಿಕರೇ ಒಗ್ಗಟ್ಟಾಗಿ ಜಾರಿ ಮಾಡಿದ ಕಾನೂನು ಇಂದು ಜಾರಿಯಾಗಿದೆ. ಇದರ ಪರಿಣಾಮವಾಗಿ ಅಂದು ಅನ್ಯಾಯದಿಂದ ಕೂಡಿದ ವಿಚಾರಣೆ ನಡೆಸಿದ ಅಮೇರಿಕಾದ ಸರಕಾರ 19 ಜನ ಕಾರ್ಮಿಕ ಮುಖಂಡರನ್ನು ಗಲ್ಲಿಗೇರಿಸಿತು. ಸಾಮಾನ್ಯವಾಗಿ ಜಗತ್ತಿನ ಎಲ್ಲಾ ಸರಕಾರಗಳು 8 ಗಂಟೆ ದುಡಿಮೆ ಅವಧಿಯನ್ನು ಕಾನೂನುಬದ್ಧಗೊಳಿಸಿವೆ. ಸಿಐಟಿಯು ಇದರ ರಕ್ಷಣೆ ಮಾಡಬೇಕಾಗಿದೆ ಎಂದು ಹೇಳಿದರು.

ಕರ್ನಾಟಕ ಪ್ರಾಂತ ಕೃಷಿಕೂಲಿಕಾರರ ಸಂಘಟನೆಯ ರಾಜ್ಯ ಅಧ್ಯಕ್ಷರಾದ ನಿತ್ಯಾನಂದ ಸ್ವಾಮಿ ಮಾತನಾಡಿ ರಾಜ್ಯದಲ್ಲಿ ಭೂಮಿ ಇಲ್ಲದವರಿಗೆ ಸರಕಾರ ಭೂಮಿ ಹಂಚಬೇಕು ಎಂದು ರಾಜ್ಯಾದ್ಯಂತ ಜಾಥಾಗಳ ಮೂಲಕ ಹೋರಾಟ ಸಂಘಟಿಸಲಾಗುತ್ತಿದೆ ಎಂದರು.

ಸಿಐಟಿಯು ಜಿಲ್ಲಾಧ್ಯಕ್ಷರಾದ ಕೆ. ಶಂಕರ್, ಸಿಐಟಿಯು ತಾಲೂಕು ಅಧ್ಯಕ್ಷರಾದ ಹೆಚ್. ನರಸಿಂಹ ಮಾತನಾಡಿದರು. ಸಿಐಟಿಯು ಕಾರ್ಯದರ್ಶಿ ಸುರೇಶ ಕಲ್ಲಾಗರ್ ಸ್ವಾಗತಿಸಿದರು. ವೇದಿಕೆಯಲ್ಲಿ ಮಹಾಬಲ ವಡೇರಹೋಬಳಿ, ದಾಸಭಂಡಾರಿ ವೆಂಕಟೇಶ ಕೋಣಿ, ರಾಜೀವ ಪಡುಕೋಣೆ, ಅಂಗನವಾಡಿ ವನಜಶೆಟ್ಟಿ, ಬೀಡಿ ಸಂಘದ ಶಾರದ ಬಲ್ಕೀಸ್, ರಿಕ್ಷಾ ಸಂಘದ



ಚಂದ್ರ ವಿ. ಹಂಚು ಸಂಘದ ವಿ. ನರಸಿಂಹ ಅಕ್ಷರ ದಾಸೋಹ ಸಂಘದ ಜಯಶ್ರೀ, ಆಶಾ ಸಂಘದ ಸಂಗೀತ ಶೆಟ್ಟಿ, ಭೂಮಿಗಾಗಿ ಹೋರಾಟದ ಸಂಚಾಲಕ ಶಾಂತರಾಮ ನಾಯಕ್ ಉಪಸ್ಥಿತರಿದ್ದರು. ಸಾವಿರಾರು ಜನ ಕಾರ್ಮಿಕರು ಮೆರವಣಿಗೆ ನಡೆಸಿದರು.

– ಸುರೇಶ ಕಲ್ಲಾಗರ್

ಜನಶಕ್ತಿ
ಕನ್ನಡ ವಾರಪತ್ರಿಕೆ

ಲಾಭಗಳನ್ನು ಗರಿಷ್ಟಗೊಳಿಸಲು ಹೊಸ-ಹೊಸ ಮಾರ್ಗಗಳು!

ಸಾರ್ವಜನಿಕ ಆಸ್ತಿಗಳನ್ನು ನಿರ್ಮಿಸಲು ಖಾಸಗೀ ಬಂಡವಾಳವನ್ನು ಆಕರ್ಷಿಸಲಿಕ್ಕಾಗಿ, ಅದಕ್ಕೆ ಸಾಕಷ್ಟು ಲಾಭ ಸಿಗುವ ಅವಕಾಶಗಳನ್ನು ಕಲ್ಪಿಸುವುದು ಭಾರತದ ಆರ್ಥಿಕ ಬೆಳವಣಿಗೆಗೆ ಅಗತ್ಯವೇನೋ ಸರಿ. ಆದರೆ ಸಾರ್ವಜನಿಕ ಆಸ್ತಿಗಳನ್ನೇ ಖಾಸಗಿ ಲಾಭವನ್ನು ಗರಿಷ್ಟಗೊಳಿಸುವುದಕ್ಕಾಗಿ ಮುಂದಿಡುವುದು ಒಂದು ಸಂಪೂರ್ಣ ಭಿನ್ನ ಪರಿಕಲ್ಪನೆ. ಶಿಕ್ಷಣ ರಂಗದಲ್ಲಿ ಇದರ ಪರಿಣಾಮವೆಂದರೆ, ಪ್ರಭುತ್ವ ನಡೆಸುವ ಶಿಕ್ಷಣವನ್ನು ಗುಣಾತ್ಮಕವಾಗಿ ಮತ್ತು ಸಂಖ್ಯಾತ್ಮಕವಾಗಿ ಉತ್ತಮಗೊಳಿಸಿ ಭವಿಷ್ಯಕ್ಕೆ ಬೇಕಾದ ಹೂಡಿಕೆಯನ್ನು ಮಾಡುವ ಬದಲು, ಈ ಯುಪಿಎ-2 ಸರಕಾರ ಅನಿಯಂತ್ರಿತ ವಾಣಿಜ್ಯ ಶೈಕ್ಷಣಿಕ ಅಂಗಡಿಗಳಿಗೆ ಸಬ್ಸಿಡಿಗಳನ್ನು ಕೊಡುತ್ತಿದೆ ಮತ್ತು ಅವನ್ನು ಪ್ರೋತ್ಸಾಹಿಸುತ್ತಿದೆ.

'ಪೀಪಲ್ಸ್ ಡೆಮಾಕ್ರಸಿ' ವಾರಪತ್ರಿಕೆಯ ಮೇ 03,2012 ರ ಸಂಚಿಕೆಯ ಸಂಪಾದಕೀಯ

ಸಮಕಾಲೀನ ಸಾಮ್ರಾಜ್ಯಶಾಹಿಯ ಒಂದು ಹೊಸ ಲಕ್ಷಣವೆಂದರೆ ಲಾಭವನ್ನು ಗರಿಷ್ಟಗೊಳಿಸಲು ಹೊಸ-ಹೊಸ ಮಾರ್ಗಗಳ ನಿರ್ಮಾಣದ ಪ್ರಕ್ರಿಯೆ ಎಂದು ಸಿಪಿಐ(ಎಂ)ನ 20 ನೇ ಮಹಾಧಿವೇಶನದ 'ಕೆಲವು ಸೈದ್ಧಾಂತಿಕ ಪ್ರಶ್ನೆಗಳ ಮೇಲಿನ ನಿರ್ಣಯ' ಗಮನಿಸಿದೆ. ಇದು ಈ ಜಾಗತೀಕರಣದ ಅವಧಿಯಲ್ಲಿ ಭಾರತೀಯ ಆಳುವ ವರ್ಗಗಳು ಅಪ್ಪಿಕೊಂಡಿರುವ ನವ-ಉದಾರವಾದಿ ಆರ್ಥಿಕ ಸುಧಾರಣೆಗಳ ಮಾರ್ಗದಲ್ಲಿಯೂ ಅಡಕವಾಗಿದೆ. ಪರಿಣಾಮವೆಂದರೆ, ನೇರ ಲೂಟಿ ಮತ್ತು ಸಾರ್ವಜನಿಕ ಆಸ್ತಿಗಳ ಖಾಸಗೀಕರಣ ಮಾತ್ರವಲ್ಲದೆ, ಧೋರಣೆಯ ಚೌಕಟ್ಟನ್ನೇ ಖಾಸಗಿ ಲಾಭವನ್ನು ಗರಿಷ್ಟಗೊಳಿಸುವಂತೆ ಬದಲಾಯಿಸಲಾಗುತ್ತಿದೆ.

ಇದು ಈಗ ಯೋಜನಾ ಆಯೋಗಕ್ಕೆ ರಕ್ತಗತವಾಗಿ ಬಿಟ್ಟಿರುವಂತೆ ಕಾಣುವ 'ಪಿಪಿಪಿ'(ಎಂದರೆ ಸಾರ್ವಜನಿಕ-ಖಾಸಗಿ-ಪಾಲುದಾರಿಕೆ) ಗೀಳಿನಲ್ಲಿ ಎದ್ದು ಕಾಣುತ್ತಿದೆ. ಪಿಪಿಪಿ ಅದರ ಮಟ್ಟಿಗೆ ಈಗ ದೇಶದ ಆರ್ಥಿಕ ಬೆಳವಣಿಗೆಗೆ ಪ್ರಧಾನ ಮಾದರಿ! ಸಾರ್ವಜನಿಕ ಆಸ್ತಿಗಳು, ಮೂಲರಚನೆಯನ್ನು ನಿರ್ಮಿಸಲು ಖಾಸಗೀ ಬಂಡವಾಳವನ್ನು ಆಕರ್ಷಿಸಲು, ಅದಕ್ಕೆ ಸಾಕಷ್ಟು ಲಾಭ ಸಿಗುವ ಅವಕಾಶಗಳನ್ನು ಕಲ್ಪಿಸುವುದು ಭಾತತದ ಆರ್ಥಿಕ ಬೆಳವಣಿಗೆಗೆ ಅಗತ್ಯವೇನೋ ಸರಿ. ಆದರೆ ಸಾರ್ವಜನಿಕ ಆಸ್ತಿಗಳನ್ನೇ ಖಾಸಗಿ ಲಾಭವನ್ನು ಗರಿಷ್ಟಗೊಳಿಸುವುದಕ್ಕಾಗಿ ಮುಂದಿಡುವುದು ಒಂದು ಸಂಪೂರ್ಣ ಭಿನ್ನ ಪರಿಕಲ್ಪನೆ. ಹೀಗೆ ಮಾಡುವ ಮೂಲಕ ಯೋಜನಾ ಆಯೋಗ ಭಾರತದಲ್ಲಿ ಆರ್ಥಿಕ ಯೋಜನೆಯ ಸಾವಿನ ಯೋಜನೆಯನ್ನೇ ಮಾಡುತ್ತಿರುವಂತಿದೆ.

ಆರ್ಥಿಕ ಚಟುವಟಿಕೆಗಳ ಎಲ್ಲ ರಂಗಗಳಲ್ಲಿ, ಅದರಲ್ಲೂ ಮೂಲರಚನೆ ಮತ್ತು ಸಾಮಾಜಿಕ ಸೇವೆಗಳಲ್ಲಿ ಪಿಪಿಪಿ ಮಾದರಿಯನ್ನು ಸಕ್ರಿಯವಾಗಿ ಪ್ರೋತ್ಸಾಹಿಸಲಾಗುತ್ತಿದೆ. ಇಂತಹ ಎಲ್ಲ ಪಿಪಿಪಿ ಪ್ರಾಜೆಕ್ಟುಗಳ ಪರಿಣಾಮವಾಗಿ ಈ ಎಲ್ಲವುಗಳಿಗೆ ಬಳಕೆದಾರರು ತೆರುವ ಬೆಲೆಗಳು ಹೆಚ್ಚಿವೆ, ಅದರಿಂದಾಗಿ ಬಡವರು ಈ ಸೌಲಭ್ಯಗಳನ್ನು ಬಳಸದಂತೆ ತಡೆಯಲಾಗುತ್ತಿದೆ ಎಂಬುದೀಗ ಸುಸ್ಪಷ್ಟವಾಗಿ ಕಾಣುತ್ತಿದೆ. ದಿಲ್ಲಿಯ ವಿಮಾನ ನಿಲ್ದಾಣ ಪ್ರಯಾಣಿಕರಿಗೆ ಈಗ ಜಗತ್ತಿನಲ್ಲಿಯೇ ಅತ್ಯಂತ ಹೆಚ್ಚು ಖರ್ಚುದಾಯಕ. ಖಾಸಗಿಯವರಿಗೆ ಹೆದ್ದಾರಿಗಳಲ್ಲಿ ಟೋಲ್ ತೆರಿಗೆ ಸಂಗ್ರಹದ ಹಕ್ಕನ್ನು 'ಶಾಶ್ವತ'ವಾಗಿ ಕೊಟ್ಟಿರುವುದು ಬಡವರನ್ನು ಈ ಹೆದ್ದಾರಿಗಳ ಬಳಿ ಸುಳಿಯದಂತೆ ಮಾಡಿದೆ. ಆರ್ಥಿಕವಾಗಿ ದುರ್ಬಲವಾಗಿರುವ ವಿಭಾಗಗಳಿಗೆ ಕಡ್ಡಾಯವಾಗಿ ಕೊಡಬೇಕಾದ ದಾಖಲಾತಿಗಳಿಗಾಗಿ ಶಿಕ್ಷಣ ರಂಗದಲ್ಲಿನ ಮತ್ತು ಆರೋಗ್ಯ ರಂಗದಲ್ಲಿನ ಖಾಸಗಿಯವರಿಗೆ ಅಪಾರ ಹಣವನ್ನು ವರ್ಗಾಯಿಸಲಾಗುತ್ತಿದೆ.

ನಿಜವಾಗಿ, ಈ ಹಣವೆಲ್ಲ ಖಾಸಗಿಯವರಿಗೆ ನೀಡುವ ಸಬ್ಸಿಡಿಗಳು. ಇವನ್ನೆಲ್ಲ ಖಾಸಗಿಯವರಿಗೆ ವರ್ಗಾಯಿಸುವ ಬದಲು ಸಾರ್ವಜನಿಕ ಹೂಡಿಕೆಗಳಿಗೆ ಬಳಸಿದ್ದರೆ, ಅಪಾರ ಉದ್ಯೋಗಾವಕಾಶಗಳನ್ನು ನಿರ್ಮಿಸಿ 'ಆಮ್ ಆದ್ಮಿ'ಗೆ ಹೆಚ್ಚಿನ ಸೌಲಭ್ಯಗಳನ್ನು ಒದಗಿಸಲು ಸಾಧ್ಯವಾಗುತ್ತಿತ್ತು. ಲ್ಯಾಟಿನ್ ಅಮೆರಿಕಾದಲ್ಲಿ ಈ ರೀತಿ ಪಿಪಿಪಿ ಮಾದರಿ ನೀರು ಪೂರೈಕೆ, ವಿದ್ಯುತ್ ಇತ್ಯಾದಿ ಎಲ್ಲ ಸಾಮಾಜಿಕ ಸೇವೆಗಳಿಗೆ ಸಾಮಾನ್ಯ ಸಂಗತಿಯಾಗಿ ಬಿಟ್ಟಿತ್ತು. ಅದು ಜನಸಾಮಾನ್ಯರ ಮೇಲೆ ಎಂತಹ ಭೀಕರ ಪರಿಣಾಮ ಬೀರುತ್ತದೆ



ಎಂಬುದನ್ನು ಅದರ ಅನುಭವ ತೋರಿಸಿ ಕೊಟ್ಟಿದೆ.

ಈಗ ಕೃಷಿಯಲ್ಲಿಯೂ ಪಿಪಿಪಿ ಬಗ್ಗೆ ಯೋಚಿಸಲಾಗುತ್ತಿದೆ. ಮಹಾರಾಷ್ಟ್ರ ಸರಕಾರ 'ವಿಶ್ವ ಆರ್ಥಿಕ ವೇದಿಕೆ'ಯ "ಹೊಸ ಕೃಷಿ ಮುತುವರ್ಜಿ'ಯ ಅಡಿಯಲ್ಲಿ ಒಂದು ಪರೀಕ್ಷಾ ಪ್ರಾಜೆಕ್ಟನ್ನು ಆರಂಭಿಸಿದೆ. ಭಾರತದಲ್ಲಿ 83 ಶೇ.ದಷ್ಟು ಭೂಹಿಡುವಳಿಗಳು ಸಣ್ಣ ಅಥವ ಅಂಚಿನಲ್ಲಿರುವ ಹಿಡುವಳಿಗಳಾಗಿರುವ ಸಂದರ್ಭದಲ್ಲಿ ಉತ್ಪಾದನೆ ಮತ್ತು ಮಾರುಕಟ್ಟೆಗಳನ್ನು ಒಟ್ಟು ಸೇರಿಸುವ ಪಿಪಿಪಿ ಪ್ರಸ್ತಾವ ಈಗಾಗಲೇ ಆತ್ಮಹತ್ಯೆಯತ್ತ ನೂಕುತ್ತಿರುವ ರೈತರ ಪರಿಸ್ಥಿತಿಗಳ ಮೇಲೆ ವಿನಾಶಕಾರಿ ಪ್ರಭಾವ ಬೀರುತ್ತದೆ. ಇಲ್ಲಿ ಕೂಡ ಸರಕಾರ 50ಶೇ. ಹೂಡಿಕೆಯನ್ನು ಹಾಕುತ್ತದೆ ಮತ್ತು ಈಗಿರುವ ಎಲ್ಲ ಕೃಷಿ ಸಬ್ಸಿಡಿಗಳನ್ನು ಖಾಸಗಿ ಕಾರ್ಪೊರೇಟ್‌ಗಳು ಪಡೆಯಲು ಬಿಡುತ್ತದೆ.

ಶಿಕ್ಷಣ ರಂಗದಲ್ಲಿ ಪಿಪಿಪಿ

ಶಿಕ್ಷಣದ ವಿಷಯವನ್ನು ಪರಿಶೀಲಿಸೋಣ. ಈ ರೀತಿ ಲಾಭವನ್ನು ಗರಿಷ್ಟಗೊಳಿಸುವುದನ್ನು ಕಾನೂನುಬದ್ಧಗೊಳಿಸಲು ಪ್ರಯತ್ನಿಸುವ ಹಲವು ಮಸೂದೆಗಳು ಸಂಸತ್ತಿನ ಮುಂದೆ ಇವೆ. ವಿದೇಶಿ ವಿಶ್ವವಿದ್ಯಾಲಯಗಳು ಭಾರತದಲ್ಲಿ ತಮ್ಮ ಶಾಖೆಗಳನ್ನು ತೆರೆಯಲು ಅವಕಾಶವೂ ಇದರಲ್ಲಿ ಸೇರಿದೆ.

ಸುಪ್ರಿಂ ಕೋರ್ಟ್ 6 ರಿಂದ 14ವರ್ಷಗಳ ವರೆಗಿನ ಎಲ್ಲ ಮಕ್ಕಳಿಗೆ ಶಿಕ್ಷಣದ ಹಕ್ಕಿನ ಭರವಸೆ ಕೊಡುವ ಸಂವಿಧಾನ ತಿದ್ದುಪಡಿ ಕಾನೂನುಬದ್ಧ ಎಂದು ತೀರ್ಪು ಕೊಟ್ಟಿದೆ. ಇದರ ಪ್ರಕಾರ ಪ್ರತಿಯೊಂದು ಖಾಸಗಿ ಶಾಲೆ ಕನಿಷ್ಟ 25 ಶೇ. ದಷ್ಟು ಆರ್ಥಿಕವಾಗಿ ದುರ್ಬಲ ವಿಭಾಗಗಳ ಮಕ್ಕಳಿಗೆ ದಾಖಲಾತಿ ನೀಡಲೇಬೇಕಾಗಿದೆ. ಶರತ್ತೆಂದರೆ, ಅವರ ಶುಲ್ಕಗಳನ್ನು ಸರಕಾರ ಸಬ್ಸಿಡಿಯಾಗಿ ಕೊಡುತ್ತದೆ. ಈ ಗುರಿಯನ್ನು ಮುಂದಿನ ಎಂಟು ವರ್ಷಗಳಲ್ಲಿ ತಲುಪಲಾಗುತ್ತದೆ.

ಸರಕಾರ ಆರ್ಥಿಕವಾಗಿ ದುರ್ಬಲ ವಿಭಾಗದ ಪ್ರತಿಯೊಂದು ವಿದ್ಯಾರ್ಥಿಯ ಪರವಾಗಿ ಖಾಸಗಿ ಶಾಲೆಗಳಿಗೆ ರೂ. 19,000 ತೆರಲು ಸಿದ್ಧವಿದೆ. ಮೇಲ್ವರ್ಗದವರಿಗಾಗಿ ಇರುವ ಶಾಲೆಗಳಿಗೆ ಇದರಿಂದ ಬೇಸರವಾಗಿರಬಹುದಾದರೂ, ಸೀಮಿತ ಬಜೆಟಿನಲ್ಲಿ ನಡೆಯುವ ಖಾಸಗಿ ಶಾಲೆಗಳಿಗಂತೂ ಇದ್ದಕ್ಕಿದ್ದಂತೆ ಲಾಭದ ಪ್ರವಾಹ. ಈಗಾಗಲೇ, 'ಶಿಕ್ಷಣ ವರದಿಯ ವಾರ್ಷಿಕ ಸ್ಥಿತಿ-ಗತಿ'ಯ ಪ್ರಕಾರ ಖಾಸಗಿ ಶಾಲೆಗಳಲ್ಲಿ ದಾಖಲಾತಿ 2006ರಲ್ಲಿ 18.7ಶೇ. ಇದ್ದದ್ದು 2011ರಲ್ಲಿ 25.6ಶೇ. ಆಗಿದೆ. ಇಂತಹ ಶಾಲೆಗಳು ಸರಕಾರಿ ಶಾಲೆಗಳಿಗಿಂತ 5ರಿಂದ 12 ಪಟ್ಟು ಹೆಚ್ಚು ಶುಲ್ಕ ಸಂಗ್ರಹಿಸಿದರೂ ಅವು ವಿದ್ಯಾರ್ಥಿಗಾಗಿ ಮಾಡುವ ತಲಾ ಖರ್ಚು ಸರಕಾರಿ ಶಾಲೆಗಳಿಗಿಂತ ಕಡಿಮೆ ಎಂದು ವಿವಿಧ ರಾಜ್ಯಗಳಲ್ಲಿನ ಅಧ್ಯಯನಗಳಿಂದ ತಿಳಿದು ಬಂದಿದೆ.

ಸರಕಾರ ನಡೆಸುವ 'ನೆರೆಹೊರೆ ಶಾಲೆ'ಗಳ ಒಂದು ವ್ಯಾಪಕ ಜಾಲವಿಲ್ಲದಿದ್ದರೆ, ಸಾರ್ವತ್ರಿಕ ಶಿಕ್ಷಣದ ಹಕ್ಕಿನ ಗುರಿ ತಲುಪಲು ಸಾಧ್ಯವಿಲ್ಲ ಎಂಬುದನ್ನು ಅಂತರ್ರಾಷ್ಟ್ರೀಯ ಅನುಭವ ತೋರಿಸಿದೆ. ಎಲ್ಲ ಅಭಿವೃದ್ಧಿ ಹೊಂದಿರುವ ದೇಶಗಳ, ಅವುಗಳ ಸಾಮಾಜಿಕ ವ್ಯವಸ್ಥೆ ಯಾವುದೇ ಇರಲಿ, ಅಭಿವೃದ್ಧಿಯ ಬುನಾದಿ ಇದೇ. ನಮ್ಮ ಮಸೂದೆಯ ಇನ್ನೊಂದು ಕೊರತೆಯೆಂದರೆ 6 ವರ್ಷಗಳ ಕೆಳಗಿನ ಮಕ್ಕಳ ಬಗ್ಗೆ ಇದು ಏನೂ ಹೇಳುವುದಿಲ್ಲ, ಅತ್ತ ಸರಕಾರ ಅಂಗನವಾಡಿಗಳಿಗೆ ಪ್ರಾಥಮಿಕ ಶಾಲೆಗಳನ್ನು ಲಗತ್ತಿಸಲು ನಿರಾಕರಿಸುತ್ತಿದೆ.

ಖಾಸಗಿ ಕುಳಗಳಿಗೆ ಸಬ್ಸಿಡಿ

ಇನ್ನೊಂದೆಡೆ, ಸಂಸತ್ತಿನ ಮುಂದಿರುವ ಹೆಚ್ಚಿನ ಉನ್ನತ ಶಿಕ್ಷಣದ ಮಸೂದೆಗಳು ಶಿಕ್ಷಣರಂಗದ ಖಾಸಗಿ ಕುಳಗಳಿಗೆ ಸಬ್ಸಿಡಿಗಳನ್ನು ಒದಗಿಸುವ ಈ ನಿಲುವನ್ನು ಕಾನೂನುಬದ್ಧ ಗೊಳಿಸುವ ಪ್ರಯತ್ನಗಳಾಗಿವೆ. ಆಂಧ್ರಪ್ರದೇಶದ ಉದಾಹರಣೆಯನ್ನು ತಗೊಳ್ಳಿ. ಇಲ್ಲಿ 705 ಇಂಜಿನಿಯರಿಂಗ್ ಕಾಲೇಜುಗಳಿವೆ. ಇವುಗಳಲ್ಲಿ ಸೀಟುಗಳ ಒಟ್ಟು ಸಂಖ್ಯೆ 3,04,200. ಆದರೆ ಪ್ರವೇಶ ಪರೀಕ್ಷೆಯಲ್ಲಿ ಅರ್ಹರಾದವರು 2,08,936 ಮಾತ್ರ ಅಂದರೆ ಮಿಗುತೆ ಸೀಟುಗಳ ಸಂಖ್ಯೆ 75,836. ಸರಕಾರಿ ಕಾಲೇಜುಗಳ ಸಂಖ್ಯೆ ಕೇವಲ 29, ಅವುಗಳ ಸೀಟುಗಳ ಮೊತ್ತ 5,276. ಸರಕಾರ ಪರಿಶಿಷ್ಟ ಜಾತಿ/ ಪರಿಶಿಷ್ಟ ಬುಡಕಟ್ಟುಗಳು/ ಒಬಿಸಿ ವಿದ್ಯಾರ್ಥಿಗಳ ಶಿಕ್ಷಣಕ್ಕೆ ಸಬ್ಸಿಡಿಗಳನ್ನು ಕೊಡುತ್ತಿದ್ದು, ಕಳೆದ ಹಣಕಾಸು ವರ್ಷವೊಂದರಲ್ಲೇ ಆಂಧ್ರಪ್ರದೇಶ ಸರಕಾರ 3,621 ಕೋಟಿ ರೂ. ಖರ್ಚು ಮಾಡಿದೆ. ಆದರೆ ಅದರ ತಾಂತ್ರಿಕ ಶಿಕ್ಷಣದ ಬಜೆಟ್ ಕೇವಲ 1,087 ಕೋಟಿ ರೂ. ಎಲ್ಲ ಅರ್ಹ ವಿದ್ಯಾರ್ಥಿಗಳನ್ನು ಒಳಗೊಳ್ಳಬೇಕಾದರೆ 7500 ಕೋಟಿ ರೂ.ಗಳು ಬೇಕು. ಇದು ಒಂದೇ ರಾಜ್ಯದ ಲೆಕ್ಕಾಚಾರ. ಒಂದು ಸರಕಾರಿ ಇಂಜಿನಿಯರಿಂಗ್ ಕಾಲೇಜು ಆರಂಭಿಸಲು ತಗಲುವ ಖರ್ಚು ಕೇವಲ 50 ಲಕ್ಷ ರೂ. ಆದ್ದರಿಂದ ಸರಕಾರಿ ಕಾಲೇಜುಗಳನ್ನು ಆರಂಭಿಸುವ ಬದಲು ಖಾಸಗಿ ಕಾಲೇಜುಗಳಿಗೆ ಜಮೀನು ಮತ್ತು ಸಾಲಗಳನ್ನು ಒದಗಿಸುವುದಲ್ಲದೆ, ಸಬ್ಸಿಡಿಗಳನ್ನೂ ಕೊಡುವುದು, ಖಾಸಗಿ ಲಾಭಗಳನ್ನು ಗರಿಷ್ಟಗೊಳಿಸುವ ಹೊಸ ದಾರಿಗಳ ಸೃಷ್ಟಿಯಷ್ಟೇ.

ಇಷ್ಟೇ ಅಲ್ಲ, ಇಂತಹ ಖಾಸಗಿ ವ್ಯಾಪಾರಿ ಉದ್ದಿಮೆಗಳ ಮೇಲೆ ಶುಲ್ಕ ರಚನೆ, ಪಠ್ಯಕ್ರಮ,

ಪುಟ 10ಕ್ಕೆ

ಇದು ಸಿಪಿಐ(ಎಂ) 20ನೇ ಮಹಾಧಿವೇಶನದಲ್ಲಿ ಪ್ರಕಾಶ್ ಕಾರಟ್ ಮಂಡಿಸಿದ ರಾಜಕೀಯ ನಿರ್ಣಯ ಮತ್ತು ಆ ಕುರಿತು ಮಹಾಧಿವೇಶನ ನಡೆಸಿದ ಚರ್ಚೆಯ ಸಾರವನ್ನು ನೀಡುವ ವರದಿ. ವರದಿಯ ಭಾಗ–1 ಈ ಸಂಚಿಕೆಯಲ್ಲಿ.

"ನಾವು ಗೆದ್ದೇ ಗೆಲ್ಲುತ್ತೇವೆ ಬಲಿಷ್ಠರಾಗಿ ಎದ್ದು ಬರುತ್ತೇವೆ"

ಪ್ರಕಾಶ್ ಕಾರಟ್

ವರದಿ–ಎನ್.ಎಸ್.ಅರ್ಜುನ್
ಕನ್ನಡಕ್ಕೆ : ಟಿ. ಸುರೇಂದ್ರ ರಾವ್

ಏಪ್ರಿಲ್ 4ರ ಉದ್ಘಾಟನಾ ಭಾಷಣದ ನಂತರ, ರಾಜಕೀಯ ನಿರ್ಣಯದ ಕರಡನ್ನು ಮತ್ತು ರಾಜಕೀಯ ಪರಿಶೀಲನಾ ಕರಡು ವರದಿಯನ್ನು ಸಿಪಿಐ(ಎಂ) ಪ್ರಧಾನ ಕಾರ್ಯದರ್ಶಿ ಪ್ರಕಾಶ್ ಕಾರಟ್ ಮಂಡಿಸಿದರು. 2008ರ 19ನೇ ಮಹಾಧಿವೇಶನದ ರಾಜಕೀಯ ತಂತ್ರಗಾರಿಕೆಯ ಜಾರಿ ಕುರಿತ ವಿಷಯಗಳನ್ನು ರಾಜಕೀಯ ಪರಿಶೀಲನಾ ಕರಡು ವರದಿಯಲ್ಲಿ ವಿವರಿಸಲಾಗಿದೆ.

ಜುಲೈ 2008ರಲ್ಲಿ ಯುಪಿಎ ಸರ್ಕಾರಕ್ಕೆ ಬೆಂಬಲ ಹಿಂತೆಗೆತ, 2009ರ ಲೋಕಸಭಾ ಚುನಾವಣೆಯಲ್ಲಿ ಅನುಸರಿಸಿದ ರಾಜಕೀಯ ತಂತ್ರಗಾರಿಕೆ, ಲೋಕಸಭಾ ಚುನಾವಣೆಯ ನಂತರ ಉದ್ಭವಿಸಿದ ಸನ್ನಿವೇಶವನ್ನು ನಿಭಾಯಿಸಲು 2010ರ ಆಗಸ್ಟ್‌ನಲ್ಲಿ ವಿಜಯವಾಡಾದಲ್ಲಿ ನಡೆದ ವಿಸ್ತೃತ ಕೇಂದ್ರ ಸಮಿತಿ ಸಭೆಯಲ್ಲಿ ರೂಪಿಸಲಾದ ರಾಜಕೀಯ ತಂತ್ರಗಾರಿಕೆ ಹಾಗೂ ಪಶ್ಚಿಮ ಬಂಗಾಳ ಮತ್ತು ಕೇರಳದಲ್ಲಿನ ವಿಧಾನಸಭಾ ಚುನಾವಣೆಗಳು ಇವು ರಾಜಕೀಯ ಪರಿಶೀಲನಾ ಕರಡು ವರದಿಯಲ್ಲಿ ಎತ್ತಿಕೊಂಡ ಪ್ರಮುಖ ಪ್ರಶ್ನೆಗಳು.

ಭಾರತ ಅಮೆರಿಕಾ ಅಣು ಒಪ್ಪಂದದ ಮೇಲೆ ಯುಪಿಎ ಸರ್ಕಾರಕ್ಕೆ ನೀಡಿದ್ದ ಬೆಂಬಲವನ್ನು ಹಿಂತೆಗೆದುಕೊಂಡಿದ್ದು ಸರಿಯಾಗಿಯೇ ಇದೆ ಮತ್ತು ಅದಲ್ಲದೆ ಬೇರೆ ದಾರಿಯೇ ಇರಲಿಲ್ಲ ಎಂದು ಆ ರಾಜಕೀಯ ಪರಿಶೀಲನಾ ವರದಿ ನಿರ್ಧರಿಸಿದೆ ಎನ್ನುವುದನ್ನು ಕಾರಟ್ ತಿಳಿಸಿದರು. ಆದಾಗ್ಯೂ ಅದನ್ನು ಜನರ ನಡುವೆ ಚುನಾವಣಾ ವಿಷಯವನ್ನಾಗಿಸುವಲ್ಲಿ ಪಕ್ಷ ಸಫಲವಾಗಲಿಲ್ಲ. ಬೆಂಬಲ ಹಿಂತೆಗೆದುಕೊಂಡ ಸಮಯದ ಕುರಿತು, ಯುಪಿಎ ಸರ್ಕಾರವು 2007ರ ಅಕ್ಟೋಬರ್ ನವಂಬರ್‌ನಲ್ಲಿ ಅಂತರ್ರಾಷ್ಟ್ರೀಯ ಅಣು ಇಂಧನ ಸಂಸ್ಥೆ(ಐಎಇಎ)ದ ಜತೆ ಸಂಧಾನಕ್ಕೆ ಹೊರಟಾಗಲೇ ಬೆಂಬಲ ಹಿಂತೆಗೆದುಕೊಂಡಿದ್ದರೆ ಉತ್ತಮವಾಗುತ್ತಿತ್ತು ಎಂದು ಆ ವರದಿ ನಿರ್ಧರಿಸಿದೆ. ಆ ಸಮಯದಲ್ಲಿ ಹಾಗೆ ಮಾಡದಿರುವುದು ತಪ್ಪು.

ನಾವು ಯುಪಿಎ ಸರ್ಕಾರಕ್ಕೆ ಬೆಂಬಲ ನೀಡುತ್ತಿರುವ ಸಂದರ್ಭದಲ್ಲಿ, ಅಮೆರಿಕಾದ ಜತೆಗಿನ ಒಟ್ಟಾರೆ ಯುದ್ಧ ತಂತ್ರದ ಮೈತ್ರಿಯ ಕೇಂದ್ರ ಭಾಗವಾಗಿರುವ ಅಣು ಒಪ್ಪಂದವನ್ನು ಯಾವುದೇ ಕಾರಣಕ್ಕೂ ಒಪ್ಪಬಾರದೆಂದು ಅದಾಗಲೇ ತೀರ್ಮಾನ ಮಾಡಿರುವಾಗ, ನಾವು ಬೆಂಬಲ ಹಿಂತೆಗೆದುಕೊಳ್ಳುವ ಪರಿಸ್ಥಿತಿ ಬಂದರೂ ಸರಿಯೇ ಅದನ್ನು ತಡೆಯಲೇಬೇಕು ಎಂದು ನಿರ್ಧರಿಸಲಾಗಿತ್ತು. ಭಾರತವು ಐಎಇಎಗೆ ಹೋಗುವಾಗ ಒತ್ತಡ ಹೇರಬೇಕೆಂದು ಮೊದಲು ತೀರ್ಮಾನ ಮಾಡಿದ್ದರೂ, ಆನಂತರ ಆ ವಿಷಯದಲ್ಲಿ ನಾವು ಪಟ್ಟು ಸಡಿಲಿಸಿ ತಿಕ್ಕಾಟವನ್ನು ಮುಂದೂಡಿದೆವು. ಜನರ ನಡುವೆ ಹೋಗಿ ಅವರನ್ನು ಮಧ್ಯಂತರ ಚುನಾವಣೆಗೆ ಸಿದ್ಧಗೊಳಿಸಲು ಕಾಲ ತಳ್ಳುವುದು ಅದರ ಹಿಂದಿದ್ದ ಆಲೋಚನೆಯಾಗಿತ್ತು. ಪ್ರಮುಖ ಪಾತ್ರ ವಹಿಸಿದ ಮತ್ತೊಂದು ಅಂಶವೇನೆಂದರೆ, ಕೆಲವೇ ತಿಂಗಳುಗಳಲ್ಲಿ ಪಶ್ಚಿಮ ಬಂಗಾಳದಲ್ಲಿ ನಡೆಯಲಿದ್ದ ಪಂಚಾಯತ್ ಚುನಾವಣೆಯಿಂದಾಗಿ ಉದ್ಭವಿಸಿದ್ದ ಗಂಭೀರ ಪರಿಸ್ಥಿತಿ.



ಮಾವೋವಾದಿಗಳು ಮತ್ತು ತೃಣಮೂಲ ಕಾಂಗ್ರೆಸ್ ಗೂಂಡಾಗಳು ನಡೆದ ಹತ್ಯ

ಆನಂತರ, ಕಾಂಗ್ರೆಸ್ ಪಕ್ಷದ ಹಾಗೂ ಯುಪಿಎ ಮೈತ್ರಿಕೂಟದ ಉನ್ನತ ನಾಯಕತ್ವದ ಭರವಸೆಗಳನ್ನು ನಂಬಿಕೊಂಡು, ಅಣು ಒಪ್ಪಂದವನ್ನು ಯಶಸ್ವಿಯಾಗಿ ತಡೆಹಿಡಿಯಲಾಯಿತು ಎಂಬ ತಪ್ಪಾದ ತೀರ್ಮಾನಕ್ಕೆ 2008ರ ಜನವರಿ–ಮೇ ಅವಧಿಯಲ್ಲಿ ನಮ್ಮ ಪಕ್ಷದ ನಾಯಕತ್ವ ಬಂದಿತು. ಪಕ್ಷದ 19ನೇ ಮಹಾಧಿವೇಶನದ ರಾಜಕೀಯ ಸಂಘಟನಾ ನಿರ್ಣಯದಲ್ಲಿ ಕೂಡ ಇದು ಪ್ರತಿಬಿಂಬಿತವಾಗಿತ್ತು. ಇದಕ್ಕೆ, ಆಳುವ ವರ್ಗಗಳ



ಮಹಾಧಿವೇಶನದಲ್ಲಿ ಪ್ರಕಾಶ್ ಕಾರಟ್

ಮತ್ತು ಅಮೆರಿಕನ್ ಸಾಮ್ರಾಜ್ಯಶಾಹಿಗಳ – ಅಣು ಒಪ್ಪಂದವನ್ನು ಜಾರಿಗೊಳಿಸುವ ಕುರಿತ ದೃಢ ನಿಶ್ಚಯದ ಕುರಿತು ಕಡಿಮೆ ಅಂದಾಜು ಮಾಡಿದ್ದು ಒಂದು ಕಾರಣವಾದರೆ, ವಿದ್ಯಮಾನಗಳ ಮೇಲೆ ಪ್ರಭಾವ ಬೀರುವಲ್ಲಿ ಪಕ್ಷದ ಶಕ್ತಿ ಹಾಗೂ ಸಾಮರ್ಥ್ಯವನ್ನು ಅತಿ ಅಂದಾಜು ಮಾಡಿದ್ದು ಎರಡನೇ ಕಾರಣ ಎಂದು ಕಾರಟ್ ಒತ್ತಿ ಹೇಳಿದರು.

2009ರ ಲೋಕಸಭಾ ಚುನಾವಣೆಯಲ್ಲಿ ಅಳವಡಿಸಿದ ತಂತ್ರದ ವಿಮರ್ಶೆ ಮಾಡಿದ ಕಾರಟ್ ಎರಡು ವಿಚಾರಗಳನ್ನು ತಿಳಿಸಿದರು. ಮೊದಲನೆಯದು, ಯುಪಿಎ ಮತ್ತು ಎನ್‌ಡಿಎ ವಿರುದ್ಧ ಎಲ್ಲಾ ಕಾಂಗ್ರೆಸ್ಸೇತರ ಹಾಗೂ ಬಿಜೆಪಿಯೇತರ ಪಕ್ಷಗಳನ್ನು ಒಟ್ಟುಗೂಡಿಸಿದ್ದು ಸರಿಯಾಗಿಯೇ ಇತ್ತು. ಇದರಿಂದಾಗಿ, ತಮಿಳುನಾಡು, ಆಂಧ್ರಪ್ರದೇಶ ಮತ್ತು ಒಡಿಸ್ಸಾ ರಾಜ್ಯಗಳಲ್ಲಿ ಎನ್‌ಡಿಎಗೆ ಗಮನಾರ್ಹವಾದ ಯಾವುದೇ ಮಿತ್ರಪಕ್ಷಗಳು ಸಿಗದಿರುವಂತೆ ಮಾಡಲು ಸಾಧ್ಯವಾಯಿತು. ಎರಡನೆಯದು, ಕೇವಲ ಮೂರು ನಾಲ್ಕು ರಾಜ್ಯಗಳಲ್ಲಿ ಮಾತ್ರ ಅಸ್ತಿತ್ವದಲ್ಲಿದ್ದ ರಾಜ್ಯ ಮಟ್ಟದ ಮೈತ್ರಿಕೂಟಗಳನ್ನಿಟ್ಟುಕೊಂಡು ಕೇಂದ್ರದಲ್ಲಿ ಒಂದು ಜಾತ್ಯತೀತ ಪರ್ಯಾಯವನ್ನು ಕಟ್ಟುತ್ತೇವೆಂಬ ಘೋಷಣೆ ತಪ್ಪಾಗಿತ್ತು. ಎಡಪಕ್ಷಗಳು ನೀಡಿದ ಬೆಂಬಲದಿಂದಾಗಿ ಯುಪಿಎಗೆ ಗೌರವ ಪ್ರಾಪ್ತಿಯಾಗಿತ್ತು ಎನ್ನುವ ಅಭಿಪ್ರಾಯ ನಮ್ಮಲ್ಲಿತ್ತು. ಎಡಪಕ್ಷಗಳ ಒತ್ತಡಗಳಿಂದಾಗಿ ಅಸ್ತಿತ್ವಕ್ಕೆ ಬಂದಿದ್ದ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತ್ರಿ ಕಾಯಿದೆ, ಅರಣ್ಯ ಹಕ್ಕು ಕಾಯಿದೆಗಳಂತಹ ಕ್ರಮಗಳ ರಾಜಕೀಯ ಪ್ರಯೋಜನವನ್ನು ನಾವು ಪಡೆಯಬಹುದು ಎಂಬುದಾಗಿತ್ತು.

2009ರ ಲೋಕಸಭಾ ಚುನಾವಣೆಯಲ್ಲಿ ಪಶ್ಚಿಮ ಬಂಗಾಳ ಮತ್ತು ಕೇರಳ ರಾಜ್ಯಗಳಲ್ಲಿ ಎಡಪಕ್ಷಗಳಿಗೆ ಆದ ಹಿಂಜರಿತದಿಂದಾಗಿ ಹೊಸ ವಾತಾವರಣ ಉದ್ಭವಿಸಿತು. ಬಂಗಾಳದಲ್ಲಿ ದಾಳಿಗಳು ವಿಪರೀತವಾಗಿವೆ. ಇಂತಹ ವಾತಾವರಣದಲ್ಲಿ, ಹೊಸ ತಂತ್ರಗಾರಿಕೆಯನ್ನು ರೂಪಿಸಲು ಒಂದು ವಿಸ್ತೃತ ಕೇಂದ್ರ ಸಮಿತಿ ಸಭೆಯು ಆಗಸ್ಟ್ 2010 ರಲ್ಲಿ ವಿಜಯವಾಡಾದಲ್ಲಿ ನಡೆಯಿತು. 19ನೇ ಮಹಾಧಿವೇಶನದ ರಾಜಕೀಯ ತಂತ್ರಗಾರಿಕೆಯ ಸೂತ್ರಕ್ಕೆ ಹೊರತಾಗಿ, ಈ ಹೊಸ ನಿಲುವು ಬಿಜೆಪಿ ಮತ್ತು ಎನ್‌ಡಿಎಯನ್ನು ಸೋಲಿಸುವಾಗಲೇ ಯುಪಿಎಯನ್ನು ವಿರೋಧಿಸಬೇಕು ಹಾಗೂ ಕಾಂಗ್ರೆಸ್ಸನ್ನು ಸೋಲಿಸಬೇಕು ಎಂದು ಕರೆ ನೀಡಿತು. ಬಂಗಾಳದ ಪಕ್ಷದ ರಕ್ಷಣೆಗೆ ಸೌಹಾರ್ದ ಪ್ರಚಾರ ಕಾರ್ಯವನ್ನು ದೇಶಾದ್ಯಂತ ಕೈಗೊಳ್ಳಬೇಕೆಂದೂ ಕರೆ ಕೊಟ್ಟಿತು.

ಬಂಗಾಳ ಮತ್ತು ಕೇರಳ ವಿಧಾನಸಭಾ ಚುನಾವಣೆಗಳು ಪಕ್ಷಕ್ಕೆ ಬಹು ನಿರ್ಣಾಯಕ ಹೋರಾಟಗಳಾಗಿವೆ ಎಂದು ಕಾರಟ್ ಹೇಳಿದರು. 34 ವರ್ಷಗಳ ಅಧಿಕಾರದ ನಂತರ ಬಂಗಾಳದಲ್ಲಿ ಮತ್ತು ಕೂದಲೆಳೆಯ ಅಂತರದಲ್ಲಿ ಕೇರಳದಲ್ಲಿ ಸೋತಿರುವುದು ಪಕ್ಷ ಹಾಗೂ ಇಡೀ ಎಡರಂಗವನ್ನು ದುರ್ಬಲಗೊಳಿಸಿದೆ. ಈ ಫಲಿತಾಂಶಗಳು ರಾಷ್ಟ್ರಮಟ್ಟದಲ್ಲಿ ಗಂಭೀರ ಪರಿಣಾಮಗಳನ್ನು ಬೀರಿವೆ. ಪಶ್ಚಿಮ ಬಂಗಾಳದಲ್ಲಿ ಪಕ್ಷವು ಏಕೆ ಸೋತಿತು ಎಂದು ಕೆಲವು ಪ್ರಮುಖ ಕಾರಣಗಳನ್ನು ರಾಜಕೀಯ ಪರಿಶೀಲನಾ ವರದಿ ಪಟ್ಟಿ ಮಾಡಿದೆ. ಭೂ ಸ್ವಾಧೀನ ಮತ್ತು ಸತತ 34 ವರ್ಷಗಳ ಅಧಿಕಾರದಿಂದಾದ ಸವೆತಗಳು ಮುಖ್ಯವಾದವು. ನವ ಉದಾರೀಕರಣ ಆಡಳಿತದಡಿಯಲ್ಲಿ ಜಮೀನುಗಳ ಲೂಟಿಯಾಗುತ್ತಿರುವ ಸಂದರ್ಭದಲ್ಲಿ ಭೂ ಸ್ವಾಧೀನವು ರೈತಾಪಿ ಜನರಲ್ಲಿ ವ್ಯಾಪಕ ಆತಂಕ ಸೃಷ್ಟಿಮಾಡಿದೆ ಮತ್ತು ಪಕ್ಷವು ಈ ಅಂಶವನ್ನು ಗಮನಿಸಲಿಲ್ಲ. ಇದರ ಪರಿಣಾಮವಾಗಿ ಜನರು ಎಡರಂಗದಿಂದ ದೂರವಾದರು. ಈ ತಪ್ಪುಗಳನ್ನು ಸರಿಪಡಿಸಬೇಕು ಮತ್ತು ಜನರ ಬಳಿ ಹೋಗಿ ಮತ್ತೆ ಅವರ ವಿಶ್ವಾಸ ಗಳಿಸುವ ನಿಟ್ಟಿನಲ್ಲಿ

ಪುಟ 10ಕ್ಕೆ

ಜನಶಕ್ತಿ
ಕನ್ನಡ ವಾರಪತ್ರಿಕೆ

ನೀವು ಚೆಲ್ಲಿದ ರಕ್ತ ವ್ಯರ್ಥ ಮಾಡುವುದಿಲ್ಲ

ಬೆಂಗಳೂರಿನ ಮೇ ದಿನಾಚರಣೆಯಲ್ಲಿ ಪ್ರತಿಜ್ಞೆ

ನ್ಯೂಯಾರ್ಕ್‌ನ ಬೀದಿಗಳಲ್ಲಿ ಚೆಲ್ಲಿದ ರಕ್ತ ಎಂದಿಗೂ ವ್ಯರ್ಥವಾಗಲು ಬಿಡುವುದಿಲ್ಲ. ಚೆಲ್ಲಿದ ರಕ್ತ ಆರಿರಬಹುದು. ಆದರೆ ಅದು ನಮ್ಮದೆಯಲ್ಲಿ ಎಂದಿಗೂ ಬತ್ತದ ಸ್ಫೂರ್ತಿ ಮೂಡಿಸಿದೆ. ದುಡಿಯುವ ವರ್ಗದ ಮೇಲೆ ನಡೆಯುವ ದೌರ್ಜನ್ಯಗಳನ್ನು ಎಂದಿಗೂ ಸಹಿಸಿಕೊಳ್ಳುವ ಮಾತೇ ಇಲ್ಲ. ಎಚ್ಚರ...

ಇದು ಐತಿಹಾಸಿಕ ಕಾರ್ಮಿಕ ದಿನಾಚರಣೆಯಲ್ಲಿ ದುಡಿಯುವ ಜನ ಆಳುವ ಜನ ಹಾಗೂ ಅವರ ಮುಖವಾಡಗಳಿಗೆ ನೀಡಿದ ಎಚ್ಚರಿಕೆ.

ಕಾರ್ಮಿಕ ಹಕ್ಕುಗಳಿಗಾಗಿ, 8 ಘಂಟೆ ದುಡಿಯುವ ಅವಧಿ ಸೇರಿದಂತೆ ಕಾರ್ಮಿಕರಿಗೆ ಸೌಲಭ್ಯಗಳಿಗೆ ಆಗ್ರಹಿಸಿ ನ್ಯೂಯಾರ್ಕ್‌ನಲ್ಲಿ ನಡೆಯುತ್ತಿದ್ದ ಪ್ರತಿಭಟನೆ ಮೇಲೆ ಪೊಲೀಸ್ ದಾಳಿಯಲ್ಲಿ ಮೃತಪಟ್ಟವರ ನೆನಪಿಗಾಗಿ ಅಂತರಾಷ್ಟ್ರೀಯ ದುಡಿಯುವ ವರ್ಗ ಆಚರಿಸುವ ಮೇ ದಿನಾಚರಣೆಯನ್ನು ಬೆಂಗಳೂರು ನಗರದಲ್ಲಿ ಸಂಭ್ರಮದಿಂದ ಆಚರಿಸಲಾಯಿತು.

ಸ್ವಾತಂತ್ರ್ಯ ಉದ್ಯಾನವನದಲ್ಲಿ ನಡೆದ ಮೇ ದಿನಾಚರಣೆಯಲ್ಲಿ ಮಾತನಾಡಿದ ಮುಖಂಡರು, ದುಡಿಯುವ ವರ್ಗದ ಮೇಲೆ ನಡೆಯುತ್ತಿರುವ ದೌರ್ಜನ್ಯಗಳು ಹಾಗೂ ಅವರಿಗೆ ಶಾಸನೀಯ ಬೆಂಬಲ ನೀಡುತ್ತಿರುವ ಕೇಂದ್ರ ಹಾಗೂ ರಾಜ್ಯ ಸರ್ಕಾರಗಳ ಮೇಲೆ ವಾಗ್ದಾಳಿ ನಡೆಸಿ ಮಾಲೀಕರು ಕಾರ್ಮಿಕರ ಮೇಲೆ ನಡೆಸುತ್ತಿರುವ ದೌರ್ಜನ್ಯಗಳಿಗೆ ಬೆಂಬಲ ನೀಡಿದರೆ ಪರಿಣಾಮ ನೆಟ್ಟಗಿರುವುದಿಲ್ಲ ಎಂದು ಎಚ್ಚರಿಸಿದರು.

ತ್ಯಾಗ ವ್ಯರ್ಥವಾಗಲು ಬಿಡೆವು

ಸಿಐಟಿಯು ರಾಜ್ಯ ಖಜಾಂಚಿ ಕಾಂ. ಮೀನಾಕ್ಷಿ ಸುಂದರಂ ಮಾತನಾಡಿ, ಮೇ ದಿನ ಎಂದರೆ ಕೇವಲ ಒಂದು ದಿನವಲ್ಲ. ಕಾರ್ಮಿಕರ ಹಿತಕ್ಕಾಗಿ ತ್ಯಾಗ ಮಾಡಿದವರನ್ನು ನೆನಪಿಸಿಕೊಂಡು ಅವರ ತ್ಯಾಗವನ್ನು ಮರೆತಿಲ್ಲ, ಅವರ ರಕ್ತ ಎಂದಿಗೂ ವ್ಯರ್ಥವಲ್ಲ, ಅವರು ತುಂಬಿದ ಸ್ಫೂರ್ತಿ ನಮ್ಮ ಮನದಲ್ಲಿ ಮಾಸಿಲ್ಲ. ಕಾರ್ಮಿಕರ ಮೇಲೆ ನಡೆಯುವ ದೌರ್ಜನ್ಯವನ್ನು ಎಂದಿಗೂ ಸಹಿಸೆವು ಎಂಬ ಕಾರ್ಮಿಕರ ಪರಂಪರೆಯನ್ನು ಮಾಲೀಕರಿಗೆ ಎಚ್ಚರಿಸುವ ದಿನ ಮೇ ದಿನ ಎಂದರು.

ಬಂಡವಾಳ ಜಗತ್ತಿನ ಸಾರ್ವಭೌಮ ಎಂದು ಬೀಗುತ್ತಿದ್ದ ಅಮೇರಿಕಾದಲ್ಲಿ ಇಂದು ಬಂಡವಾಳಶಾಹಿ ಬಿಕ್ಕಟ್ಟಿನಲ್ಲಿದೆ. ಆದರೆ ಆ ಬಿಕ್ಕಟ್ಟನ್ನು ಕಾರ್ಮಿಕರ ಮೇಲೆ ವರ್ಗಾಯಿಸಿ ನೆಡೆಸಿದ ದಾಳಿ ಹಾಗೂ ಲಾಭದ ಹೆಚ್ಚಳಕ್ಕಾಗಿ ಉದ್ಯೋಗಿಗಳ ವಜಾ ಮಾಡಿ ಹೆಚ್ಚಿಸಿದ ನಿರುದ್ಯೋಗ ಮುಂತಾದ ಕಾರಣಗಳಿಂದ ವ್ಯಗ್ರಗೊಂಡಿರುವ ಅಮೇರಿಕನ್ನರು ಮಾರ್ಚ್ ಟು ವಾಲ್‌ಸ್ಟ್ರೀಟ್ ಎಂಬ ಕಾರ್ಯಕ್ರಮವನ್ನೇ ರೂಪಿಸಿದ್ದಾರೆ. ಅಲ್ಲದೆ ಸಮಾಜವಾದ ಮುಗಿದ ಕತೆ, ಬಂಡವಾಳಶಾಹಿಯೇ ಜಗತ್ತಿನ ಭವಿಷ್ಯ ಎಂದು ಮೆರೆಯುತ್ತಿದ್ದ ಜನರ ಮುಖದ ಮೇಲೆ ಹೊಡೆದಂತೆ ಸಮಾಜವಾದವನ್ನು ಒಪ್ಪಿಕೊಂಡಿರುವ ರಾಷ್ಟ್ರಗಳು ಅಭಿವೃದ್ಧಿಯಲ್ಲಿ ದಾಪುಗಾಲು ಹಾಕುತ್ತಿದ್ದರೆ ಬಂಡವಾಳಶಾಹಿಯನ್ನು ಅಪ್ಪಿಕೊಂಡ ರಾಷ್ಟ್ರಗಳಲ್ಲಿ ಬಿಕ್ಕಟ್ಟು ಹೆಚ್ಚಿದೆ. ಆದರೆ ದುರಂತ ಎಂದರೆ ಮನಮೋಹನ್‌ಸಿಂಗ್‌ನಂತಹ ಬಂಡವಾಳಶಾಹಿಯ ಏಜೆಂಟರು ಬಿಕ್ಕಟ್ಟಿನಲ್ಲಿರುವ ಅಮೇರಿಕಾವನ್ನು ರಕ್ಷಿಸಲು



ಭಾರತದ ಹಿತವನ್ನು ಬಲಿ ಕೊಡುತ್ತಿದ್ದಾರೆ..ಬ್ಯಾಂಕ್ ಹಾಗೂ ಜೀವವಿಮಾ ಕ್ಷೇತ್ರವನ್ನು ಖಾಸಗೀಕರಣ ಮಾಡಲು ಹೊರಟಿರುವ ಮನಮೋಹನ್‌ಸಿಂಗ್‌ಗೆ ಬಿಜೆಪಿ ಸಾಥ್ ನೀಡುತ್ತಿದೆ. ಸಾರ್ವಜನಿಕ ಉದ್ದಿಮೆಗಳನ್ನು ಖಾಸಗೀಕರಣಗೊಳಿಸಲು ಉತ್ಸುಕರಾಗಿರುವ ಇವರು ಅಲ್ಲಿ ರಾಷ್ಟ್ರೀಕರಣವಾಗುತ್ತಿರುವುದನ್ನು ಬೇಕಂತಲೇ ಮುಚ್ಚಿಡುತ್ತಿದ್ದಾರೆ ಎಂದು ಟೀಕಾ ಪ್ರಹಾರ ನಡೆಸಿದರು.

ಬಂಡವಾಳಶಾಹಿ ತನ್ನ ಲಾಭವನ್ನು ಹೆಚ್ಚಿಸಿಕೊಳ್ಳಲು ಕಾರ್ಮಿಕರ ಮೇಲೆ ಮಾಡುತ್ತಿದ್ದ ವೆಚ್ಚವನ್ನು ಶೇ.33 ರಿಂದ ಶೇ. 17ಕ್ಕೆ ಇಳಿಸಿದ್ದರೆ ಅದೇ ಸಮಯದಲ್ಲಿ ಲಾಭ ಶೇ.14 ರಿಂದ ಶೇ.38ಕ್ಕೇರಿದೆ. ಅದರೂ ಕಾರ್ಮಿಕರಿಗೆ ನೀಡಬೇಕಾದ ಸೌಲಭ್ಯಗಳನ್ನು ನೀಡದೆ ಶೋಷಣೆ ಮಾಡುತ್ತಿದ್ದಾರೆ. ಅದಕ್ಕೆ ಆಳುವ ಸರ್ಕಾರಗಳೂ ಕೂಡ ಬೆಂಬಲವಾಗಿ ನಿಂತಿವೆ. ಇಂತಹ ಸರ್ಕಾರಗಳನ್ನು ಶಾಶ್ವತವಾಗಿ ಮನೆಗೆ ಕಳುಹಿಸದಿದ್ದರೆ ಈ ದೇಶಕ್ಕೆ ಹಾಗೂ ಜನರಿಗೆ, ಕಾರ್ಮಿಕರಿಗೆ ಉಳಿಗಾಲ ಇಲ್ಲ ಎಂದರು.

ಕೆಲಸ ಮಾಡಿ ನಿವೃತ್ತರಾಗುವಾಗ ಖಾಲಿ ಕೈಯಲ್ಲಿ ಕಳುಹಿಸಬಾರದು. ಸಂಸ್ಥೆಗಾಗಿ ದುಡಿದ ಅವರ ಬದುಕು ಭವಿಷ್ಯದಲ್ಲಿ ಚೆನ್ನಾಗಿರಲಿ ಎಂದು ನೀಡುತ್ತಿದ್ದ ಪಿಂಚಣಿಯನ್ನು ನೀಡದಿರಲು ಸರ್ಕಾರಗಳು ಕಾನೂನು ರೂಪಿಸಿವೆ. ಈ ಸರ್ಕಾರಗಳಿಗೆ ಸಾಮಾಜಿಕ ಬದ್ಧತೆಯೇ ಇಲ್ಲ. ಇಂತಹ ಸರ್ಕಾರಗಳನ್ನು ಯಾಕಾದರೂ ಸಹಿಸಿಕೊಂಡಿರಬೇಕು ಎಂದ. ಅವರು ಈ ಸರ್ಕಾರಗಳು ನಮ್ಮವೇ ಎಂದು ಪ್ರಶ್ನಿಸಿದರು. ಕಾರ್ಮಿಕರ ಹೋರಾಟದ ಪರಂಪರೆಯನ್ನು ಮುಂದುವರೆಸಲು ಕ್ಯೂಬಾದ ಹವಾನದಲ್ಲಿ ಯುವ ಕಾರ್ಮಿಕರ ಸಮಾವೇಶವನ್ನು ನಡೆಸಲಾಗುತ್ತಿದೆ. ಎಲ್ಲಾ ಕಾರ್ಮಿಕರ ಐಕ್ಯತೆಯನ್ನು ಕಾಪಾಡಲು ಹಾಗೂ ಸಾಮೂಹಿಕ ಹೋರಾಟಗಳ ಮೂಲಕ ಕಾರ್ಮಿಕರ ಮೇಲೆ ನಡೆಯುತ್ತಿರುವ ದೌರ್ಜನ್ಯಗಳನ್ನು ಒಗ್ಗಟ್ಟಿನಿಂದ ಎದುರಿಸಲು ಕಾರ್ಮಿಕರ ಐಕ್ಯತೆ ಅಗತ್ಯವಾಗಿದೆ. ಅದರೆ ಅಂತಹ ಐಕ್ಯತೆ ಸಾಧಿಸಲು ಕೆಲವೊಂದು ಶಕ್ತಿಗಳು ಅಡ್ಡಿಯಾಗಿವೆ. ಅವುಗಳಲ್ಲಿ ಎಡ ಎಂದು ಹೇಳಿಕೊಳ್ಳುವ ಸಂಘಟನೆಗಳೂ ಇವೆ ಎಂದರು. ಫೆಬ್ರವರಿ 28, 2012ರಂದು ನಡೆದ ಹೋರಾಟದ ಪ್ರಮುಖ ಬೇಡಿಕೆ ಅಸಂಘಟಿತ ಕಾರ್ಮಿಕರನ್ನೊಳಗೊಂಡಂತೆ ಎಲ್ಲಾ ಕಾರ್ಮಿಕರ ಕಲ್ಯಾಣಕ್ಕಾಗಿ ಕಾರ್ಮಿಕ ಕಲ್ಯಾಣ ಮಂಡಳಿ ರಚಿಸಬೇಕು ಎಂಬ ಬೇಡಿಕೆ ಮುಖ್ಯವಾಗಿತ್ತು. ಸರ್ಕಾರ ಮಂಡಳಿಯನ್ನೂ ರಚಿಸಿದೆ. ಆದರೆ ಅದಕ್ಕೆ ಇನ್ನೂ ಯಾವ ರೂಪುರೇಷೆಗಳನ್ನೂ ನೀಡಿಲ್ಲ. ನೀಡಿರುವ ಎರಡು ಕೋಟಿ ರೂಪಾಯಿಗಳನ್ನು ಮಂಡಳಿಯ ಕಾರ್ಯದರ್ಶಿ ಕಾರನ್ನು ತೆಗೆದುಕೊಳ್ಳಲು ಬಳಸಿಕೊಂಡಿದ್ದಾರೆ. ಈ ಸರ್ಕಾರದ ಯಾವುದೇ ಸಚಿವರನ್ನು ಯಾವುದೇ ಬೇಡಿಕೆಗಳ ಬಗ್ಗೆ ಮನವಿ ನೀಡಲು ಅಥವಾ ವಿಚಾರಣೆ ಮಾಡಲು ಹೋದರೆ ಹೇಳುವುದು ಒಂದೇ. ಅದು ಯಡಿಯೂರಪ್ಪ ನಮ್ಮ ನಾಯಕ, ಸದಾನಂದಗೌಡ ನಮ್ಮ ಕ್ಯಾಪ್ಟನ್ ಎಂಬ ಒಂದೇ ಒಂದು ಸಿದ್ಧ ಉತ್ತರ ಸಿಗುತ್ತದೆ. ಪಕ್ಕದ ಕೇರಳ, ತಮಿಳುನಾಡುಗಳಲ್ಲಿ ಮಂಡಳಿ ರಚನೆಯಾಗಿ ಯೋಜನೆಗಳು ಜಾರಿಗೊಳ್ಳುತ್ತಿವೆ. ಆದರೆ ನಮ್ಮಲ್ಲಿ ಅಂತಹ ಪ್ರಯತ್ನವೇ ಆಗುತ್ತಿಲ್ಲ ಎಂದರು.

ನಮ್ಮ ದುಡಿಮೆಯಲ್ಲಿ ಸಾಮಾಜಿಕ ಪಾಲಿಗಾಗಿ ,ಸಾಮಾಜಿಕ ಭದ್ರತೆಗಾಗಿ ಹೋರಾಟ ಮುಂದುವರೆಸುವ ಭರವಸೆಯೊಂದಿಗೆ ಮೇದಿನ ಆಚರಿಸೋಣ ಎಂದು ಆಶಯ ವ್ಯಕ್ತಪಡಿಸಿದರು.

'ನಿಮ್ಮದೆಂತಾ ಸರ್ಕಾರ'

ಸಿಐಟಿಯು ಬೆಂಗಳೂರು ಜಿಲ್ಲಾ ಪ್ರಧಾನ ಕಾರ್ಯದರ್ಶಿ ಕೆ.ಎನ್.ಉಮೇಶ್ ಮಾತನಾಡಿ, ಜನರ ರಕ್ಷಣೆ ನಮ್ಮ ಹೊಣೆ ಎಂದು ಅಧಿಕಾರಕ್ಕೆ ಬರುವ ಸರ್ಕಾರಗಳು ನಂತರ ಸಂಪತ್ತಿನ ಲೂಟಿಯಲ್ಲಿ ತೊಡಗಿವೆ. 8 ಗಂಟೆಗಳ ಕೆಲಸದ ಅವಧಿಯನ್ನು 9 ಗಂಟೆಗೆ ಹೆಚ್ಚಿಸಿದ ಯಡಿಯೂರಪ್ಪ ಎಂಬ ಲೂಟಿಕೋರ ಕಳೆದ ಮೇ ದಿನಾಚರಣೆಯಲ್ಲಿ ಮುಖ್ಯಮಂತ್ರಿಯಾಗಿದ್ದವ ಇಂದು ಮಾಜಿಯಾಗಿದ್ದಾನೆ. ಮಾಲೀಕರ ಪಕ್ಷಪಾತಿ, ಲೂಟಿಕೋರರ ನಾಯಕ ಯಡಿಯೂರಪ್ಪ ಮಾಜಿಯಾಗಲು ನಿಜವಾಗಿಯೂ ಕಾರ್ಮಿಕರು ಕಾರಣವಾಗಬೇಕಾಗಿತ್ತು. ಆದರೆ ಕಾನೂನಿನ ಕಾರಣದಿಂದ ಮಾಜಿಯಾಗಿದ್ದಲ್ಲದೆ ಜೈಲಿಗೂ ಹೋಗಿ ಬಂದಿದ್ದಾನೆ. ಜನರಿಗೆ ಕುಡಿಯಲು ನೀರಿಲ್ಲ, ಹೊಟ್ಟೆ ತುಂಬಾ ಆಹಾರ ಸಿಗುತ್ತಿಲ್ಲ. ಮಾಡಿದ ದುಡಿಮೆಗೆ ಸರಿಯಾಗಿ ಕೂಲಿಯೂ ಸಿಗುತ್ತಿಲ್ಲ. ಕಾರ್ಮಿಕರ ರಕ್ಷಣೆಗಾಗಿ ಇರುವ ಕಾನೂನುಗಳನ್ನು ಸರಿಯಾಗಿ ಜಾರಿಗೊಳಿಸಲಾಗದ ನಿಮ್ಮದೆಂಥಾ ಸರ್ಕಾರ ಎಂದು ಜರಿದರು.

ಜೀವನಕ್ಕಾಗಿ ಇಟ್ಟುಕೊಂಡಿದ್ದ ಭೂಮಿಯನ್ನು ಮೂರು ಕಾಸು ನೀಡಿ ಖರೀದಿಸಿ ಕಾರ್ಖಾನೆಗಳಿಗೆ ನೀಡಿ, ಭೂಮಿ ನೀಡಿದವರೇ ಕಾರ್ಖಾನೆಯಲ್ಲಿ ಕಾರ್ಮಿಕರಾಗಿ

ಪುಟ 14 ಕ್ಕೆ

ಲಾಭಗಳನ್ನು ಗರಿಷ್ಟಗೊಳಿಸಲು ಹೊಸ ಮಾರ್ಗಗಳು!

ಪುಟ 7 ರಿಂದ

ಶಿಕ್ಷಕರ ಮತ್ತು ಸಿಬ್ಬಂದಿಯ ಸಂಬಳ ಇತ್ಯಾದಿಗಳನ್ನು ಕುರಿತಂತೆ ಸಾಮಾಜಿಕ ಹತೋಟಿಗಾಗಿ ಶಾಸನ ತರುವಲ್ಲಿ ಸರಕಾರ ಕಾಲೆಳೆಯುತ್ತಲೇ ಇದೆ. ಅನುದಾನವಿಲ್ಲದ ಬಜೆಟ್ ಖಾಸಗಿ ಶಾಲೆಗಳಲ್ಲಿ ಶಿಕ್ಷಕರ ಸಂಬಳಗಳು ಕನಿಷ್ಟ 4ರಿಂದ 7ಪಟ್ಟು ಕಡಿಮೆಯಿದೆ.

ಉನ್ನತ ಶಿಕ್ಷಣದ ಆಮದು-ರಫ್ತಿನಿಂದ ಆರ್ಥಿಕ ಗಳಿಕೆಗಳು ವಿಶ್ವ ವ್ಯಾಪಾರ ಸಂಘಟನೆಯ (ಡಬ್ಲ್ಯುಟಿಒ) ವ್ಯಾಪಾರ ಮತ್ತು ಸೇವೆಗಳ ಮೇಲಿನ ಸಾರ್ವತ್ರಿಕ ಒಪ್ಪಂದದ ಒಂದು ಪ್ರಮುಖ ಅಂಶ. ಯೋಜನಾ ಆಯೋಗದ ಪ್ರಕಾರ, ಹನ್ನೊಂದನೇ ಯೋಜನೆಯಲ್ಲಿ ಉನ್ನತ ಶಿಕ್ಷಣದ ಮಂಜೂರಾದ ವಿಸ್ತರಣೆಗೆ ಬೇಕಾಗುವ ನಿಧಿಗಳಲ್ಲಿ 88ಶೇ. ಈ ಪಿಪಿಪಿ ಮಾರ್ಗದಲ್ಲಿ ಬರಬೇಕು. ಹನ್ನೆರಡನೇ ಪಂಚವಾರ್ಷಿಕ ಯೋಜನೆಯ ನಿಲುವು ಪತ್ರ "ಉನ್ನತ ಶಿಕ್ಷಣದಲ್ಲಿ ಖಾಸಗಿ ಮುತುವರ್ಜಿಗಳನ್ನು, ಕಾರ್ಯಸಾಧ್ಯ ಮತ್ತು ನವೀನ ಪಿಪಿಪಿ ಮಾದರಿಗಳನ್ನು ಕೂಡ ಸಕ್ರಿಯವಾಗಿ ಪ್ರೋತ್ಸಾಹಿಸಲಾಗುತ್ತದೆ. ಪ್ರಸಕ್ತ ಶಿಕ್ಷಣ ವಲಯದಲ್ಲಿನ 'ಲಾಭಕ್ಕಾಗಿ ಅಲ್ಲ' ಎಂಬ ಕಣ್ಣೋಟದ ಮರು ಪರೀಕ್ಷೆಯನ್ನು ವ್ಯಾವಹಾರಿಕ ದೃಷ್ಟಿಯಿಂದ ಮಾಡಬೇಕಾಗಿದೆ" ಎಂದು ಯಾವುದೇ ಸಂಶಯಕ್ಕೆ ಎಡೆಯಿಲ್ಲದಂತೆ ಹೇಳಿದೆ. ಮಧ್ಯಾಹ್ನದ ಊಟದ ವಿಸ್ತರಣೆಯಲ್ಲಿ ಸರಕಾರದ ಪೂರ್ಣ ಪ್ರಮಾಣದ ಹಣ ನೀಡಿಕೆಯೊಂದಿಗೆ ಖಾಸಗೀ ಭಾಗವಹಿಸುವಿಕೆಗೆ ಪ್ರೋತ್ಸಾಹ ಕೊಡಲಾಗುತ್ತದೆ; ಮತ್ತು 'ರಾಷ್ಟ್ರೀಯ ಮಾಧ್ಯಮಿಕ ಶಿಕ್ಷಾ ಅಭಿಯಾನ'ದ ವಿಸ್ತರಣೆ ಪಿಪಿಪಿ ಮೂಲಕ ನಡೆಯಬೇಕಾಗಿದೆಯಂತೆ.

ನವ-ಉದಾರವಾದಿ ಮಾರುಕಟ್ಟೆ ತತ್ವದತ್ತ

ರಾಷ್ಟ್ರೀಯ ಶೈಕ್ಷಣಿಕ ಯೋಜನೆ ಮತ್ತು ಆಡಳಿತ ವಿಶ್ವವಿದ್ಯಾಲಯದ ಪ್ರೊ. ತಿಲಕ್ ಇತ್ತೀಚೆಗೆ ಈ ರೀತಿಯ ದೊಡ್ಡ ಪ್ರಮಾಣದ ಖಾಸಗೀಕರಣ ಮತ್ತು ವಾಣಿಜ್ಯೀಕರಣವನ್ನು ಕಾನೂನುಬದ್ಧಗೊಳಿಸುವ 12ನೇ ಯೋಜನಾ ನಿಲುವು ಪತ್ರದ ಎಲ್ಲ ಕ್ರಮಗಳ ವಿವರಗಳನ್ನು ಕೊಟ್ಟಿದ್ದಾರೆ(ಇಕನಾಮಿಕ್ ಅಂಡ್ ಪೊಲಿಟಿಕಲ್ ವೀಕ್ಲಿ, ಮಾರ್ಚ್ 31, 2012). ಅವರು ಹೀಗನ್ನುತ್ತಾರೆ:

"ಒಂದು, 'ಉನ್ನತ ಶಿಕ್ಷಣದಲ್ಲಿ ಖಾಸಗಿ ವಲಯದ ಬೆಳವಣಿಗೆಗೆ ಸೌಲಭ್ಯಗಳನ್ನು ಒದಗಿಸಬೇಕು' ಎಂದು ಅದು ಹೇಳುತ್ತದೆ. ಇದನ್ನು ಮಾಡುವುದು ಹೇಗೆ? ಉನ್ನತ ಶಿಕ್ಷಣದಲ್ಲಿ ಮಾತ್ರವಲ್ಲ, ಎಲ್ಲಾ ಮಟ್ಟಗಳ ಶಿಕ್ಷಣದಲ್ಲಿ 'ಖಾಸಗಿ ಭಾಗವಹಿಸುವಿಕೆಗೆ ಇರುವ ಪ್ರವೇಶ-ತಡೆಗಳನ್ನು ತೆಗೆಯಬೇಕಾಗಿದೆ' ಎಂದು ಅದು ಒತ್ತಿ ಹೇಳುತ್ತದೆ. ಎರಡು, ನವ-ನವೀನ ಸಾರ್ವಜನಿಕ-ಖಾಸಗಿ ಪಾಲುದಾರಿಕೆಯ ಸ್ವರೂಪಗಳ ಅನ್ವೇಷಣೆ ಮಾಡಬೇಕು ಮತ್ತು ಬೆಳೆಸಬೇಕು" ಎಂದು ಅದು ವಾದ ಮಾಡುತ್ತದೆ. ಮೂರು, 'ಉನ್ನತ ಶಿಕ್ಷಣ ವಲಯದಲ್ಲಿ 'ಲಾಭಕ್ಕಾಗಿಯಲ್ಲ' ಎಂಬ ಹಣೆಪಟ್ಟಿಯನ್ನು ಬಹುಶಃ ವ್ಯಾವಹಾರಿಕವಾಗಿ ಮರು ಪರೀಕ್ಷಿಸಬೇಕಾಗಿದೆ' ಎನ್ನುತ್ತದೆ. ನಾಲ್ಕು, ಅದು 'ಅರ್ಹ' ಖಾಸಗಿ ಸಂಸ್ಥೆಗಳಿಗೆ 'ಸಾಲಗಳು, ವಿದ್ಯಾರ್ಥಿಗಳಿಗೆ ಹಣಕಾಸು ಸಹಾಯ ಮತ್ತು ಸಂಶೋಧನೆಗೆ ಸ್ಪರ್ಧಾತ್ಮಕ ನಿಧಿ ನೀಡಿಕೆಯ ಸ್ವರೂಪಗಳಲ್ಲಿ ಸಾರ್ವಜನಿಕ ನಿಧಿಗಳ ಲಭ್ಯತೆ'ಯನ್ನು ಒದಗಿಸುವುದು ಒಳ್ಳೆಯದು ಎನ್ನುತ್ತದೆ. ಐದು, ಉನ್ನತ ಶಿಕ್ಷಣ ಸಂಸ್ಥೆಗಳಿಗೆ "ತಮ್ಮದೇ ನಿಧಿಗಳನ್ನು ವಿವಿಧ ಕಾನೂನುಬದ್ಧ ದಾರಿಗಳ ಮೂಲಕ ಸಂಗ್ರಹಿಸಲು ಪ್ರೋತ್ಸಾಹ ನೀಡಬೇಕು' ಎಂದು ಅದು ಹೇಳುತ್ತದೆ. ಆರು, ದೇಶದ ನಾಲ್ಕೈದು ಸ್ಥಳಗಳಲ್ಲಿ ದೊಡ್ಡ ಶೈಕ್ಷಣಿಕ ಕೇಂದ್ರಗಳನ್ನು ನಿರ್ಮಿಸಬೇಕು, ಇವಕ್ಕೆ ದೊಡ್ಡ ಸಾರ್ವಜನಿಕ ವಲಯದ ಉದ್ದಿಮೆಗಳು ಆಸರೆಯಾಗಬೇಕು, ಸಾಧ್ಯವಾದಲ್ಲಿ ಖಾಸಗಿ ವಲಯದ ಉದ್ದಿಮೆಗಳು ತಮ್ಮ ಕಾರ್ಪೊರೇಟ್ ಸಾಮಾಜಿಕ ಜವಾಬ್ದಾರಿಯ ಬಾಬ್ತಿನ ಮೊತ್ತಗಳನ್ನು ಬಳಸಿ ಭಾಗವಹಿಸುವ ವಿಚಾರವನ್ನು ಪರಿಶೀಲಿಸಬೇಕು ಎಂದು ಶಿಫಾರಸು ಮಾಡುತ್ತದೆ."

ಅವರ ತೀರ್ಮಾನ ಹೀಗಿದೆ: "ಸ್ವತಂತ್ರ ಭಾರತದಲ್ಲಿ ಉನ್ನತ ಶಿಕ್ಷಣ ಕಲ್ಯಾಣ ಪ್ರಭುತ್ವದಲ್ಲಿ ಅಂತರ್ಗತವಾಗಿರುವ ಒಂದು ವ್ಯವಸ್ಥೆಯಿಂದ..... ನವ-ಉದಾರವಾದಿ ಮಾರುಕಟ್ಟೆ ತತ್ವವನ್ನು ಆಧರಿಸಿರುವ ಒಮದು ವ್ಯವಸ್ಥೆಗೆ ಚಲಿಸಿದೆ. ಬೇಸರದ ಸಂಗತಿಯೆಂದರೆ, ಈ ಸಂಕ್ರಮಣ ಪೂರ್ಣಗೊಂಡಿರುವಂತಿದೆ ಮತ್ತು ಹಿಂದಿರುಗುವ ಸಾಧ್ಯತೆಗಳೇ ಇಲ್ಲದಷ್ಟು ಅಪಾಯಕಾರಿಯಾಗಿ ಪೂರ್ಣಗೊಂಡಿರುವಂತಿದೆ."

ಹೂಡಿಕೆ-ಲಾಭಕ್ಕೋ, ಭವಿಷ್ಯಕ್ಕೋ

ಇಂದು 73 ಖಾಸಗಿ ವಿಶ್ವವಿದ್ಯಾಲಯಗಳು' ಮತ್ತು ಸುಮಾರು 100ರಷ್ಟು 'ಪರಿಗಣಿತ ವಿಶ್ವವಿದ್ಯಾಲಯ'ಗಳು ಇವೆ. ಒಂದು ದಶಕದ ಹಿಂದೆ ಇಂತಹ ಯಾವುದೇ ವಿಶ್ವವಿದ್ಯಾಲಯಗಳಿರಲಿಲ್ಲ. ಇಂದು ಖಾಸಗಿ ಉನ್ನತ ಶಿಕ್ಷಣದ ಪಾಲು ವೃತ್ತಿ ಶಿಕ್ಷಣದಲ್ಲಿ ಐದನೇ ನಾಲ್ಕರಷ್ಟು ಮತ್ತು ಒಟ್ಟಾರೆಯಾಗಿ ಮೂರನೇ ಒಂದರಷ್ಟು. ಆದರೆ ಅಮೆರಿಕಾದಲ್ಲಿಯೂ ಖಾಸಗಿ ಸಂಸ್ಥೆಗಳ ಪಾಲು ಕಾಲು ಭಾಗಕ್ಕಿಂತಲೂ ಕಡಿಮೆ ಎಂಬುದನ್ನು ಗಮನಿಸಬೇಕು.

ಇಂದು ನಾವು ಡಾ.ಎಸ್.ರಾಧಾಕೃಷ್ಣನ್ ನೇತೃತ್ವದ 1948ರ 'ವಿಶ್ವವಿದ್ಯಾಲಯ ಶಿಕ್ಷಣ ಆಯೋಗ'ದಲ್ಲಿ ಹೇಳಿರುವ ಈ ಮಾತುಗಳನ್ನು ನೆನೆಪಿಸಿಕೊಳ್ಳಬೇಕಾಗಿದೆ: "... ನಾವು ಒಂದು ನಾಗರಿಕ ಜನತೆ ಎಂದು ಹೇಳಿಕೊಳ್ಳುವುದರಿಂದಾಗಿ, ಉದಯಗೊಳ್ಳುತ್ತಿರುವ ಪೀಳಿಗೆಯ ಉನ್ನತ ಶಿಕ್ಷಣ ನಮ್ಮ ಪ್ರಧಾನ ಕಾಳಜಿಗಳಲ್ಲಿ ಒಂದೆಂದು ಪರಿಗಣಿಸಬೇಕು... ಇವುಗಳಲ್ಲಿ ಹೆಚ್ಚಿನ ಪ್ರಸ್ತಾವಗಳಿಗೆ ಹೆಚ್ಚಿನ ಖರ್ಚು ಅಗತ್ಯ, ಆದರೆ ಇವು ಒಂದು ಮುಕ್ತ ಜನತೆಯ ಪ್ರಜಾಸತ್ತಾತ್ಮಕ ಭವಿಷ್ಯಕ್ಕೆ ಮಾಡುವ ಹೂಡಿಕೆ ಎಂಬುದು ನಮಗೆ ಮನವರಿಕೆಯಾಗಿದೆ."

ಪ್ರಭುತ್ವ ನಡೆಸುವ ಶಿಕ್ಷಣವನ್ನು ಗುಣಾತ್ಮಕವಾಗಿ ಮತ್ತು ಸಂಖ್ಯಾತ್ಮಕವಾಗಿ ಉತ್ತಮಗೊಳಿಸಿ ಭವಿಷ್ಯಕ್ಕೆ ಬೇಕಾದ ಹೂಡಿಕೆಯನ್ನು ಮಾಡುವ ಬದಲು, ಈ ಯುಪಿಎ-2 ಸರಕಾರ ಅನಿಯಂತ್ರಿತ ವಾಣಿಜ್ಯ ಶೈಕ್ಷಣಿಕ ಅಂಗಡಿಗಳಿಗೆ ಸಬ್ಸಿಡಿಗಳನ್ನು ಕೊಡುತ್ತದೆ ಮತ್ತು ಅವನ್ನು ಪ್ರೋತ್ಸಾಹಿಸುತ್ತಿದೆ.

"ನಾವು ಗೆದ್ದೇ ಗೆಲ್ಲುತ್ತೇವೆ....

ಪುಟ 8 ರಿಂದ

ಪಕ್ಷವನ್ನು ಪುನರ್ ಸಂಘಟಿಸಬೇಕಾದ ಅಗತ್ಯವನ್ನು ಕಾರಟ್ ಒತ್ತಿಹೇಳಿದರು. ರಾಜ್ಯದಲ್ಲಿ ಹೆಚ್ಚಾಗುತ್ತಿರುವ ದಾಳಿಗಳನ್ನು ಎದುರಿಸಲು ಮತ್ತು ಹಿಮ್ಮೆಟ್ಟಿಸಲು ಇದು ತೀರಾ ಅವಶ್ಯಕ ಎಂದರು.

ಕೇರಳದಲ್ಲಿ, ಚುನಾವಣಾ ಫಲಿತಾಂಶದ ದೃಷ್ಟಿಯಿಂದ ಹೇಳಬೇಕೆಂದರೆ ಎಡಪಕ್ಷಗಳು ಬಹಳ ಕಡಿಮೆ ಅಂತರದಲ್ಲಿ ಸೋತಿವೆ ಮತ್ತು ಎಲ್‌ಡಿಎಫ್ ವಿರುದ್ಧ ಜನಾಕ್ರೋಶ ಇರಲಿಲ್ಲವೆಂಬುದು ಬಹಳ ಮುಖ್ಯವಾದ ಅಂಶ. ಲೋಕಸಭಾ ಚುನಾವಣೆಯ ಸಂದರ್ಭದಲ್ಲಿ ಕಾಣಿಸಿಕೊಂಡಿದ್ದ ಪಕ್ಷದೊಳಗಿನ ಮತ್ತು ಎಡರಂಗದೊಳಗಡೆಯ ಅನೈಕ್ಯತೆ ವಿಧಾನಸಭಾ ಚುನಾವಣಾ ಸಮಯದಲ್ಲಿ ಇರಲಿಲ್ಲ. ಕಡಿಮೆ ಅಂತರದಲ್ಲಿನ ನಮ್ಮ ಸೋಲಿಗೆ ಕಾರಣ ಮಲಪ್ಪುರ ಜಿಲ್ಲೆಯಲ್ಲಿ ಮುಸ್ಲಿಮರ ನಡುವೆ ನಮ್ಮ ನೆಲೆಯನ್ನು ಒಂದಷ್ಟು ಮಟ್ಟಿಗೆ ಕಳೆದುಕೊಂಡಿದ್ದು ಮತ್ತು ಕೂದಲೆಳೆಯ ಅಂತರದ ನಮ್ಮ ಸೋಲಿಗೆ ಕಾರಣ ಸಂಘಟನಾ ವಿಷಯಗಳು.

ಇತರ ಹಲವಾರು ರಾಜ್ಯಗಳಲ್ಲಿನ ವಿಧಾನಸಭಾ ಚುನಾವಣೆಗಳಲ್ಲಿ ಪಕ್ಷದ ಕಳಪೆ ಸಾಧನೆಯನ್ನು ಟಿಪ್ಪಣಿ ಮಾಡಿದ ಕಾರಟ್, ಬಂಗಾಳ, ಕೇರಳ ಮತ್ತು ತ್ರಿಪುರಾ ರಾಜ್ಯಗಳನ್ನು ಹೊರತುಪಡಿಸಿ ಬೇರಾವುದೇ ರಾಜ್ಯಗಳಲ್ಲಿ ಪಕ್ಷವು ಬೆಳವಣಿಗೆಯಾಗಿಲ್ಲ ಎನ್ನುವುದನ್ನು ತೋರಿಸುತ್ತದೆ ಎಂದರು. ರಾಜಾಸ್ಥಾನ ಮಾತ್ರ ಹೊರತು. ಸ್ಥಳೀಯ ಸಮಸ್ಯೆಗಳ ಕುರಿತು ನಮ್ಮಿಂದ ನಿರಂತರ ಹೋರಾಟಗಳನ್ನು ನಡೆಸಲಾಗಿಲ್ಲ ಎನ್ನುವುದನ್ನು ಪರಿಶೀಲನಾ ವರದಿ ಎತ್ತಿ ತೋರಿಸಿದೆ. ಮತ್ತು ಆಂಧ್ರ ಪ್ರದೇಶದಲ್ಲಿ ಆದಂತೆ, ಯಾವ ರಾಜ್ಯಗಳಲ್ಲಿ ಅಂತಹ ಹೋರಾಟಗಳನ್ನು ಮಾಡಲಾಗಿದೆಯೋ ಅಲ್ಲಿ ಪಕ್ಷವು ಅದನ್ನು ಕ್ರೋಢೀಕರಿಸಲು ಸಾಧ್ಯವಾಗಿಲ್ಲ. ಹೋರಾಟದಲ್ಲಿ ಭಾಗಿಯಾದವರಿಗೆ ರಾಜಕೀಯ ಸೈದ್ಧಾಂತಿಕ ತಿಳುವಳಿಕೆಯನ್ನು ನೀಡುವುದರ ಮೂಲಕ ಕ್ರೋಢೀಕರಿಸಬೇಕೆಂದು ಅವರು ಒತ್ತುಕೊಟ್ಟು ಹೇಳಿದರು. ಸಮಸ್ಯೆಗಳನ್ನು ಗುರುತಿಸಿ ಕೈಗೆತ್ತಿಕೊಳ್ಳುವುದಕ್ಕಿಂತ ಮುಂಚೆ, ಕಳೆದ ಇಪ್ಪತ್ತು ವರ್ಷಗಳ ಉದಾರೀಕರಣದ ಅವಧಿಯಲ್ಲಿ ಹಲವಾರು ವರ್ಗಗಳಲ್ಲಿ ಆಗಿರುವ ಬದಲಾವಣೆಗಳನ್ನು ನಿರ್ದಿಷ್ಟವಾಗಿ ಅಧ್ಯಯನ ಮತ್ತು ವಿಶ್ಲೇಷಣೆ ಮಾಡಬೇಕೆಂದು ಪ್ರಕಾಶ್ ಕಾರಟ್ ಕರೆ ನೀಡಿದರು. ಹೀಗೆ ಮಾಡದಿದ್ದರೆ, ಉದಾರೀಕರಣದ ವಿರುದ್ಧದ ನಮ್ಮ ಘೋಷಣೆ ಅಮೂರ್ತವಾಗುತ್ತದೆ ಮತ್ತು ಅದರಿಂದ ಯಾವ ಪ್ರಗತಿಯೂ ಸಾಧ್ಯವಿಲ್ಲ ಎಂದರು.

ಜಾತಿ ದಬ್ಬಾಳಿಕೆಯು ವರ್ಗ ಶೋಷಣೆಯನ್ನು ಬಲಪಡಿಸುತ್ತದೆಯಾದ್ದರಿಂದ ವರ್ಗ ಸಮಸ್ಯೆಗಳ ಜತೆ ಜತೆಯಲ್ಲೇ ಸಾಮಾಜಿಕ ದಬ್ಬಾಳಿಕೆಯ ಸಮಸ್ಯೆಗಳನ್ನೂ ಕೈಗೆತ್ತಿಕೊಳ್ಳಬೇಕೆಂದು ಪಕ್ಷದ ಕಳೆದ ಮೂರು ಮಹಾಧಿವೇಶನಗಳಲ್ಲಿ ಒತ್ತುಕೊಟ್ಟು ಹೇಳಲಾಗಿತ್ತು ಎಂದು ಕಾರಟ್ ನೆನಪಿಸಿದರು. ಸಾಮೂಹಿಕ ಸಂಘಟನೆಗಳಿಗೆ ಮಾತ್ರ ಈ ಸವಾಲನ್ನು ಬಿಟ್ಟುಕೊಡದೆ ಪಕ್ಷದ ವೇದಿಕೆಯ ಭಾಗವೂ ಇದಾಗಬೇಕೆಂದು ಅವರು ಹೇಳಿದರು. ತಮಿಳುನಾಡು ಮತ್ತು ಆಂಧ್ರಪ್ರದೇಶ ರಾಜ್ಯಗಳಲ್ಲಿ ಆದ ಸ್ವಲ್ಪ ಪ್ರಗತಿಯನ್ನು ಹೊರತುಪಡಿಸಿದರೆ ಹೆಚ್ಚೂ ಕಡಿಮೆ ಪಕ್ಷವು ಈ ನಿಟ್ಟಿನಲ್ಲಿ ವಿಫಲವಾಗಿದೆ ಎಂದೇ ರಾಜಕೀಯ ಪರಿಶೀಲನಾ ವರದಿ ಹೇಳುತ್ತದೆ. ಅದರಲ್ಲೂ ಹಿಂದಿ ಮಾತನಾಡುವ ರಾಜ್ಯಗಳು ಈ ವಿಚಾರದಲ್ಲಿ ಬಹಳ ಹಿಂದೆ ಬಿದ್ದಿವೆ. ನಾವು ಈ ಸಮಸ್ಯೆಗಳನ್ನು ಎತ್ತಿಕೊಳ್ಳದಿದ್ದರೆ, ಈಗಾಗಲೇ ನಮ್ಮ ದೇಶದಲ್ಲಿ ಬೆಳೆದು ನೆಲೆಯೂರಿರುವ ಅಸ್ತಿತ್ವ ರಾಜಕೀಯ(ಐಡೆಂಟಿಟಿ ಪಾಲಿಟಿಕ್ಸ್)ವು ಈ ಜನವಿಭಾಗದ ನಡುವೆ ಇನ್ನೂ ಸೊಂಪಾಗಿ ಬೆಳೆಯುತ್ತದೆ ಎಂದು ಎಚ್ಚರಿಸಿದರು.

ಹಿಂದುತ್ವದ ಅಪಾಯವನ್ನು ಚುನಾವಣೆಯ ವಿಷಯವನ್ನಾಗಿ ಮಾತ್ರ ನೋಡದೆ, ಕೋಮುವಾದದ ವಿರುದ್ಧದ ಹೋರಾಟವು ನಮ್ಮ ಮುಖ್ಯ ಗುರಿಯಾಗಬೇಕು ಎಂದು ಸಲಹೆ ನೀಡಿದರು. ಜನಸಮುದಾಯದ ನಡುವೆ ತಮ್ಮ ಸಿದ್ಧಾಂತವನ್ನು ಕೊಂಡೊಯ್ಯಲು ಸಾಮಾಜಿಕ, ಸಾಂಸ್ಕೃತಿಕ ಹಾಗೂ ಶೈಕ್ಷಣಿಕ ರಂಗಗಳಲ್ಲಿ ಹಿಂದುತ್ವ ಶಕ್ತಿಗಳು ಅನವರತ ಚಟುವಟಿಕೆಗಳನ್ನು ನಡೆಸುತ್ತಿವೆ. ಕೋಮುವಾದದ ವಿರುದ್ಧ ಸೆಣಸುವಾಗ ಈ ಅಂಶವನ್ನು ನೆನಪಿನಲ್ಲಿಟ್ಟುಕೊಳ್ಳಬೇಕು ಮತ್ತು ನಾವು ಸಾಂಸ್ಕೃತಿಕವಾಗಿ ಕೂಡ ಮಧ್ಯಪ್ರವೇಶ ಮಾಡಬೇಕು ಎಂದು ಕಾರಟ್ ಮನದಟ್ಟು ಮಾಡಿಸಿದರು.

ಕನ್ನಡ ವಾರಪತ್ರಿಕೆ

ಮಳವಳ್ಳಿ ತಾಲ್ಲೂಕು ಹುಸ್ಕೂರಿನ ದಲಿತ ಯುವಕ ವಾಹನ ಸವಾರರಿಗೆ ಮುಂದಿರುವ ರಸ್ತೆ ಅಗೆತದ ಬಗೆಗೆ ಎಚ್ಚರಿಕೆ ಹೇಳಿದ್ದೇ ಅಪರಾಧವಾಗಿದೆ !!! ಇಲ್ಲಿ ಊರಿಗೆ ನುಗ್ಗಿ ದಲಿತರನ್ನು ಹಿಡಿದು ಬಡಿಯಬಹುದು–ಕಾನೂನು ಏನೂ ಮಾಡದು– ಅದು ಹಲ್ಲಿಲ್ಲದ ಹಾವು...

ಮಳವಳ್ಳಿ: ದಲಿತರ ಮೇಲಿನ ದೌರ್ಜನ್ಯ ನ್ಯಾಯ ಎಲ್ಲಿದೆ?

ಆರ್. ಕೃಷ್ಣ, ಮಂಡ್ಯ

ದಲಿತರ ಮೇಲಿನ ದೌರ್ಜನ್ಯಗಳು ತೀವ್ರವಾಗಿ ಹೆಚ್ಚುತ್ತಿವೆ. ಅದರಲ್ಲೂ ರಾಜ್ಯದಲ್ಲಿ ಬಿಜೆಪಿ ಅಧಿಕಾರಕ್ಕೆ ಬಂದ ನಂತರ ದೌರ್ಜನ್ಯ ಪ್ರಕರಣಗಳು ಮಿತಿ ಮೀರಿವೆ. ಕ್ಷುಲ್ಲಕ ಕಾರಣಗಳಿಗೆ ದಲಿತರ ಮೇಲೆ ಸವರ್ಣಿಯರು ಹಲ್ಲೆ ಮಾಡುವುದು ಸಾಮಾಜಿಕ ಬಹಿಷ್ಕಾರ ಹಾಕುವುದು. ದಲಿತ ಯುವಕ–ಯುವತಿಯರು ಪ್ರೀತಿಸಿದ ಕಾರಣಕ್ಕಾಗಿ ಮರ್ಯಾದೆ ಹೆಸರಿನಲ್ಲಿ ಹಲ್ಲೆ, ಹತ್ಯೆ ಮಾಡುವುದು ಎಗ್ಗಿಲ್ಲದೆ ಸಾಗಿದೆ. ಇಂತಹ ಸಂದರ್ಭದಲ್ಲಿ ದೌರ್ಜನ್ಯಕ್ಕೊಳಗಾದವರ ನೆರವಿಗೆ ನಿಲ್ಲಬೇಕಾದ ಪೋಲಿಸಠು & ಸರ್ಕಾರ ದಲಿತರ ಮೇಲೆಯೇ ಪ್ರತಿಕಾರದ ರೀತಿಯಲ್ಲಿ ಕ್ರಮ ಕೈಗೊಳ್ಳುವುದು ನಡೆದೇ ಇವೆ. ಇಂತಹ ದೌರ್ಜನ್ಯ ಪ್ರಕರಣಗಳ ಸಂದರ್ಭದಲ್ಲಿ ಸವರ್ಣಿಯರು ಒಂದು ರೀತಿಯಲ್ಲಿ ಸಮೂಹ ಸನ್ನಿಗೊಳಗಾದಂತೆ ದಲಿತರ ಮೇಲೆ ಮುಗಿ ಬೀಳುವುದು, ದಲಿತರು ಬದುಕಲು ಸಾಧ್ಯವಾಗದಂತಹ ಸನ್ನಿವೇಶ ಸೃಷ್ಟಿಸುವುದು ವ್ಯಾಪಕವಾಗಿದೆ. ಇದೇ ರೀತಿಯಲ್ಲಿ ಇತ್ತೀಚಿಗೆ ಮಂಡ್ಯ ಜಿಲ್ಲೆ. ಮಳವಳ್ಳಿ ತಾಲ್ಲೂಕು, ಹುಸ್ಕೂರಿ ನಲ್ಲಿಯೂ ಇಂತಹ ಪ್ರಕರಣ ನಡೆದು ಅಲ್ಲಿಯ ದಲಿತರು ಜೀವ ಭಯದಿಂದ ಬದುಕುವಂತಾಗಿದೆ.

ಹುಸ್ಕೂರಿನಲ್ಲಿ ನಡೆದದ್ದೇನು?

ಯುಗಾದಿ ಹಬ್ಬದ ದಿನದಂದು ಹುಸ್ಕೂರಿನಲ್ಲಿ ದಲಿತರ ಕೇರಿಯ ಯುವಕರು ರಸ್ತೆ ಪಕ್ಕದ ಜಗುಲಿಕಟ್ಟೆ ಮೇಲೆ ಸುಮಾರು 9.30 ಗಂಟೆಯಲ್ಲಿ ಕುಳಿತಿದ್ದರು. ಆಗ ಯಾರೋ ಬೈಕಿನಲ್ಲಿ ವೇಗವಾಗಿ ಬರುತ್ತಿದ್ದರು. ಇಂತಹ ಸಂದರ್ಭದಲ್ಲಿ ಆ ರಸ್ತೆಯಲ್ಲಿ ಗುಂಡಿ ಇರುವುದು ಗೊತ್ತಿದ್ದ ದಲಿತ ಯುವಕ ಸಂದೀಪ್ ಕುಮಾರನು ಬೈಕಿನಲ್ಲಿ ಹೋಗುತ್ತಿದ್ದವರನ್ನು ಕೂಗಿ ಮುಂದೆ ಸೇತುವೆ ಕೆಲಸಕ್ಕಾಗಿ ರಸ್ತೆ ಅಗೆದಿದ್ದಾರೆ, ನಿಧಾನವಾಗಿ ಹೋಗ್ರೋಲೋ ಎಂದು ಹೇಳಿದ. ಆಗ ಬೈಕಿನಲ್ಲಿ ಹೋಗುತ್ತಿದ್ದವರು ತಕ್ಷಣ ಬೈಕನ್ನು ನಿಲ್ಲಿಸಿ ಬಂದು ದಲಿತ ಯುವಕರ ಜೊತೆ ಜಗಳ ತೆಗೆದು " ನಮ್ಮನ್ನೇ 'ಲೋ' ಎನ್ನಲು ನಿನಗೆಷ್ಟು ಕೊಬ್ಬು" ಎಂದು ಗಲಾಟೆ ಮಾಡಿ ಹೊರಟು ಹೋದರು. ಆಘಟನೆಯನ್ನೇ ಗಂಭೀರವಾಗಿ ಪರಿಗಣಿಸಿದ ಗ್ರಾಮದ ಸವರ್ಣೀಯ ಯುವಕರು ಮಾರನೇ ದಿನ ಗುಂಪು ಕಟ್ಟಿಕೊಂಡು ದಲಿತ ಕೇರಿಗೆ ನುಗ್ಗಿ, ಸಿಕ್ಕ ಸಿಕ್ಕ ಹಲವರ ಮೇಲೆ ಹಲ್ಲೆ ಮಾಡಿ ಸಂದೀಪ್ ಕುಮಾರನಿಗೆ ತಲೆ ಹೊಡೆದು ಆತನ ತಾಯಿ ಮತ್ತು ತಮ್ಮನನ್ನು ಗಂಭೀರವಾಗಿ ಗಾಯಗೊಳಿಸಿದ್ದಾರೆ, ಸಂದೀಪ್‌ಕುಮಾರನ ತಾಯಿ, ಲೀಲಾವತಿಯವರನ್ನು ಮನ ಬಂದಂತೆ ಸವರ್ಣಿಯ ಯುವಕರು ತುಳಿದು, ಬಟ್ಟೆಯನೆಲ್ಲ ಹರಿದು ಹಾಕಿದ್ದಾರೆ.

ಗಾಯದ ಮೇಲೆ ಬರೆ

ಸುದ್ದಿ ತಿಳಿದು ಸ್ಥಳಕ್ಕೆ ಬಂದ ಪೋಲಿಸರು ಕಾನೂನು ರೀತ್ಯಾ ಕ್ರಮ ಕೈಗೊಳ್ಳುವುದರ ಬದಲು, ಸವರ್ಣೀಯರ ಬೆಂಬಲಕ್ಕೆ ನಿಂತು, ಈ ಘಟನೆಯಲ್ಲಿ ತೀರಾ ಗಾಯಗೊಂಡವರ ದಲಿತರ ಮೇಲೆಯೇ ಪ್ರಕರಣಗಳನ್ನು ದಾಖಲಿಸಿದ್ದಾರೆ. ತಮ್ಮ ಹಕ್ಕು ಮತ್ತು ಸ್ವಾಭಿಮಾನಕ್ಕಾಗಿ ದಲಿತರು ಜಾಗೃತ ಗೊಂಡಿರುವುದನ್ನೇ ತಮ್ಮ ಅಸ್ತಿತ್ವಕ್ಕೆ ಬರುತ್ತಿರುವ ಧಕ್ಕೆ ಎಂಬಂತೆ ಸವರ್ಣೀಯ ಜಾತಿಯ ಜನರು ಭಾವಿಸುತ್ತಿರುವುದು ಹೆಚ್ಚಾಗುತ್ತಿದೆ. ಸರ್ಕಾರದ ನೀತಿಗಳಿಂದಾಗಿ ಅವಕಾಶ ವಂಚಿತರಾಗಿ ಹತಾಶ ಹೊಂದುತ್ತಿರುವ ಸವರ್ಣಿಯರು ತಮ್ಮ ಸಿಟ್ಟನ್ನು ಅಸಹಾಯಕ ದಲಿತರ ಮೇಲೆ ತಿರುಗಿಸುತ್ತಿದ್ದಾರೆ, ದಲಿತರ ಮೇಲೆ ದೌರ್ಜನ್ಯ ನಡೆದಿರುವ ಬಹುತೇಕ ಘಟನೆಗಳಲ್ಲಿ ಪೋಲಿಸರು ಕೂಡ ಸವರ್ಣೀರ ಜೊತೆ ಕೈ ಜೋಡಿಸುತ್ತಾ ದಲಿತರ ಮೇಲೆ ಹಲ್ಲೆಗೆ ಪರೋಕ್ಷವಾಗಿ ಕಾರಣವಾಗುತ್ತಿದ್ದಾರೆ. ಸದರಿ ಪ್ರಕರಣದಲ್ಲಿ ಹಲಗೂರು ಠಾಣೆಯ ಪಿಎಸ್‌ಐ ಧನರಾಜ್‌ರವರು ದಲಿತರನ್ನು ಬಲಿಪಶು ಮಾಡಲು ಅವರ ಮೇಲೆ ಕೊಲೆಯತ್ನದಂತಹ ಗಂಭೀರ ಪ್ರಕರಣ ದಾಖಲಿಸಿದ್ದಾರೆ.



ಸಿಪಿಐ(ಎಂ) ಮಧ್ಯಪ್ರವೇಶ

ಈ ಘಟನೆ ತಿಳಿದು ಮಳವಳ್ಳಿ ತಾಲ್ಲೂಕು ಸಿಪಿಐ(ಎಂ) ತಂಡ ಗ್ರಾಮಕ್ಕೆ ಭೇಟಿ ನೀಡಿ, ಘಟನೆಯ ಬಗ್ಗೆ ಕೂಲಂಕೂಷವಾಗಿ, ಮಾಹಿತಿ ಪಡೆಯಿತು. ಗ್ರಾಮದಲ್ಲಿ ದಲಿತರು, ಹಬ್ಬ ಮತ್ತಿತರ ಕಾರ್ಯಕ್ರಮಗಳನ್ನು ಬಹಳಷ್ಟು ಆತಂಕದಲ್ಲಿಯೇ ಆಚರಿಸುತ್ತಾರೆ. ಸವರ್ಣೀಯರು, ನೆಮ್ಮದಿಯಾಗಿ ಹಬ್ಬಗಳ ಆಚರಣೆ ಮಾಡಲು ಬಿಡುವುದಿಲ್ಲ. ಈ ಕುರಿತು ಅಕ್ಕ–ಪಕ್ಕದ ಗ್ರಾಮಗಳಲ್ಲಿಯೂ ಮಾಹಿತಿ ಪಡೆಯಲಾಯಿತು. ಹುಸ್ಕೂರು ಗ್ರಾಮದಲ್ಲಿಯೇ ಸಿಪಿಐ(ಎಂ) ಮುಖಂಡರಾದ, ಸರೋಜಮ್ಮ, ಸಾವುಕಯ್ಯ, ಗೌರಮ್ಮ ಇವರುಗಳು ಕೂಡ. ಈ ಘಟನೆಗೆ ಸಂಬಂಧಿಸಿದ ಮಾಹಿತಿ ನೀಡಿದರು. ತಕ್ಷಣ, ಹುಸ್ಕೂರು ಪಕ್ಕದ ಗ್ರಾಮವಾದ ತೊರೆ ಬೊಮ್ಮನಹಳ್ಳಿಯಲ್ಲಿ ಸಿಪಿಐ(ಎಂ) ಮುಖಂಡರು ಕಾರ್ಯಕರ್ತರು, ಗ್ರಾಮಸ್ಥರು ಸಭೆ ಸೇರಿ, ಮಾರ್ಚಿ 30 ರಂದು ಪಿಎಸ್ಐ ಅವಮಾನತಿಗೆ ಆಗ್ರಹಿಸಿ, ಪ್ರತಿಭಟಿಸಲಾಯಿತು. ಸಿಪಿಐ(ಎಂ) ಪಕ್ಷದ ಜಿಲ್ಲಾ ಕಾರ್ಯದರ್ಶಿ ಜಿ.ರಾಮಕೃಷ್ಣ ಹಾಜರಿದ್ದು ಮಾರ್ಗದರ್ಶನ ನೀಡಿದರು.

ತಲೆ ಕೆಡಿಸಿಕೊಳ್ಳದ ಜನ ಪ್ರತಿನಿಧಿಗಳು

ಹುಸ್ಕೂರಿನಲ್ಲಿ ಪ್ರತಿವರ್ಷವೂ ದಲಿತರ ಮೇಲೆ ದೌರ್ಜನ್ಯಗಳು ನಡೆಯುತ್ತಲೆ ಇವೆ. ಗ್ರಾಮ ಪಂಚಾಯ್ತಿ, ತಾಲ್ಲೂಕು ಪಂಚಾಯ್ತಿ, ಜಿಲ್ಲಾ ಪಂಚಾಯ್ತಿಯ ಜನಪ್ರತಿನಿಧಿಗಳೂ ಕೂಡ, ತಲೆ ಕೆಡಿಸಿಕೊಂಡಿಲ್ಲ. ಅಷ್ಟೇ ಅಲ್ಲ. ಹುಸ್ಕೂರು ಮಾಜಿ ಶಾಸಕ ಜೆಡಿ(ಎಸ್) ಅನ್ನದಾನಿಯ ತವರೂರು. ಇವರೂ ಕೂಡ ದಲಿತ ಸಮುದಾಯದವರೇ ಆದರೂ ಈ ಘಟನೆ ಗೊತ್ತೇ ಇಲ್ಲವೇನೋ ಎಂಬಂತೆ ಇದ್ದಾರೆ. ಹಾಗೂ ಮಳವಳ್ಳಿ ಮೀಸಲು ಕ್ಷೇತ್ರದಲ್ಲಿ ಗೆದ್ದಿರುವ ನರೇಂದ್ರ ಸ್ವಾಮಿಯವರು ಕೂಡ ಈ ಬಗ್ಗೆ ಗಮನ ಕೊಟ್ಟಿಲ್ಲ. ಮಳವಳ್ಳಿಯಲ್ಲಿ ಕ್ರೈಸ್ತ ಚರ್ಚ್ ಮೇಲೆ ದಾಳಿ ನಡೆದಾಗಲೂ ಕೂಡ ಇದು ದಾಳಿಯಲ್ಲ, ಕಳ್ಳತನವೆಂದು 'ಸಾಬೀತು' ಪಡಿಸುವಲ್ಲಿ ಯಶಸ್ವಿಯಾದರು. ಜನಪ್ರತಿನಿಧಿಗಳೂ ಕೂಡ, ದಲಿತರ ಪರವೆಂದು ಹೇಳುವ ಮಂದಿ ದಲಿತ ವಿರೋಧಿಯಾಗಿ, ನಡೆದುಕೊಳ್ಳುತ್ತಿದ್ದಾರೆ. ಬರೀ ಮತಗಳ ಲೆಕ್ಕಾಚಾರ ನಡೆಯುತ್ತಿದೆ. ಹಲಗೂರು ಹೋಬಳಿ ವ್ಯಾಪ್ತಿಯಲ್ಲಿ ಜಾತಿ ದೌರ್ಜನ್ಯಗಳು, ಬಹಿಷ್ಕಾರ, ಹಲ್ಲೆ ಇತ್ಯಾದಿಗಳು ಹೆಚ್ಚೆಚ್ಚು ನಡೆಯುತ್ತಿದ್ದರೂ ತಾಲ್ಲೂಕು ಮತ್ತು ಜಿಲ್ಲಾ ಆಡಳಿತ ಮೌನವಾಗಿದೆ.

ಪ್ರತಿಭಟನೆಗಳು ಮತ್ತು ಕಾಲ್ನಡಿಗೆ ಜಾಥಾಗಳು

ಮಾರ್ಚ್ 30 ರಂದು ಮಳವಳ್ಳಿ ಪುರಸಭೆಯಿಂದ ಸಿಪಿಐ(ಎಂ) ಪಕ್ಷದ ನೇತೃತ್ವದಲ್ಲಿ ಮೆರವಣಿಗೆ ಹೊರಟು, ಡಿವೈಎಸ್‌ಪಿ ಕಛೇರಿಗೆ ಮುತ್ತಿಗೆ ಹಾಕಿ, ದಲಿತರ ಮೇಲೆ ಹೆಚ್ಚುತ್ತಿರುವ ದೌರ್ಜನ್ಯ ತಡೆಗಟ್ಟಬೇಕು. ದೌರ್ಜನ್ಯಕ್ಕೊಳಗಾದ ದಲಿತರಿಗೆ ಪರಿಹಾರ ನೀಡಬೇಕು, ತಪಿತಸ್ಥರ ಮೇಲೆ ಕಾನೂನು ಕ್ರಮ ಕೈಗೊಳ್ಳಬೇಕು. ಹುಸ್ಕೂರು ಪ್ರಕರಣದಲ್ಲಿ ದಲಿತರ ಮೇಲೆ ಪ್ರತಿಕಾರದ ಸುಳ್ಳುಕೇಸು ದಾಖಲಿಸಿರುವ ಪಿಎಸ್‌ಐ ಧನರಾಜ್‌ರನ್ನು ಅಮಾನತ್ತುಗೊಳಿಸ ಬೇಕು ಎಂದು ಆಗ್ರಹಿಸಿ ಡಿವೈಎಸ್‌ಪಿಗೆ ಮನವಿ ಸಲಿಸಲಾಯಿತು. ಈ ಪ್ರತಿಭಟನೆಯಲ್ಲಿ ಮನವಿ ಸ್ವೀಕರಿಸಿದ ಡಿವೈಎಸ್‌ಪಿ ಉತ್ತಪ್ಪ ಮಾತನಾಡಿ ದಲಿತರ ಮೇಲೆ ಕೊಲೆಯತ್ನ ಮೊಕದ್ದಮೆ ಹಾಕಿರುವುದು ಸರಿಯಲ್ಲವಾದರೂ ಈ ಕುರಿತು ಪರಿಶೀಲಿಸಿ ಕ್ರಮವಹಿಸುವುದಾಗಿ, ಮತ್ತೆ ಇಂತಹ ಘಟನೆಗಳು ಮರುಕಳಿಸದಂತೆ ಎಚ್ಚರಿಕೆ ಕ್ರಮ ವಹಿಸುವುದಾಗಿ ತಿಳಿಸಿದರು.

ಈ ಪ್ರತಿಭಟನೆಯಲ್ಲಿ ಸಿಪಿಐ(ಎಂ) ಮುಖಂಡರಾದ ಆರ್. ಕೃಷ್ಣ, ಬಸವರಾಜು, ಸರೋಜಮ್ಮ ಸಾವುಕಯ್ಯ, ಗೌರಮ್ಮ, ನಂಜುಂಡಮ್ಮ, ಮಹದೇವಮ್ಮ ಮತ್ತು ಸಿಪಿಐ(ಎಂ) ಪಕ್ಷದ ಜಿಲ್ಲಾ ಮುಖಂಡರಾದ ಜಿ. ರಾಮಕೃಷ್ಣ, ಟಿ.ಎಲ್. ಕೃಷ್ಣೇಗೌಡ, ದೇವಿ, ಕುಮಾರಿ, ಯುವಜನ ಮುಖಂಡರಾದ ಎನ್. ಲಿಂಗರಾಜ ಮೂರ್ತಿ ವಿದ್ಯಾರ್ಥಿ ಮುಖಂಡ ರಾದ ರಾಜೇಂದ್ರ ಸಿಂಗ್ ಬಾಬು ಹಾಜರಿದ್ದರು.

ಪಾದಯಾತ್ರೆ

ಜಿಲ್ಲಾಡಳಿತದ ಕಡೆಯಿಂದ ಪ್ರಕರಣದಲ್ಲಿ ತುರ್ತು ಸ್ಪಂದನೆ ದೊರಕದ ಪರಿಸ್ಥಿತಿಯಲ್ಲಿ ಇದೇ ಬೇಡಿಕೆಗಳ ಆಧಾರದಲ್ಲಿ ಏಪ್ರಿಲ್ 14, 2012ರಂದು ಹುಸ್ಕೂರು ಗ್ರಾಮದಿಂದ ಮಂಡ್ಯದ ಜಿಲ್ಲಾಧಿಕಾರಿಗಳ ಕಚೇರಿಯ ವರೆಗೆ ಪಾದಯಾತ್ರೆ ನಡೆಸಲಾಯಿತು. ಸುಮಾರು 150 ಜನರು 40 ಕಿ.ಮಿ. ದೂರ ಪಾದಯಾತ್ರೆಯಲ್ಲಿ ಸಾಗಿ ಜಿಲ್ಲಾಧಿಕಾರಿಗಳ ಕಛೇರಿಯ ಮುಂದೆ ಧರಣ ನಡೆಸಿದರು. ಜಿಲ್ಲಾಧಿಕಾರಿಗಳಿಗೆ ಬೇಡಿಕೆಗಳ ಸಂಬಂಧ ಮನವಿ ನೀಡಲಾಯಿತು. ಇದಾದ ನಂತರ ಏಪ್ರಿಲ್ ಕೊನೆಯ ವಾರದಲ್ಲಿ ತಹಸೀಲ್ದಾರರು, ಸಮಾಜ ಕಲ್ಯಾಣ ಅಧಿಕಾರಿಗಳು ಹುಸ್ಕೂರು ಗ್ರಾಮಕ್ಕೆ ಭೇಟಿ ನೀಡಿದ್ದಾರೆ. ಆದರೆ ಅವರು ಸಂಘಟನೆಯ ಕಾರ್ಯಕರ್ತರನ್ನು ಬಿಟ್ಟು ಪ್ರತ್ಯೇಕವಾಗಿ ದಲಿತರನ್ನು ಭೇಟಿ ಮಾಡಿದ್ದಾರೆ. ದೌರ್ಜನ್ಯಕ್ಕೆ ತುತ್ತಾದ ಜನರು ಎಲ್ಲ ಮಾಹಿತಿ ನೀಡಿದರೂ ಇಲ್ಲಿಯವರೆಗೆ ಯಾವುದೇ ಕ್ರಮ ಕೈಗೊಂಡಿರುವ ಲಕ್ಷಣಗಳು ಕಂಡು ಬಂದಿಲ್ಲ.

ಆದರೆ ಚಳುವಳಿ ಈ ಪ್ರಶ್ನೆಯನ್ನು ಹಾಗೇ ಕೈ ಬಿಡಲು ಸಿದ್ಧವಿಲ್ಲ. ಅದು ತನ್ನ ಪ್ರಯತ್ನವನ್ನು ಮುಂದುವರಿಸಿದೆ. ಅದರ ಫಲವಾಗಿ ಏಪ್ರಿಲ್ 29 ರಂದು ತಹಸೀಲ್ದಾರರು ಮುಖಂಡರನ್ನು ಮಾತುಕತೆಗೆ ಕರೆದಿದ್ದಾರೆ. ದೌರ್ಜನ್ಯಕ್ಕೆ ತುತ್ತಾದವರಿಗೆ ಏನು ಪರಿಹಾರ ಸಿಗಬೇಕಾಗಿದೆ ಎಂಬ ಬಗ್ಗೆ ಅಭಿಪ್ರಾಯ ಕೇಳಿದ್ದಾರೆ.

ಸಿಪಿಐ(ಎಂ) ಮುಖಂಡರಾದ ಪುಟ್ಟಮಾದು, ಲಿಂಗರಾಜ ಮೂರ್ತಿ, ಕೃಷ್ಣ ಮುಂತಾದವರು ಮಾತುಕತೆಯಲ್ಲಿ ಪಾಲ್ಗೊಂಡಿದ್ದಾರೆ. ನಮ್ಮ ಸಾಮಾಜಿಕ ವ್ಯವಸ್ಥೆಯಲ್ಲಿ ನೂರು ಕಾನೂನುಗಳಿದ್ದರೂ ನೊಂದ ದಲಿತರಿಗೆ ನ್ಯಾಯ ಸಿಗುವುದು ಅಷ್ಟೇನು ಸುಲಭದ ವಿಚಾರವಲ್ಲ. ಏಕೆಂದರೆ ಈ ಕಾನೂನುಗಳನ್ನು ಜಾರಿ ಮಾಡುವ ಆಡಳಿತ ಯಂತ್ರದ ಜುಟ್ಟನ್ನು ಬಲಾಢ್ಯ ಜಾತಿಯ ಪಟ್ಟಭದ್ರರೇ ಹಿಡಿದುಕೊಂಡಿರುತ್ತಾರೆ.

ಆದರೆ ನ್ಯಾಯಕ್ಕಾಗಿ ನಡೆಯುವ ಹೋರಾಟ ಇಂಥದ್ದನ್ನೆಲ್ಲಾ ಎದುರಿಸಿಯೇ ಸಾಗಬೇಕಾಗುತ್ತದೆ. ಮಾನವೀಯತೆಯ ಪರ ಇರುವವರೆಲ್ಲಾ ಇದಕ್ಕೆ ಕೈ ಜೋಡಿಸಬೇಕಾಗುತ್ತದೆ.

ಮಮತಾ ಬ್ಯಾನರ್ಜಿ ಅಂಧಾ ದರ್ಬಾರ್ ಕಂಗೆಟ್ಟ ಪಶ್ಚಿಮ ಬಂಗಾಳದ ಜನತೆ

ಪಶ್ಚಿಮ ಬಂಗಾಳಕ್ಕೆ ಮತ್ತೆ ಸಂಕಷ್ಟದ ಕಾಲ ಎದುರಾಗಿದೆ. ಕಳೆದ ಮೂರುವರೆ ದಶಕಗಳ ಕಾಲ ರಾಜಕೀಯ ಸ್ಥಿರತೆ, ಪ್ರಜಾಸತ್ತಾತ್ಮಕ ಹಕ್ಕುಗಳಿಗೆ ರಕ್ಷಣೆ ಕಂಡ ರಾಜ್ಯದಲ್ಲಿ ಈಗ ಗಂಭೀರವಾದ ಆತಂಕದ ವಾತಾವರಣ. ಅದು ಕೇವಲ ಸಿಪಿಐ(ಎಂ) ಮತ್ತು ಎಡರಂಗಗಳ ಬೆಂಬಲಿಗರಿಗೆ ಮಾತ್ರವಲ್ಲ. ಪಕ್ಷ ರಾಜಕಾರಣದಿಂದ ದೂರವಿರುವ ಅಧ್ಯಾಪಕರು, ವಿಜ್ಞಾನಿಗಳೂ ಕೂಡ ತೃಣಮೂಲ ಸರ್ಕಾರದ ತೀವ್ರ ದಾಳಿಗೆ ತುತ್ತಾಗುತ್ತಿದ್ದಾರೆ. ಅದೂ ಕೂಡ ತಮ್ಮ ಸಹಜ, ಸಾಮಾನ್ಯ ಪ್ರಜಾಸತ್ತಾತ್ಮಕ ಹಕ್ಕುಗಳನ್ನು ಚಲಾಯಿಸಿದ್ದಕ್ಕಾಗಿ ಎಂಬುದು ವಾತಾವರಣದ ಗಂಭೀರತೆಯನ್ನು ತೋರಿಸುತ್ತದೆ.

ಭೂ ಸುಧಾರಣಾ ಕಾಯ್ದೆಗೆ ಜನವಿರೋಧಿ ತಿದ್ದುಪಡಿ

ಎಡರಂಗ ಸರ್ಕಾರದ ಜನಪರ ಭೂ ಸುಧಾರಣೆ ಮುಂತಾದ ಕಾರ್ಯಗಳನ್ನು ಸಾಧನೆಗಳನ್ನು ಬುಡಮೇಲು ಮಾಡಿ ದಿಕ್ಕು ತಪ್ಪಿಸುವ ಕೆಲಸಕ್ಕೆ ಈಗಿನ ಮಮತಾ ಬ್ಯಾನರ್ಜಿ ಸರ್ಕಾರ ಕೈ ಹಾಕಿದೆ.

ಈಗ ಮಮತಾ ಸರ್ಕಾರ ಹಿಂದಿನ ಎಡರಂಗ ಸರ್ಕಾರದ ಒಂದೊಂದೇ ನೀತಿಗಳನ್ನು ಬದಲಾಯಿಸುತ್ತಾ ರಾಜ್ಯದ ಪ್ರಗತಿಯನ್ನು ಹಿಮ್ಮುಖವಾಗಿ ಕೊಂಡೊಯ್ಯುತ್ತಿದೆ. ಇದರ ಇನ್ನೊಂದು ಹೆಜ್ಜೆಯಾಗಿ ಪಶ್ಚಿಮ ಬಂಗಾಳ ಭೂ ಸುಧಾರಣಾ ಕಾಯ್ದೆಗೆ ತಿದ್ದುಪಡಿ ತರಲು ಸರ್ಕಾರ ಟೊಂಕ ಕಟ್ಟಿ ನಿಂತಿದೆ. ಉದ್ಯಮಿಗಳು, ಕೈಗಾರಿಕೆಗಳ ಸ್ಥಾಪನೆಗೆ ಅನುಕೂಲ ಮಾಡಿಕೊಡುವ ಹೆಸರಿನಲ್ಲಿ ಭೂ ಸುಧಾರಣಾ ಕಾನೂನು ತಿದ್ದುಪಡಿ ಮುಂದಿಟ್ಟಿದ್ದಾರೆ. ಕೈಗಾರಿಕೆ ಸ್ಥಾಪನೆಗೆ ಅಗತ್ಯ ಮಿತಿಗಿಂತ ಹೆಚ್ಚಿನ ಭೂಮಿಯನ್ನು ಸಚಿವ ಸಂಪುಟದ ಒಪ್ಪಿಗೆ ಮೇರೆಗೆ ಇಟ್ಟುಕೊಳ್ಳ ಬಹುದು ಎನ್ನುವ ಪ್ರಸ್ತಾಪ ಸರ್ಕಾರವನ್ನು ಇಟ್ಟಿದೆ. ಈ ಪ್ರಸ್ತಾಪಕ್ಕೆ ಪ್ರತಿಪಕ್ಷ ಎಡರಂಗ ತೀವ್ರ ವಿರೋಧ ವ್ಯಕ್ತಪಡಿಸಿದೆ.

ಚಾರಿತ್ರಿಕ ಭೂಸುಧಾರಣಾ ಹೋರಾಟದ ಫಲದ ಆಧಾರದಲ್ಲಿ ಎಡರಂಗ 1978ರಲ್ಲಿ ಅಧಿಕಾರಕ್ಕೆ ಬಂದಿತ್ತು. ಭೂಮಿ ಸಂಬಂಧದ ಪ್ರಶ್ನೆ ಆಧಾರದಲ್ಲಿ ರಾಜ್ಯದಲ್ಲಿ ದೊಡ್ಡ ರೀತಿಯ ಸಾಮಾಜಿಕ ಬದಲಾವಣೆ ತರಲಾಗಿತ್ತು. ಈಗ ಈ ಸಾಧನೆಯ ಬುಡವನ್ನೇ ಅಲುಗಾಡಿಸುವ ಯತ್ನವನ್ನು ಮಮತಾ ಮಾಡಿದ್ದಾರೆ.

ಮಾ, ಮಾಟಿ, ಮನುಷ್ಯ ಎಂಬ ಜನಪರ ಘೋಷಣೆಗಳ ಆಧಾರದಲ್ಲಿ ಚುನಾವಣೆ ಎದುರಿಸಿದ್ದ ಮಮತಾ ತನ್ನ ಕಾರ್ಪೊರೇಟ್ ಹಿತಾಸಕ್ತಿಯ ಮುಖವನ್ನು ಬಿಚ್ಚಿಟ್ಟಿದ್ದಾರೆ.

ಇದರ ಮೊದಲ ಸೂಚನೆ ದೊರೆತದ್ದು ಲೋಕಸಭಾ ಚುನಾವಣೆ ಬಳಿಕ ಉಳುಮೆ ಯಂತ್ರಗಳಿಂದ ಎಡರಂಗದ ಭೂ ಸುಧಾರಣೆಯಲ್ಲಿ ಭೂಮಿ ಪಡೆದ ಬಡರೈತರ

ಮಹಾ ಪರಿವರ್ತನೆ ತರುತ್ತೇನೆ ಎಂದು ಭರವಸೆ ನೀಡಿ ಅಧಿಕಾರ ಹಿಡಿದಿರುವ ಮಮತಾ ಬ್ಯಾನರ್ಜಿಯವರ ತೃಣಮೂಲ ಕಾಂಗ್ರೆಸ್‌ನ ಆಡಳಿತದ ಬಗೆಗೆ ಜನರಿಗೆ ತೀವ್ರ ಭ್ರಮನಿರಸನ ಆರಂಭವಾಗಿದೆ. ಆದರೆ ಪಶ್ಚಿಮ ಬಂಗಾಳ ರಾಜ್ಯದಲ್ಲಿ ಇಂದು ಏನು ನಡೆಯುತ್ತಿದೆಯೋ ಅದು ನಿಜಕ್ಕೂ ಪ್ರಜಾಪ್ರಭುತ್ವಕ್ಕೆ ಗಂಭೀರ ಅಪಾಯ ತರುತ್ತಿದೆ. ದೇಶದ ಜನತೆ ಇದನ್ನು ಗಮನಿಸಬೇಕಿದೆ.

ಬೆಳೆ ಹಾನಿ ಮಾಡುವ ಮೂಲಕ. ಈ ಕೃತ್ಯದಲ್ಲಿ ಟಿಎಂಸಿ ಗೂಂಡಾಗಳು ಭೂಮಾಲಕರ ಜೊತೆಯಲ್ಲಿ ನೇರವಾಗಿ ಭಾಗಿಯಾಗಿದ್ದರು. ಬರ್ದ್ವಾನ್, 24 ಪರಗಣ ಮತ್ತು ಬಿರ್ಭಮ್ ಜಿಲ್ಲೆಗಳಲ್ಲಿ ರೈತರ ಮೇಲೆ ಈ ಗೂಂಡಾ ದಾಳಿ ನಡೆದಿತ್ತು. ರಾಜ್ಯದಲ್ಲಿ ವ್ಯಾಪಕ ಹಿಂಸಾಚಾರ ನಡೆಸಲಾಯಿತು. ಬುಡಕಟ್ಟು ಜನರ ಭೂಮಿ ಮೇಲೂ ಅತಿಕ್ರಮಣ ಮಾಡಲಾಯಿತು.



ಇದಾಗಿ, ಮಮತಾ ಸರ್ಕಾರ ಅಸ್ತಿತ್ವಕ್ಕೆ ಬಂದ ಬಳಿಕ, ಎಡರಂಗದ ಭೂಸುಧಾರಣೆಯನ್ನು ಭೂ ದರೋಡೆ ಎಂದು ಬಣ್ಣಿಸಲಾಯಿತು. ಭೂ ಸುಧಾರಣೆ ಹಿಮ್ಮುಖಗೊಳಿಸಲು ವಿಶೇಷ ಸಮಿತಿಯನ್ನು ರಚಿಸಲಾಯಿತು. ಸರ್ಕಾರದ ಆಡಳಿತ ಯಂತ್ರವನ್ನು ದುರುಪಯೋಗಪಡಿಸಿ ಎಡ ಕಾರ್ಯಕರ್ತರ ಮೇಲೆ ಆಕ್ರಮಣಗಳನ್ನು ನಡೆಸಿತು. ಶ್ರೀಮಂತ ರೈತರು ಮತ್ತು ಭೂಮಾಲಕರ ಪರವಾದ ಕ್ರಮಗಳನ್ನು ಕೈಗೊಳ್ಳಲಾಯಿತು.

ರೈತರಿಗೆ ಕನಿಷ್ಟ ಬೆಂಬಲ ಬೆಲೆ ಘೋಷಿಸುವಲ್ಲೂ ಈ ತಾರತಮ್ಯದ ಧೋರಣೆ ಮುಂದುವರಿಯಿತು. ಇದರಿಂದಾಗಿ ರೈತರು ಸಂಕಷ್ಟಕ್ಕೆ ಸಿಲುಕಿ, ಬೆಳೆಯಲ್ಲಿ ಗಣನೀಯ ಇಳಿಮುಖ ಕಂಡುಬಂತು. ಮೂರುವರೆ ದಶಕಗಳಲ್ಲಿ ರಾಜ್ಯದಲ್ಲಿ ಇದೇ ಮೊದಲ ಬಾರಿಗೆ ಗಂಭೀರ ಕೃಷಿ ಬಿಕ್ಕಟ್ಟು ತಲೆದೋರಿದೆ.

ಸಾಹಿತಿ, ವಿಜ್ಞಾನಿಗಳ ಮೇಲೆ ದಾಳಿ

ಮಮತಾ ಸರ್ಕಾರ ರೈತರನ್ನು ಮಾತ್ರವಲ್ಲ, ಸಾಹಿತ್ಯ ಹಾಗೂ ಬೌದ್ಧಿಕ ವಲಯವನ್ನೂ ಬಿಡಲಿಲ್ಲ. ಉನ್ನತ ಸ್ಥರದಿಂದ ಕೆಳಹಂತದವರೆಗಿ ಆಡಳಿತದ ಮೇಲೆ ಹಿಡಿತ ಕಳೆದುಕೊಂಡಿರುವ ಸರ್ಕಾರ ಜನರಿಗಾಗಿ ಆಡಳಿತವನ್ನು ದುಡಿಸುವಲ್ಲಿ ವಿಫಲವಾಗಿದ್ದು ತನ್ನ ದ್ವೇಷಪೂರಿತ ರಾಜಕೀಯ ದುರುದ್ದೇಶಗಳಿಗಾಗಿ ಆಡಳಿತ ಯಂತ್ರವನ್ನು ದುರ್ಬಳಕೆ ಮಾಡುತ್ತಿದೆ.

ತನ್ನ ವಿರುದ್ಧದ ಟೀಕೆಯನ್ನೂ ಕೇಳುವ ಪರಿಸ್ಥಿತಿಯಲ್ಲೂ ಈ ಸರ್ಕಾರ ಮತ್ತು ಸರ್ಕಾರ ನಡೆಸುವ ಮುಖಂಡರು ಇಲ್ಲ. ಸರ್ಕಾರದ ಆಡಳಿತದ ವಿರುದ್ಧ ವರದಿ ಮಾಡಿದ ಪತ್ರಿಕೆಗಳನ್ನು ಸಾರ್ವಜನಿಕ ಗ್ರಂಥಾಲಯಗಳಿಂದ ಎತ್ತಂಗಡಿ ಮಾಡುವ ನಿರ್ಧಾರ ತಳೆಯಿತು. ಜನರ ಹಣದಿಣದ ನಡೆಯುವ ಸಾರ್ವಜನಿಕ ಗ್ರಂಥಾಲಯದಿಂದ ಜನರು ತಮ್ಮ ಇಚ್ಚೆಯ ಅನುಸಾರ ಮಾಹಿತಿ ಪಡೆಯುವ ಹಕ್ಕನ್ನೂ ಸರ್ಕಾರ ಕಸಿದುಕೊಂಡಿದೆ. ಸರ್ಕಾರದ ತತ್ತೂರಿಯಾಗದ ರಾಜ್ಯದ ಅತಿ ಹೆಚ್ಚು ಪ್ರಸರಣ ಹೊಂದಿರುವ ಎರಡು ಪತ್ರಿಕೆಗಳಿಗೆ ಮತ್ತು ಎಲ್ಲ ಇಂಗ್ಲಿಷ್ ಪತ್ರಿಕೆಗಳಿಗೆ ಗಧಾಪ್ರಹಾರ ಮಾಡಿ ಗ್ರಂಥಾಲಯಗಳು ಅವನ್ನು ತರಿಸದಂತೆ ನಿಷೇಧ ಹೊರಡಿಲಾಗಿದೆ. ಇತ್ತೀಚೆಗೆ ತೃಣಮೂಲ್ ಟಿಕೆಟ್‌ನಿಂದ ರಾಜ್ಯಸಭೆಗೆ ಆಯ್ಕೆಯಾದ ಇಬ್ಬರು ಸಂಪಾದಕರು-ಮಾಲಕರ ಮೂರು ದಿನಪತ್ರಿಕೆಗಳಿಗೆ ಮಾತ್ರ ಸರ್ಕಾರ ಕೃಪೆಯನ್ನು ತೋರಿಸಿದೆ.

ವ್ಯಂಗ್ಯ ಚಿತ್ರ ಕಳಿಸುವಂತಿಲ್ಲ

ಮಮತಾ ಬ್ಯಾನರ್ಜಿ ಅವರ ನಾಯಕತ್ವದ ಶೈಲಿಯ ಬಗ್ಗೆ ವ್ಯಂಗ್ಯ ಚಿತ್ರವೊಂದನ್ನು ಅಂತರ್ಜಾಲದಲ್ಲಿ ತಮ್ಮ ಸ್ನೇಹಿತರಿಗೆ ರವಾನಿಸಿದ ಜಾಧವ್‌ಪುರ ವಿಶ್ವವಿದ್ಯಾನಿಲಯದ ಪ್ರಾಧ್ಯಾಪಕ ಅಂಬಿಕೇಶ್ ಮಹಾಪಾತ್ರ ಅವರನ್ನು ಹೀನಾಯವಾಗಿ ನಡೆಸಿಕೊಳ್ಳಲಾಗಿದೆ. ತೃಣಮೂಲ ಗೂಂಡಾ ಅವರ ಮೇಲೆ ದಾಳಿ ಮಾಡಿದ್ದಾರೆ. ಈ ಅಧ್ಯಾಪಕರನ್ನು ಜೈಲಿಗೆ ಅಟ್ಟಲಾಗಿತ್ತು. ಎರಡು ದಿನಗಳ ನಂತರ ಜಾಮೀನಿನ ಮೇಲೆ ಬಿಡುಗಡೆ ಮಾಡಲಾಗಿದೆ. ಆದರೆ ಹಲ್ಲೆ ಮಾಡಿದ ತೃಣ ಮೂಲ ಗೂಂಡಾಗಳನ್ನು ಬಂಧಿಸಿದಂತೆ ಮಾಡಿ ತಕ್ಷಣ ಬಿಡುಗಡೆ ಮಾಡಲಾಗಿದೆ.

ಇದರೊಂದಿಗೆ ಜನರ ಮಾತನಾಡುವ ಹಕ್ಕು ಮತ್ತು ಅಭಿಪ್ರಾಯ ವ್ಯಕ್ತಪಡಿಸುವ ಹಕ್ಕನ್ನು ನಿರ್ಬಂಧಿಸುವ ಗಂಭೀರ ಪ್ರಕ್ರಿಯೆಗೆ ಪಶ್ಚಿಮ ಬಂಗಾಳ ಮುನ್ನುಡಿ ಬರೆದಿದೆ.

ಗುಡಿಸಲು ನಿವಾಸಿಗಳ ಪರ ಮಾತನಾಡೀರಿ ಜೋಕೆ

ಅಂತರ ರಾಷ್ಟ್ರೀಯ ಖ್ಯಾತಿಯ ಅಣುಜೀವಶಾಸ್ತ್ರ ವಿಗ್ನಾನಿಗಳೂ, ಕೋಲ್ಕೋತ್ತಾದ ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ಸೈನ್ಸ್ ಎಜುಕೇಷನ್ ಆಂಡ್ ರಿಸರ್ಚ್ ಸಂಸ್ಥೆಯ ಹಿರಿಯ ಪ್ರಾಧ್ಯಾಪಕರೂ ಆಗಿರುವ ಪಾರ್ಥೋ ಸರೋಥಿ ರಾಯ್ ಅವರನ್ನು ಸರ್ಕಾರ ಬಿಟ್ಟಿಲ್ಲ. ಈಶಾನ್ಯ ಕೊಲ್ಕೊತ್ತಾದಲ್ಲಿ ಸ್ಲಂ ಒಂದರ ಎತ್ತಂಗಡಿ ವಿರುದ್ದ ಪ್ರತಿಭಟನೆಯಲ್ಲಿ ಪಾಲ್ಗೊಂಡ ಕಾರಣಕ್ಕೆ ಸರ್ಕಾರ ವಿಗ್ನಾನಿ ಪಾರ್ಥೊ ಅವರ ಮೇಲೇ ಮೊಕದ್ದಮೆ ಹೂಡಿದೆ. ಇದರ ಸಂಬಂಧವಾಗಿ ದೇಶದ ಹಲವಾರು ಖ್ಯಾತ ವಿಗ್ನಾನಿಗಳು ಮತ್ತು ಚಿಂತಕರು ಪ್ರಧಾನಿ ಮನಮೋಹನ ಸಿಂಗ್ ಅವರಿಗೆ ಪತ್ರ ಬರೆದು ದೌರ್ಜನ್ಯವನ್ನು ಖಂಡಿಸಿದ್ದಾರೆ.

ಈ ಮೇಲಿನ ದಾಳಿಗಳ ಬಗ್ಗೆ ಆಘಾತಗೊಂಡಿರುವ ಪಶ್ಚಿಮ ಬಂಗಾಳದ ಮತ್ತು ದೇಶದ ಹಿರಿಯ ಲೇಖಕರು, ಸಾಹಿತಿಗಳು ಮತ್ತು ಚಿಂತಕರುಗಳು ಈ ಬಗ್ಗೆ ಬಹಿರಂಗ ಹೇಳಿಕೆಯೊಂದನ್ನು ಪ್ರಕಟಿಸಿದ್ದಾರೆ. ದಾಳಿ ವಿರುದ್ಧ ದೇಶಾದ್ಯಂತ ಪ್ರತಿಭಟನೆ, ವಿರೋಧ ವ್ಯಕ್ತಪಡಿಸುವಂತೆ 30ಕ್ಕೂ ಹೆಚ್ಚು ಬುದ್ಧಿಜೀವಿಗಳು ಕರೆ ನೀಡಿದ್ದಾರೆ. ವ್ಯಾಪಕ ಪ್ರತಿಭಟನೆಗಳೂ ಸಹ ವ್ಯಕ್ತವಾಗಿವೆ.

ಪಠ್ಯ ಪುಸಕ್ತಗಳ ತಿರುಚುವಿಕೆ

ಎಡರಂಗ ಸರ್ಕಾರದ ಅವಧಿಯಲ್ಲಿ ಪಠ್ಯ ಪುಸ್ತಕಗಳಲ್ಲಿ ಮಕ್ಕಳ ಮನಸ್ಸಿನಲ್ಲಿ ಕಮ್ಯುನಿಸಂ ಕುರಿತು ಒಲವು ಮೂಡುವಂತೆ ಪಾಠಗಳನ್ನು


ಪುಟ 14ಕ್ಕೆ

ಭಾರತದ ಹಣಕಾಸು 'ಯೋಗ್ಯತೆ'ಯನ್ನು ಇಳಿಸಿದ ಯುಪಿಎ-2 ಸರಕಾರ

ಜಗತ್ತಿನ ಹಣಕಾಸು ಬಂಡವಾಳಕ್ಕೆ ಒಂದು ದೇಶ ಎಷ್ಟು ಆಕರ್ಷಣೀಯವಾಗಿದೆ ಎಂದು ಲೆಕ್ಕ ಹಾಕುವ (ರೇಟಿಂಗ್ ಕೊಡುವ) ಅಂತರ‍್ರಾಷ್ಟ್ರೀಯ ರೇಟಿಂಗ್ ಸಂಸ್ಥೆ 'ಸ್ಟಾಂಡರ್ಡ್ ಅಂಡ್ ಪೂರ್'(ಎಸ್&ಪಿ) ಭಾರತದ ರೇಟಿಂಗ್ ಅನ್ನು ಬಿಬಿಬಿ(-)ಗೆ ಇಳಿಸಿದೆ, ಅಂದರೆ 'ಸ್ಥಿರ'ದಿಂದ 'ನಕಾರಾತ್ಮಕ'ಕ್ಕೆ ಇಳಿಸಿದೆ ಎಂಬ ಸುದ್ದಿ ಬಂದಿದೆ. ಇದು ಹಣಕಾಸು ಬಂಡವಾಳಕ್ಕೆ ಇರುವ ಆಕರ್ಷಣೀಯತೆಯ ಅತೀ ಕೆಳಗಿನ ಮಟ್ಟವಂತೆ. ಅದು ಈ ವರ್ಷ ಭಾರತ ಆರ್ಥಿಕದ ಬೆಳವಣಿಗೆಯ ದರ 5.3ಶೇ. ಮಾತ್ರ ಇರುತ್ತದೆ ಎಂದು ಲೆಕ್ಕೆ ಹಾಕಿದೆ. ಭಾರತ ಸರಕಾರದ ವಕ್ತಾರರುಗಳ ಅಂದಾಜು ಕೂಡ ಆರ್ಥಿಕ ಬೆಳವಣಿಗೆಯ ನಿರೀಕ್ಷಿತ ದರ ಬಹಳ ಕಡಿಮೆಯಾಗುತ್ತದೆ ಎಂದಿತ್ತು. ಆದರೆ ಅವರ ಪ್ರಕಾರ 7ಶೇ. ಎಸ್&ಪಿ ಪ್ರಕಾರ ಅದು ಇನ್ನೂ ಬಹಳ ಕೆಳಗೆ ಹೋಗುವ ಸಂಭವವಿದೆ.

ಈ ರೇಟಿಂಗ್ ಇಳಿಯಲು ಮತ್ತೊಂದು ಕಾರಣ ಹಣಕಾಸು ಕೊರತೆಯ ಮಟ್ಟ. ಇದು ಒಂದು ದೇಶದ ಜಿಡಿಪಿಯ 3 ಶೇ.ಕ್ಕಿಂತ ಹೆಚ್ಚಿರಬಾರದಂತೆ. ಆದರೆ ಭಾರತದಲ್ಲಿ ಇದು 5.9ಶೇ. ತಲುಪಿದೆ, ಅಂದರೆ ರೂ. 5,21,980 ಕೋಟಿ. ಈ ಹಿಂದೆ ಈ ಅಂಕಣದಲ್ಲಿ ಗಮನಿಸಿದಂತೆ, ಸರಕಾರ ಉದ್ದೇಶಪೂರ್ವಕವಾಗಿಯೇ ಕಾರ್ಪೊರೇಟ್ ವಲಯಕ್ಕೆ ಮತ್ತು ಶ್ರೀಮಂತರಿಗೆ ವಿವಿಧ ರಿಯಾಯ್ತಿಗಳ ಮೂಲಕ ಬಿಟ್ಟು ಕೊಟ್ಟ ಸಂಪನ್ಮೂಲದ ಮೊತ್ತ ರೂ. 5,29,432 ಕೋಟಿ. ಅಂದರೆ ಈ ರಿಯಾಯ್ತಿಗಳನ್ನು ಕೊಟ್ಟಿರದಿದ್ದರೆ ಹಣಕಾಸು ಕೊರತೆ 3ಶೇ.ಕ್ಕಿಂತ ಕೆಳಗಿರುತ್ತಿತ್ತಷ್ಟೇ ಅಲ್ಲ, ಇರುತ್ತಲೇ ಇರಲಿಲ್ಲ!

ಆದರೆ ನವ-ಉದಾರವಾದಿಗಳು ತಾವು ಪ್ರತಿಪಾದಿಸುವ ನೀತಿಗಳ ಇಂತಹ ದುಷ್ಪರಿಣಾಮಗಳ ಬಗ್ಗೆ ಆತ್ಮವಿಮರ್ಶೆ ಮಾಡಿಕೊಳ್ಳುವ ಬದಲು, ಈ ಪರಿಸ್ಥಿತಿಯನ್ನು ಬಳಸಿಕೊಂಡು ಅಂತರ‍್ರಾಷ್ಟ್ರೀಯ ಹಣಕಾಸು ಬಂಡವಾಳವನ್ನು ಆಕರ್ಷಿಸುವ ಹೆಸರಲ್ಲಿ ಇನ್ನಷ್ಟು 'ಸುಧಾರಣೆ'ಗಳನ್ನು ತರಬೇಕೆಂದು ಒತ್ತಡ ಹಾಕುತ್ತಿದ್ದಾರೆ. ಚಿಲ್ಲರೆ ವ್ಯಾಪಾರದಲ್ಲಿ ಎಫ್‌ಡಿಐಗೆ ಅವಕಾಶ ಕೊಡಬೇಕು, ಜಿಎಸ್‌ಟಿ(ಸರಕುಗಳು ಮತ್ತು ಸೇವೆಗಳ ತೆರಿಗೆ) ಜಾರಿಗೆ ತರಬೇಕು, ಪೆನ್ಶನ್ ನಿಧಿಗಳ ನಿರ್ವಹಣೆಯಲ್ಲಿ ವಿದೇಶಿ ಹಣಕಾಸು ಕಾರ್ಪೊರೇಟುಗಳಿಗೆ 26 ಶೇ. ರವರೆಗೆ ಅನುಮತಿ, ವಿಮಾ ವಲಯದಲ್ಲಿ ವಿದೇಶಿ ಹೂಡಿಕೆಯ ಪ್ರಮಾಣವನ್ನು 26 ಶೇ.ದಿಂದ 49 ಶೇ.ದವರೆಗೆ ಹೆಚ್ಚಿಸಬೇಕು ಮತ್ತು ಭಾರತೀಯ ಬ್ಯಾಂಕುಗಳಲ್ಲಿ ವಿದೇಶಿ ಹೂಡಿಕೆದಾರರ ಮತದಾನದ ಹಕ್ಕಿನ ಮೇಲಿನ ಮಿತಿಯನ್ನು ತೆಗೆಯಬೇಕು ಅಥವ 10ಶೇ.ಕ್ಕಾದರೂ ಹೆಚ್ಚಿಸಬೇಕು ಎಂದು ಮತ್ತೆ ಬೊಬ್ಬಿಡಲಾರಂಭಿಸಿದ್ದಾರೆ. ಇವುಗಳಲ್ಲಿ ಕೊನೆಯ ಮೂರು ಯುಪಿಎ-1 ಸರಕಾರದ ಕಾಲದಿಂದಲೂ ಇದ್ದರೂ, ಆಗ ಅದು ಎಡಪಕ್ಷಗಳ ಬೆಂಬಲವನ್ನು ಅವಲಂಬಿಸಿದ್ದರಿಂದ ತರಲಾಗಲಿರಲಿಲ್ಲ. ವಾಸ್ತವವಾಗಿ, ಅದರಿಂದಾಗಿ ಭಾರತದ ಆರ್ಥಿಕಕ್ಕೆ 2008ರಲ್ಲಿ ಜಾಗತಿಕ ಆರ್ಥಿಕ ಬಿಕ್ಕಟ್ಟಿನ ಸುಂಟರಗಾಳಿಯಿಂದ ಸಾಕಷ್ಟು ರಕ್ಷಣೆ ಸಿಕ್ಕಿತು ಎಂಬುದನ್ನು ಈಗ ಎಲ್ಲರೂ ನೇರವಾಗಿ, ಪರೋಕ್ಷವಾಗಿ ಒಪ್ಪಿಕೊಳ್ಳುತ್ತಿದ್ದರೂ ಮತ್ತೆ ನವ-ಉದಾರವಾದಿಗಳು ಅದೇ ರಾಗ ಹಾಡುತ್ತಿದ್ದಾರೆ.




★

ಸಮ್ಮಿಶ್ರ ಸರಕಾರದ 'ಧರ್ಮ'ವೇ ಅಥವ ಪಕ್ಕಾ ದಿಕ್ಕುಗೇಡಿತನವೇ?

ಭಾರತದ ಆರ್ಥಿಕ ಬೆಳವಣಿಗೆ ನಿಧಾನಗೊಳ್ಳಲು, 'ಸುಧಾರಣೆ'ಗಳ ಬಗ್ಗೆ ನಿರ್ಧಾರಗಳನ್ನು ಕೈಗೊಳ್ಳದಿರಲು ಸಮ್ಮಿಶ್ರ ಸರಕಾರದ ಪ್ರಜಾಪ್ರಭುತ್ವ ಕಾರಣ ಎಂದು ವಾಶಿಂಗ್ಟನ್‌ನಲ್ಲಿ ಯುಪಿಎ-2 ಸರಕಾರ ಮುಖ್ಯ ಆರ್ಥಿಕ ಸಲಹೆಗಾರರು ಹೇಳಿರುವುದು ವಿವಾದದ ಸಂಗತಿಯಾಗಿ ಬಿಟ್ಟಿದೆ. 2014ರ ಚುನಾವಣೆಗಳ ನಂತರ ಭಾರತದ ಆರ್ಥಿಕ ಬೆಳವಣಿಗೆ ದರ ಮತ್ತೆ ಏರಲಿದೆ ಎಂದು ಅವರು ನವ-ಉದಾರವಾದಿಗಳಲ್ಲಿ ಉತ್ಸಾಹ ತುಂಬಲು ಪ್ರಯತ್ನಿಸಿದ್ದಾರೆ. ಆದರೆ ಭಾರತದ ಆರ್ಥಿಕ ಬೆಳವಣಿಗೆ ನಿಧಾನಗೊಳ್ಳಲು ನಿಜವಾಗಿಯೂ ಈ ಸಮ್ಮಿಶ್ರ ಸರಕಾರದ 'ಧರ್ಮ' ಕಾರಣವೇ?

ಅಲ್ಲ, ಇದು ಯುಪಿಎ-2 ಸರಕಾರದ ದಿಕ್ಕೇಡಿತನವನ್ನು ಮರೆ ಮಾಚಲು ಕೊಡುವ ಕುಂಟು ನೆಪವಷ್ಟೇ ಎಂದು ವಿಶ್ಲೇಷಕರು ಹೇಳುತ್ತಾರೆ. ಯುಪಿಎ-1 ಸರಕಾರ ಅಮೆರಿಕಾದೊಡನೆ ಪರಮಾಣು ವ್ಯವಹಾರ ಕುದುರಿಸ ಬಯಸಿದಾಗ, ಆಗ ಹೊರಗಿನಿಂದ ಬೆಂಬಲ ನೀಡುತ್ತಿದ್ದ ಎಡಪಕ್ಷಗಳು ಇದನ್ನು ಬಲವಾಗಿ ವಿರೋಧಿಸಿದರೂ, 'ಸಾಮಾನ್ಯ ಕನಿಷ್ಟ ಕಾರ್ಯಕ್ರಮ'ವನ್ನು ಉಲ್ಲಂಘಿಸಿಯಾದರೂ, ತನ್ನ ಸರಕಾರದ ಅಸ್ತಿತ್ವವನ್ನು ಒತ್ತೆಯಿಟ್ಟಾದರೂ ಈ ಯುಪಿಎ-1 ಸರಕಾರ ಆ ವ್ಯವಹಾರವನ್ನು ಕುದುರಿಸಲು ಮುಂದಾದಾಗ ಈ ಸಮ್ಮಿಶ್ರ ಸರಕಾರದ 'ಧರ್ಮ' ಅಡ್ಡಿ ಬರಲಿಲ್ಲ ಏಕೆ?



ವೇದರಾಜ ಎನ್.ಕೆ.

ನಿಜಸಂಗತಿಯೆಂದರೆ, ಅಂತರ‍್ರಾಷ್ಟ್ರೀಯ ಹಣಕಾಸು ಬಂಡವಾಳವನ್ನು ಖುಶಿ ಪಡಿಸಲು ಕಟಿಬದ್ಧವಾಗಿರುವ ಯುಪಿಎ-2 ಸರಕಾರ ಕಣ್ಣಿಗೆ ನವ-ಉದಾರವಾದದ ಪಟ್ಟಿ ಕಟ್ಟಿಕೊಂಡು ದಿಕ್ಕು ದೆಸೆಯಿಲ್ಲದೆ ವಿನಾಶದತ್ತ ಸಾಗಿದೆ. ಶ್ರೀಮಂತ ವರ್ಗಕ್ಕೆ ರಿಯಾಯ್ತಿಗಳ ಮೇಲೆ ರಿಯಾಯ್ತಿಗಳನ್ನು ಕೊಡಮಾಡುವ ಬದಲು, ಆ ನ್ಯಾಯಬದ್ಧ ತೆರಿಗೆಗಳನ್ನು ಸಂಗ್ರಹಿಸಿ ಮೂಲರಚನೆಗಳಲ್ಲಿ ತೊಡಗಿಸಿದ್ದರೆ 'ಆಮ್ ಆದ್ಮಿ'ಗೆ ಉದ್ಯೋಗಾವಕಾಶಗಳು ಹೆಚ್ಚಿ, ಅದರಿಂದಾಗಿ ಆಂತರಿಕ ಬೇಡಿಕೆಯ ಪ್ರಮಾಣ ಹೆಚ್ಚಿ ಆರ್ಥಿಕ ಬೆಳವಣಿಗೆ ತೀವ್ರಗೊಳ್ಳಲು ಅವಕಾಶವಾಗುತ್ತಿತ್ತು. ಆದರೆ ಯುಪಿಎ-2 ಸರಕಾರ ಭಾರತೀಯ ಜನತೆಯನ್ನು ಆರ್ಥಿಕವಾಗಿ ಸಬಲೀಕರಿಸುವ ಧೋರಣೆಗಳ ಬದಲು ಅಂತರ‍್ರಾಷ್ಟ್ರೀಯ ಹಣಕಾಸು ಬಂಡವಾಳಕ್ಕೆ ಭಾರತದಲ್ಲಿ ತಮ್ಮ ಲಾಭಗಳನ್ನು ಗರಿಷ್ಟ ಪ್ರಮಾಣಕ್ಕೆ ಏರಿಸಲು ಅನುಕೂಲ ಕಲ್ಪಿಸುವುದೇ ಆರ್ಥಿಕ ಬೆಳವಣಿಗೆ ದರವನ್ನು ಏರಿಸುವ ಮಾರ್ಗ ಎಂದು ಇನ್ನೂ ನಂಬಿ ಕೊಂಡಿರುವಂತಿದೆ.

★

ಅತ್ಯುನ್ನತ ಶಾಸನ ಸಂಸ್ಥೆಯಿಂದಲೇ ಮಹಿಳೆಯರಿಗೆ ಅನ್ಯಾಯ

ಯುಪಿಎ-2 ಸರಕಾರ ವಿವಾಹ ಕಾನೂನುಗಳು(ತಿದ್ದುಪಡಿ) ಮಸೂದೆ 2010 ಮತ್ತು ಅವುಗಳಿಗೆ ತಿದ್ದುಪಡಿಯನ್ನು ಏಪ್ರಿಲ್ 30ರಂದು ಮತ್ತೊಮ್ಮೆ ರಾಜ್ಯಸಭೆಯಲ್ಲಿ ಮಂಡಿಸಿದೆ. ವೈವಾಹಿಕ ಆಸ್ತಿಯಲ್ಲಿ ಮಹಿಳೆಗೆ ಸಮಾನ ಹಕ್ಕು ಕೊಡುವ ಶಾಸನವನ್ನು ತರದೆಯೇ ಸರಕಾರ ಕೈಗೊಂಡಿರುವ ಈ ಕ್ರಮ ಮಹಿಳೆಯರಿಗೆ ಅನ್ಯಾಯ ಮಾಡುವಂತದ್ದು. ಈಗಿರುವ ಸ್ವರೂಪದಲ್ಲಿ ಇದನ್ನು ವಿರೋಧಿಸಬೇಕು ಎಂದು ಅಖಿಲ ಭಾರತ ಜನವಾದಿ ಮಹಿಳಾ ಸಂಘಟನೆ(ಎಐಡಿಡಬ್ಲ್ಯುಎ) ಎಲ್ಲ ರಾಜ್ಯ ಸಭಾ ಸದಸ್ಯರಿಗೆ ಮನವಿ ಮಾಡಿಕೊಂಡು ಪತ್ರ ಬರೆದಿದೆ.

ಮದುವೆ ಸರಿಪಡಿಸಲಾಗದ ರೀತಿಯಲ್ಲಿ

ಪುಟ 15 ಕ್ಕೆ

ಯುಪಿಎ ಕಾರ್ಮಿಕ-ವಿರೋಧಿ ನೀತಿಗಳಿಗೆ ಕಾರ್ಮಿಕ ಸಂಘಟನೆಗಳ ಎಚ್ಚರಿಕೆ

ಫೆಬ್ರುವರಿ 28 ರ ದೇಶವ್ಯಾಪಿ ಸಾರ್ವತ್ರಿಕ ಮುಷ್ಕರದ ಮೊದಲು ಕಾರ್ಮಿಕ ಪ್ರತಿನಿಧಿಗಳೊಡನೆ ಮಾತುಕತೆ ನಡೆಸುವ 'ಆಶಯ' ವ್ಯಕ್ತಪಡಿಸಿದ ಯುಪಿಎ-2 ಸರಕಾರ, 10 ಲಕ್ಷಕ್ಕೂ ಹೆಚ್ಚು ಕಾರ್ಮಿಕರ ಪ್ರತಿಭಟನೆ ಬೃಹತ್ ಸ್ವರೂಪದಲ್ಲಿ ವ್ಯಕ್ತಗೊಂಡ ನಂತರ ಅದನ್ನು ಮರೆತೇ ಬಿಟ್ಟಿತ್ತು. ಎಪ್ರಿಲ್ 26ರಂದು ಕೇಂದ್ರ ಕಾರ್ಮಿಕ ಸಂಘಟನೆಗಳು ಸ್ವತಃ ಕಾಂಗ್ರೆಸ್ ಪಕ್ಷದ ನೇತೃತ್ವದಲ್ಲಿರುವ ಇಂಟಕ್ ಕಚೇರಿಯಲ್ಲಿ ಅದರ ಅಧ್ಯಕ್ಷರ ಅಧ್ಯಕ್ಷತೆಯಲ್ಲಿ ಸಭೆ ಸೇರಿ ಸರಕಾರಕ್ಕೆ ಇದನ್ನು ನೆನಪಿಸಿವೆ ಮತ್ತು ಸರಕಾರದ ಈ ನಿಲುವಿನ ಬಗ್ಗೆ ತೀವ್ರ ಆತಂಕ ವ್ಯಕ್ತಪಡಿಸಿವೆ. ಇದು ಮತ್ತೊಮ್ಮೆ ದುಡಿಯುವ ಜನಗಳು, ಅದರಲ್ಲೂ ಕಾಂಟ್ರಾಕ್ಟ್, ಅಸಂಘಟಿತ, ತಾತ್ಕಾಲಿಕ ಮತ್ತು ಕೃಷಿ ಕಾರ್ಮಿಕರು ಎದುರಿಸುತ್ತಿರುವ ಸಂಕಟಗಳ ಬಗ್ಗೆ ಯುಪಿಎ-2 ಸರಕಾರದ ತೀವ್ರ ನಿರ್ಲಕ್ಷ್ಯವನ್ನು ದೃಢಪಡಿಸಿದೆ ಎಂದು ಅವು ಖೇದ ವ್ಯಕ್ತ ಪಡಿಸಿವೆ.

ಈ ಸರಕಾರ ತನ್ನ ಹಳೆಯ ದಿಕ್ಕಿನಲ್ಲೇ ಸಾಗಲು ಟೊಂಕ ಕಟ್ಟಿದಂತಿದೆ, ದುಡಿಯುವ ಜನಗಳ ಹಿತಗಳನ್ನು ಧಿಕ್ಕರಿಸುವ ಶಾಸನಗಳನ್ನು ತರುವ ಪ್ರಯತ್ನ ನಡೆಸಿರುವಂತೆ ಕಾಣುತ್ತಿದೆ. ಇದಕ್ಕೆ ತಕ್ಷಣವೇ ಬೃಹತ್ ಪ್ರತಿಭಟನೆಗಳನ್ನು ಸಂಘಟಿಸಲಾಗುವುದು ಎಂದು ಕೇಂದ್ರ ಕಾರ್ಮಿಕ ಸಂಘಗಳು ಎಚ್ಚರಿಸಿವೆ

ದೇಶದ ಹದಗೆಡುತ್ತಿರುವ ಆರ್ಥಿಕ ಸನ್ನಿವೇಶ, ಆರ್ಥಿಕ ಬೆಳವಣಿಗೆಯ ದರದಲ್ಲಿ ಇಳಿಕೆ, ಕೈಗಾರಿಕಾ ಉತ್ಪಾದನೆಯಲ್ಲಿ ತೀವ್ರ ಇಳಿಕೆ, ಎಲ್ಲ ಜೀವನಾವಶ್ಯಕ ಸರಕುಗಳ ಬೆಲೆಗಳಲ್ಲಿ ನಿಲ್ಲದ ಏರಿಕೆ ಇವೆಲ್ಲ ಖಂಡಿತವಾಗಿಯೂ ದುಡಿಯುವ ಜನತೆ ಯನ್ನು, ಅವರ ಉದ್ಯೋಗಗಳನ್ನು, ಸಂಬಳ ಮತ್ತು ಕೆಲಸದ ಪರಿಸ್ಥಿತಿಗಳನ್ನು ತಟ್ಟುತ್ತವೆ. ಆದ್ದರಿಂದ ಕಾರ್ಮಿಕ ಸಂಘಗಳು ಹೋರಾಟವನ್ನು ಇನ್ನಷ್ಟು ತೀವ್ರಗೊಳಿಸಲು ನಿರ್ಧರಿಸಿದ್ದು, ಯಾವಾಗ, ಯಾವ ಸ್ವರೂಪದಲ್ಲಿ ಮಾಡಬೇಕು ಎಂಬುದನ್ನು ಶೀಘ್ರದಲ್ಲಿಯೇ ನಿರ್ಧರಿಸುವುದಾಗಿ ಹೇಳಿವೆ.

ಜಗದಗಲ


ಶರತ್‌ಚಂದ್ರ

'ನಾವು 99%, ಮೇ ದಿನದಂದು ಪುನಃ ವಾಲ್‌ಸ್ಟ್ರೀಟ್ ವಶಪಡಿಸಿಕೊಳ್ಳುತ್ತೇವೆ'

ಈ ಘೋಷಣೆ ಈ ವರ್ಷದ ಮೇ ದಿನದ ವಿಶೇಷವಾಗಿತ್ತು. ಸೆಪ್ಟೆಂಬರ್‌ನಲ್ಲಿ 'ಅರಬ್ ವಸಂತ'ದ ಸ್ಫೂರ್ತಿಯಿಂದ ಅಮೆರಿಕದಲ್ಲಿ ಆರಂಭವಾಗಿ ಜಗತ್ತಿನ 150ಕ್ಕೂ ಹೆಚ್ಚು ನಗರಗಳಿಗೆ ಹಬ್ಬಿದ 'ವಾಲ್ ಸ್ಟ್ರೀಟ್ ವಶಪಡಿಸಿಕೊಳ್ಳಿ', (ಒಕ್ಯುಪೈ ವಾಲ್ ಸ್ಟ್ರೀಟ್ ಅಥವಾ ಒ.ಡಬ್ಲ್ಯೂ.ಎಸ್.) ಚಳುವಳಿ ಅಮೆರಿಕದಲ್ಲಿ ಪೋಲಿಸರ ಸತತ ದಾಳಿ, ಚಳಿಗಾಲ ಮತ್ತು ಸೈದ್ಧಾಂತಿಕ-ಸಂಘಟನಾ ಕೊರತೆಗಳಿಂದ ಬಹಳ ಮಟ್ಟಿಗೆ ತಣ್ಣಗಾಗಿತ್ತು. 'ವಾಲ್ ಸ್ಟ್ರೀಟ್ ವಶಪಡಿಸಿಕೊಳ್ಳಿ', ಚಳುವಳಿ ಗುಂಪುಗಳು ಮೇ 1 ರಂದು ಜಗತ್ತಿನಾದ್ಯಂತ ಈ ಚಳುವಳಿಯ ಪುನಶ್ಚೇತನಕ್ಕೆ ಮತ್ತು ಬ್ಯಾಂಕು-ಕಾರ್ಪೋರೇಟ್‌ಗಳ ಮೇಲೆ ಪುನಃ ಸತತ ದಾಳಿ ಆರಂಭಿಸಬೇಕೆಂದು ಕರೆ ಕೊಟ್ಟಿದ್ದವು. ಮೇ ದಿನದ ಹುಟ್ಟು ದೇಶವಾದರೂ, ಆ ದಿನವನ್ನು ಹೋರಾಟದ ದಿನವಾಗಿ ಆಚರಿಸುವ ಸಂಪ್ರದಾಯ ಹೋಗೇ ಬಿಟ್ಟಿದ್ದ ಅಮೆರಿಕದಲ್ಲಿ, ಮೇ ದಿನವನ್ನು ಇದಕ್ಕಾಗಿ ಆರಿಸಿಕೊಂಡಿದ್ದು ಒಂದು ಮಹತ್ವಪೂರ್ಣ ಬೆಳವಣಿಗೆ. ಮೇ ದಿನದಂದು ಅಮೆರಿಕದಲ್ಲಿ 'ಸಾರ್ವತ್ರಿಕ ಮುಷ್ಕರ'ಕ್ಕೆ (ಒ.ಡಬ್ಲ್ಯೂ.ಎಸ್.) ಕರೆ ಕೊಟ್ಟಿದ್ದು ಇನ್ನೂ ಹೆಚ್ಚು ಮಹತ್ವದ್ದಾಗಿತ್ತು.

ಪೂರ್ವದ (ಆಸ್ಟ್ರೇಲಿಯಾದ) ಸಿಡ್ನಿಯಿಂದ ಪಶ್ಚಿಮದ (ಅಮೆರಿಕದ) ಸ್ಯಾನ್ ಫ್ರಾನ್ಸಿಸ್ಕೊವರೆಗೆ ಅಭಿವೃದ್ಧಿ ಹೊಂದಿದ ಬಂಡವಾಳಶಾಹಿ ದೇಶಗಳ ನೂರಾರು ನಗರಗಳಲ್ಲಿ 'ನಾವು 99%, ಮೇದಿನದಂದು ಪುನಃ ವಾಲ್‌ಸ್ಟ್ರೀಟ್ ವಶಪಡಿಸಿಕೊಳ್ಳುತ್ತೇವೆ' ಎಂಬ ಯುದ್ಧಘೋಷಣೆ ಮೇ ದಿನದ ಕಾರ್ಮಿಕರ ಪ್ರದರ್ಶನಗಳೊಂದಿಗೆ ಮಿಳಿತವಾಗಿ ಮಾರ್ದನಿಗೊಂಡಿತು. ಅಮೆರಿಕದಲ್ಲಿ ಸಾರ್ವತ್ರಿಕ ಮುಷ್ಕರಕ್ಕೆ ಕೇಂದ್ರೀಯ ಕಾರ್ಮಿಕ ಸಂಘಟನೆಗಳು ಕರೆ ಕೊಡದಿದ್ದರೂ, ಹಲವಾರು ಕಡೆ ಸ್ಥಳೀಯ ಯೂನಿಯನುಗಳು ಮುಷ್ಕರಕ್ಕೆ ಕರೆ ಕೊಟ್ಟವು. ದೊಡ್ಡ ಪ್ರಮಾಣದಲ್ಲಿ ಮುಷ್ಕರಗಳು ನಡೆಯಲಿಲ್ಲ.

'ನಾವು 99%, ವಾಲ್‌ಸ್ಟ್ರೀಟ್ ವಶಪಡಿಸಿಕೊಳ್ಳುತ್ತೇವೆ' – ಅಮೆರಿಕದ ಸ್ಯಾನ್ ಫ್ರಾನ್ಸ್‌ಸ್ಕೊದಲ್ಲಿ



ಆದರೆ ಮೇ ದಿನದ ಪ್ರದರ್ಶನಗಳು ಅಮೆರಿಕದಲ್ಲಿ ದೊಡ್ಡ ರೀತಿಯಲ್ಲಿ ನಡೆದವು ಎನ್ನುವುದೇ ದೊಡ್ಡ ಸಾಧನೆ. ಈ ಮೇ ದಿನದ ಭಾರೀ ಪ್ರದರ್ಶನಗಳು ಎಷ್ಟರ ಮಟ್ಟಿಗೆ 'ವಾಲ್ ಸ್ಟ್ರೀಟ್ ವಶಪಡಿಸಿಕೊಳ್ಳಿ' ಚಳುವಳಿಯನ್ನು ಪುನಶ್ಚೇತನಗೊಳಿಸುವುದು ಎಂದು ಕಾದು ನೋಡಬೇಕು. ಅಧ್ಯಕ್ಷೀಯ ಚುನಾವಣೆಯ ಈ ವರ್ಷ ಈ ಚಳುವಳಿ ಚುರುಕುಗೊಂಡರೆ ಅಮೆರಿಕದ ರಾಜಕೀಯ ಚಿತ್ರವೇ ಬದಲಾಗಬಹುದು.

ಜಗದಗಲಕ್ಕೂ ಎಂದಿನಂತೆ ಈ ಮೇ ದಿನದಂದೂ, ಕಾರ್ಮಿಕರು ತಮ್ಮ ಸಮರಶೀಲ ಹೋರಾಟಗಳು ಮತ್ತು ಪ್ರದರ್ಶನಗಳ ಮೂಲಕ ತಮ್ಮ ವರ್ಗಪ್ರಜ್ಞೆಯನ್ನು ಮತ್ತು ಬಂಡವಾಳಶಾಹಿ ಕೊನೆಗೊಳಿಸುವ ಅಚಲ ನಿರ್ಧಾರವನ್ನೂ ಸ್ಪಷ್ಟಪಡಿಸಿದರು.

(ಫೋಟೋಗಳು ಪುಟ 16 ರಲ್ಲಿ)

ರಾಜ್ಯಾದ್ಯಂತ ಮೇ ದಿನಾಚರಣೆ

ಪುಟ 9 ರಿಂದ

ಸೇರಿಕೊಂಡರೆ ಅಥವಾ ಯಾವುದೇ ಕಾರ್ಮಿಕರಿಗೆ ಸರಿಯಾಗಿ ಸಂಬಳ ನೀಡದಿದ್ದಾಗ ಪ್ರತಿಭಟನೆ ಮಾಡಿದರೆ " ಇದು ನನ್ನ ಕಾರ್ಖಾನೆ, ನನ್ನ ಕಾರ್ಖಾನೆ ಎದುರಿಗೆ ಪ್ರತಿಭಟನೆ ನಡೆಸುತ್ತಿದ್ದಾರೆ, ಇಂಜೆಕ್ಷನ್ ಆರ್ಡರ್ ಕೊಡಿ" ಎಂದು ಸಿವಿಲ್ ಕೋರ್ಟಿಂದ ಇಂಜೆಕ್ಷನ್ ಆರ್ಡರ್ ತರುತಾತಿರೆ. ಸರ್ಕಾರದ ಬಳಿ ಹೋದರೆ ಬಂಡವಾಳ ಹಾಕಿದೋರು ಲಾಭ ಮಾಡಿಕೊಳ್ಳುವುದು ನ್ಯಾಯವಲ್ಲವೇ ಎಂದು ಕೇಳುತಾತಿರೆ. ಯಾರದೋ ಭೂಮಿಯಲ್ಲಿ ಇದು ನನ್ನದು ಕಾರ್ಖಾನೆ ಎನ್ನುವ ಮಾಲೀಕನ ಎದುರು ಭೂಮಿ ನೀಡಿದ ರೈತ ಇದು ನನ್ನ ಭೂಮಿ ಎಂದು ಹೇಳದಂತೆ ಮಾಡಿದ ಸರ್ಕಾರ ನಮ್ಮದು ಎನ್ನಬೇಕಾ ಎಂದು ಪ್ರಶ್ನಿಸಿದರು.

"ಕಳ್ಳ ಕಳ್ಳರು ಕೂಡಿ ಸಂತೆಗೆ ಹೋದ್ರು"

ಕಳ್ಳ ಕಳ್ಳರು ಕೂಡಿ ಸಂತೆಗೆ ಹೋದ್ರು ಎನ್ನುವಂತೆ ಕಾಂಗ್ರೆಸ್ ಹಾಗೂ ಬಿಜೆಪಿ ಸೇರಿ ಭಾರತವನ್ನು ಲೂಟಿ ಹೊಡೆಯುತ್ತಿವೆ. ಕಾಂಗ್ರೆಸ್ ಹಾಗೂ ಬಿಜೆಪಿ ಎರಡೂ ಪಕ್ಷಗಳು ಆರ್ಥಿಕ ಸುಧಾರಣೆ ನೆಪದಲ್ಲಿ ಕಾರ್ಮಿಕರನ್ನು ಶೋಷಣೆ ಮಾಡಲು ಹಾಗೂ ಭಾರತದ ಸಂಪತ್ತನ್ನು ಲೂಟಿ ಮಾಡಲು ಬಂಡವಾಳಗಾರರಿಗೆ ಬೆಂಬಲ ನೀಡುತ್ತಿವೆ .ಈ ಎರಡೂ ಪಕ್ಷಗಳು ಅಧಿಕಾರ ನಡೆಸಿದಾಗಲೆಲ್ಲಾ ಈ ರೀತಿಯ ಶೋಷಣೆ, ದೌರ್ಜನ್ಯ ನಡೆದಿವೆ ಎಂದರು.

ಕಾರ್ಮಿಕರ ಹಿತ ರಕ್ಷಣೆ ಮಾಡಬೇಕಾದ ಕಾರ್ಮಿಕ ಇಲಾಖೆ ಮಾಲೀಕರ ಹಿತರಕ್ಷಣಾ ವೇದಿಕೆಯಾಗಿದೆ. ಸ್ಟ್ಯಾಂಡಿಂಗ್ ರೂಲ್ಸ್ ಪ್ರಕಾರ ಲೈಸನ್ಸ್ ನೀಡಲಾಗದ ವಿಭಾಗಳಿಗೆ ಲೈಸನ್ಸ್ ನೀಡುತ್ತಿರುವ ಕಾರ್ಮಿಕ ಇಲಾಖೆ ಕಾರ್ಮಿಕ ಸಂಘಗಳ ನೋಂದಣಿ ಮಾಡಿಕೊಳ್ಳಲು ವಿಳಂಬ ಮಾಡುತ್ತಿದೆ. ಮನೆಕೆಲಸ ಮಾಡುವವರ ಸಂಘ ನೋಂದಣಿಗೆ ಮೂರು ತಿಂಗಳು ತೆಗೆದುಕೊಳ್ಳುವ ಇಲಾಖೆ ಕಾರ್ಮಿಕರ ವಿರೋಧಿ ಕಾನೂನುಗಳ ಜಾರಿಗೆ, ನಿಯಾಮಾವಳಿ ರಚನೆಗೆ ಬಹುಬೇಗ ಕ್ರಿಯಾಶೀಲ ವಾಗುತ್ತದೆ ಎಂದರು.

ಬಹಿರಂಗ ಸಭೆಯಲ್ಲಿ ವಿಮಾನೌಕರರ ಸಂಘ, ಕೇಂದ್ರ ಸೇವಾ ನೌಕರರು, ರಾಜ್ಯ ಸರ್ಕಾರಿ ನೌಕರರ ಸಂಘ, ಬ್ಯಾಂಕ್ ಸೇರಿದಂತೆ ಸಿಐಟಿಯು ಅಡಿಯಲ್ಲಿ ಸಂಘಟಿತರಾಗಿರುವ ಎಲ್ಲಾ ಕಾರ್ಮಿಕರು ಭಾಗವಹಿಸಿದ್ದರು.

ಇದೇ ಸಂದರ್ಭದಲ್ಲಿ ಮನೆ ಕೆಲಸ ಮಾಡುವವರ ಸಂಘದ ಸದಸ್ಯತ್ವದ ಗುರುತಿನ ಚೀಟಿ ವಿತರಿಸಲಾಯಿತು.

ಮೆರವಣಿಗೆ: ಬಹಿರಂಗ ಸಭೆಗೂ ಮುನ್ನ ಟೌನ್ ಹಾಲ್ ಎದುರಿನಲ್ಲಿ ಸಮಾವೇಶಗೊಂಡ ಕಾರ್ಮಿಕರು ಕಾರ್ಮಿಕ ವಿರೋಧಿ ನೀತಿಗಳನ್ನನುಸರಿಸುತ್ತಿರುವ ಸರ್ಕಾರದ ವಿರುದ್ಧ ಘೋಷಣೆ ಕೂಗಿದರು. ಸಿಐಟಿಯುವಿನ ಕೆಂಪು ಬಾವುಟ ಹಿಡಿದಿದ್ದ ಸಾವಿರಾರು ಕಾರ್ಮಿಕರು ಮೆರವಣಿಗೆಯಲ್ಲಿ ಭಾಗವಹಿಸಿದ್ದರು.

ಮಮತಾ ಬ್ಯಾನರ್ಜಿ ಅಂಧಾ ದರ್ಬಾರ್.....

ಪುಟ 12 ರಿಂದ

ಬರೆಯಲಾಗಿದೆ. ಅದನ್ನು ತೆಗೆಯುತ್ತೇವೆ ಎಂದು ಘೋಷಿಸಿದ ಸರ್ಕಾರ ಪಠ್ಯ ಪುಸ್ತಕಗಳಿಂದ ಮಾರ್ಕ್ಸ್, ಲೆನಿನ್‌ರವರ ಕುರಿತ ಪಾಠಗಳನ್ನು ಕಿತ್ತು ಹಾಕುವ ಕೆಲಸಕ್ಕೆ ಮುಂದಾಗಿದೆ.

ಅದೇ ರೀತಿ ರಷ್ಯಾ ಕ್ರಾಂತಿಯ ಕುರಿತ ಪಾಠವನ್ನು ಕೂಡ ಪಠ್ಯ ಪುಸ್ತಕಗಳಿಂದ ತೆಗೆಯಲು ಹೊರಟಿರುವ ತೃಣಮೂಲ ಕಾಂಗ್ರೆಸ್ ಸರ್ಕಾರವು ತನ್ನ ಬೌದ್ಧಿಕ ದಾರಿದ್ರ್ಯವನ್ನು ಜಗಜ್ಜಾಹೀರು ಮಾಡಿಕೊಂಡಿದೆ.

ಮನುಕುಲದ ಮಹಾನ್ ಮುನ್ನಡೆಗೆ ಕಾರಣವಾದ, ಜಗತ್ತನ್ನು ಬೆಳಗಿದ ಒಂದು ಯುಗಾಂತರಕಾರಿಯಾದ ರಷ್ಯಾ ಕ್ರಾಂತಿಯ ಮಹತ್ವವನ್ನು ಕುಗ್ಗಿಸುವ ಸರ್ಕಾರದ ಪ್ರಯತ್ನವನ್ನು ಕಮ್ಯುನಿಸ್ಟರಲ್ಲದ ಜನರು ಕೂಡ ವ್ಯಾಪಕವಾಗಿ ಖಂಡಿಸಿದ್ದಾರೆ.

ಬಹಿಷ್ಕಾರಕ್ಕೆ ಕರೆ

ಸಿಪಿಐ(ಎಂ) ಕಾರ್ಯಕರ್ತರೊಂದಿಗೆ ಮಾತನಾಡಬೇಡಿ, ಬೆರೆಯಬೇಡಿ, ಟೀ ಅಂಗಡಿಯಲ್ಲಿ ಒಟ್ಟಿಗೆ ಕುಳಿತು ಟೀ ಕುಡಿಯಬೇಡಿ........ ಇತ್ಯಾದಿ ಇತ್ಯಾದಿಯಾಗಿ ತೃಣಮೂಲ ಕಾಂಗ್ರೆಸ್‌ನ ಸಚಿವರೊಬ್ಬರು ಕರೆ ಕೊಟ್ಟಿದ್ದು ತೃಣಮೂಲ ಕಾಂಗ್ರೆಸ್ ಪಕ್ಷ ಇಂದು ಪಶ್ಚಿಮ ಬಂಗಾಲದಲ್ಲಿ ಸಿಪಿಐ(ಎಂ) ಮತ್ತು ಎಡರಂಗಗಳ ವಿರುದ್ಧ ತೀವ್ರ ಹಗೆತನ ಮತ್ತು ದ್ವೇಷ ಸಾಧಿಸಲು ಪ್ರಯತ್ನಿಸುತ್ತಿರುವುದರ ಸಂಕೇತವಾಗಿದೆ.

ಈ ಬಗೆಗೆ ಪ್ರತಿಕ್ರಿಯೆ ನೀಡಿರುವ ಸಿಪಿಐ(ಎಂ) ಮುಖಂಡರಾದ ಮಹಮದ್ ಸಲೀಂ ಅವರು ತನ್ನ ಸರ್ಕಾರದ ನೀತಿಗಳನ್ನು ಸಮರ್ಥನೆ ಮಾಡಿಕೊಳ್ಳಲು ಸಾಧ್ಯವಿಲ್ಲದ ತೃಣಮೂಲ ಕಾಂಗ್ರೆಸ್ ಪಕ್ಷವು ತನ್ನ ವೈಫಲ್ಯಗಳನ್ನು ಮರೆ ಮಾಚಿಕೊಳ್ಳಲು ಈ ರೀತಿಯಾಗಿ ತನ್ನ ಕಾರ್ಯಕರ್ತರಿಗೆ ಪ್ರಚೋದನೆ ನೀಡುತ್ತಿದೆ.

ಟೀ ಅಂಗಡಿಗಳಲ್ಲಿ ವ್ಯಾಪಕವಾಗಿ ರಾಜಕೀಯ ವಿಚಾರಗಳನ್ನು ಚರ್ಚಿಸುವ ಪರಂಪರೆ ಇರುವ ಪಶ್ಚಿಮ ಬಂಗಾಳ ರಾಜ್ಯದಲ್ಲಿ ಟೀ ಅಂಗಡಿಗಳಲ್ಲಿ ಜನರೆದುರು ಸಿಪಿಐ(ಎಂ) ಕಾರ್ಯಕರ್ತರ ಪ್ರಶ್ನೆಗಳಿಗೆ ಉತ್ತರ ಹೇಳಲಾರದೇ ಟಿಎಂಸಿ ಕಾರ್ಯಕರ್ತರು ತತ್ತರಿಸುವಂತಾಗಬಾರದೆಂದು ಈ ರೀತಿಯಾಗಿ ತಂತ್ರ ಮಾಡಲಾಗುತ್ತಿದೆ ಎಂದು ಸಲೀಂ ಈ ಬೆಳವಣಿಗೆಯ ಕುರಿತು ತೀಕ್ಷ್ಣವಾಗಿ ಪ್ರತಿಕ್ರಿಯಿಸಿದ್ದಾರೆ.

– ಸಿಮ್ಮಿಸಿ

ಜನಶಕ್ತಿ
ಕನ್ನಡ ವಾರಪತ್ರಿಕೆ

ಪಿ.ಎಸ್. ಜನ್ಮ ಶತಮಾನೋತ್ಸವ

ಪುಟ 5 ರಿಂದ

ಜಮೀನಿನ ಮಾಲಿಕತ್ವ – ಕಮ್ಯುನಿಸ್ಟ್ ಕೊಡುಗೆ – ಜಿ.ಎನ್. ನಾಗರಾಜ್

ದೇಶಕ್ಕೆ ಸ್ವಾತಂತ್ರ್ಯ ತಂದು ಕೊಟ್ಟದ್ದು ಮಹಾತ್ಮ ಗಾಂಧೀಜಿ, ಕಾಂಗ್ರೆಸ್ ಪಕ್ಷ ಎಂದು ನಮ್ಮ ಪಠ್ಯ ಪುಸ್ತಕಗಳಲ್ಲಿ ಕಲಿಸಲಾಗುತ್ತದೆ. ಆದರೆ ದೇಶಕ್ಕೆ ಕಾಂಗ್ರೆಸ್ ಪಕ್ಷದ ಕೊಡುಗೆ ಏನು ? ಎಂದು ಪ್ರಶ್ನಿಸಿದ ಜಿ.ಎನ್. ನಾಗರಾಜ್‌ರವರು ದೇಶದಲ್ಲಿ ಇಂದು ಲಕ್ಷಾಂತರ ಜನತೆ ನಗರಗಳ ಸ್ಲಮ್‌ಗಳಲ್ಲಿ ಗಬ್ಬು ವಾಸನೆಯ ನಡುವೆ ಕೊಳಕು ಪರಿಸರದಲ್ಲಿ ಕಡು ಬಡತನದಲ್ಲಿ ಬದುಕಬೇಕಾದಂತಹ ಸ್ಥಿತಿಗೆ ಕಾಂಗ್ರೆಸ್ ಪಕ್ಷವೇ ಕಾರಣ. ಅದೇ ರೀತಿ ಗ್ರಾಮಾಂತರದ ಬಡವರು ಹೊಟ್ಟೆಪಾಡಿಗಾಗಿ ಸಾಮೂಹಿಕವಾಗಿ ವಲಸೆ, ಗುಳೆ ಹೋಗಬೇಕಾದಂತಹ ಸ್ಥಿತಿಗೂ ಕಾಂಗ್ರೆಸ್ ಪಕ್ಷ ಕಾರಣ.

ವೀರ ತೆಲಂಗಾಣ ಹೋರಾಟ ಉಳುವ ರೈತರದ್ದೇ ಭೂಮಿ ಎಂದು ಹಕ್ಕು ಸ್ಥಾಪಿಸಿತು. ಆದರೆ ಕಾಂಗ್ರೆಸ್ ಪಕ್ಷ ಚೌರಿ ಚೌರದಲ್ಲಿ ಹಿಂಸೆ ನಡೆಯಿತೆಂಬ ಹೆಸರಿನಲ್ಲಿ ಅಸಹಕಾರ ಚಳುವಳಿಯನ್ನು ವಾಪಸ್ಸು ಪಡೆಯಿತು. ಬೆಳೆದದ್ದರಲ್ಲಿ ಅರ್ಧ ಪಾಲು, ಮುಕ್ಕಾಲು ಪಾಲನ್ನು ಜಮೀನುದಾರರರಿಗೆ ಕೊಟ್ಟು ಬಿಡಬೇಕಾದ ಪರಿಸ್ಥಿತಿಯಲ್ಲಿ ಗೇಣಿದಾರರು ರೈತರು ಗೇಣಿ ಕಡಿಮೆ ಮಾಡಿರೆಂದು ಅಥವಾ ಗೇಣಿ ಕೊಡುವುದಿಲ್ಲವೆಂದು ಜಮೀನ್ದಾರರ ವಿರುದ್ಧ ಚಳುವಳಿ ಹೂಡಿದ್ದಾಗ ಕಾಂಗ್ರೆಸ್ ಪಕ್ಷ ಹೇಳಿದ್ದೇನು ? ಜಮೀನ್ದಾರರಿಗೆ ಗೇಣಿ ಕೊಟ್ಟು ಬಿಡಿ. ಭೂ ಮಾಲಕರಿಗೆ ಕೊಡಬೇಕಾದದ್ದು ಕೊಟ್ಟು ಬಿಡಿ ಎಂದು ಕಾಂಗ್ರೆಸ್ ಪಕ್ಷ ಸೂಚಿಸಿತು. ನೀವು ದುಡಿದು ಕೊಡಿ ಭೂ ಮಾಲೀಕರು ಬೊಜ್ಜು ಹೊಟ್ಟೆ ಬೆಳೆಸಿಕೊಳ್ಳಲಿ ಎಂದಿತು.

ಗಾಂಧೀಜಿ, ಕಾಂಗ್ರೆಸ್ ಪಕ್ಷ ಅಂದೇ ರೈತರಿಗೆ ಭೂಮಿ ನಿಮ್ಮದು ಅಂದಿದ್ದರೆ ಬ್ರಿಟೀಷರ ಏಜೆಂಟರಾಗಿದ್ದ ಭೂ ಮಾಲೀಕರು ಅಂದೇ ತರಗೆಲೆ ಕಸಕಡ್ಡಿಯಂತೆ ತೇಲಿ ಹೋಗುತ್ತಿದ್ದರು. ದುಡಿಯುವ ರೈತರಿಗೆ ಭೂಮಿ ನಿಮ್ಮದು ಎಂದು ಹೇಳಿದ ತೆಲಂಗಾಣ ಚಳುವಳಿ ಮೂರು ಜಿಲ್ಲೆಗಳ 3,000 ಸಾವಿರ ಹಳ್ಳಿಗಳಲ್ಲಿನ 10 ಲಕ್ಷ ಎಕರೆ ಜಮೀನನ್ನು ರೈತರಿಗೆ ನೀಡಿತು.

ಇದೇ ತೆಲಂಗಾಣದ ದಾರಿಯಲ್ಲಿ ಮುಂದುವರೆದ ಪಶ್ಚಿಮ ಬಂಗಾಳದ ಚಳುವಳಿಯು ರೈತರಿಗೆ 30 ಲಕ್ಷ ಎಕರೆ ಜಮೀನಿನ ಮಾಲೀಕತ್ವವನ್ನು ತಂದು ಕೊಟ್ಟಿತು ಎಂದು ಜಿ.ಎನ್. ನಾಗರಾಜ್ ವಿವರಿಸಿದರು. ಮುಂದುವರೆದು ಮಾತನಾಡಿದ ಅವರು ಸ್ವಂತ ಭೂಮಿ ಎಂಬುದು ಇಲ್ಲದೇ, ಗ್ರಾಮಾಂತರ ಪ್ರದೇಶಗಳಲ್ಲಿ ಕೆಲಸವಿಲ್ಲದೇ ಜನ ಸಾಮಹಿಕವಾಗಿ ಗುಳೆ ಹೊರಟು ನಗರಗಳಿಗೆ ಬಂದು ಅಗ್ಗದ ಕೂಲಿಗೆ ಕೂಲಿಕಾರರಾಗಿ ದುಡಿಯುತ್ತಾ ಸ್ಲಂಗಳಲ್ಲಿ ಜೀವನ ದೂಡುವಂತಹ ಪರಿಸ್ಥಿತಿ ಬಂದಿದೆ ಎಂದರು.

ಕಾಮ್ರೇಡ್ ಪಿ. ಸುಂದರಯ್ಯನವರು ಐತಿಹಾಸಿಕ ತೆಲಂಗಾಣ ಹೋರಾಟದ ರೂವಾರಿಗಳು ಎಂದ ನಾಗರಾಜ್‌ರವರು ಇದೇ ಸಮಾರಂಭದಲ್ಲಿ ಬಿಡುಗಡೆಯಾದ 'ವೀರ ತೆಲಂಗಾಣ' ಪುಸ್ತಕವನ್ನು ಪಕ್ಷದ ಎಲ್ಲ ಸದಸ್ಯರೂ ಕೊಂಡುಕೊಳ್ಳಬೇಕು. ಮತ್ತು ಪಕ್ಷದ ಶಾಖೆಗಳಲ್ಲಿ ಸಾಮೂಹಿಕವಾಗಿ ಓದಿ ಚರ್ಚಿಸಿ ಅದನ್ನು ಅರ್ಥ ಮಾಡಿಕೊಳ್ಳಬೇಕು ಎಂದು ಸೂಚಿಸಿದರು.

ಭಾರತದ ಕ್ರಾಂತಿಯ ದಾರಿಯ ಹುಡುಕಾಟ......ವಿಜೆಕೆ ನಾಯರ್

ಕೆಂಪು ಅಂಗಿ ಹಾಕಿದಾಕ್ಷಣ ಕಮ್ಯುನಿಸ್ಟ್ ಆಗುವುದಿಲ್ಲ. ಕಮ್ಯುನಿಸ್ಟ್ ಆದವರು ನಮ್ಮ ಸಮಾಜದ ನಿರ್ದಿಷ್ಟವಾದ ಅಧ್ಯಯನ ಮಾಡಬೇಕು. ನಮ್ಮ ಗ್ರಾಮಾಂತರ ಪ್ರದೇಶಗಳಲ್ಲಿ ಭೂ ಮಾಲಕರು, ಶ್ರೀಮಂತ ರೈತರು, ಸಾಮಾನ್ಯ ರೈತರು, ಕೃಷಿ ಕೂಲಿಕಾರರು ಮುಂತಾದವರಿಗೆ ಏನೇನು ಭೂಮಿ ಇದೆ ಅಥವಾ ಇಲ್ಲ ಎಂಬುದನ್ನು ಕಂಡುಕೊಳ್ಳಬೇಕು. ನಿಮ್ಮ ನಿಮ್ಮ ಊರಿನಲ್ಲಿ ಬದಲಾವಣೆ ತರಲು ಯತ್ನಿಸಬೇಕು. ಪಿ.ಸುಂದರಯ್ಯ ಭಾರತದ ಕ್ರಾಂತಿ ದಾರಿಯ ಹುಡುಕಾಟದಲ್ಲಿ ನಮ್ಮ ಸಮಾಜದ ನಿರ್ದಿಷ್ಟವಾದ ಆಳವಾದ ಅಧ್ಯಯನ ಮಾಡಿದರು.

ಪಿ. ಸುಂದರಯ್ಯನವರು ಚೀನಾ ದಾರಿಯೂ ಅಲ್ಲದ, ರಷ್ಯಾದ ದಾರಿ ಅಲ್ಲದ ಭಾರತದ್ದೇ ಆದ ಕ್ರಾಂತಿಯ ದಾರಿ ರೂಪಿಸಲು ತೀವ್ರವಾಗಿ ಪ್ರಯತ್ನಿಸಿದರು ಎಂದು ಸಮಾರಂಭದ ಅಧ್ಯಕ್ಷತೆ ವಹಿಸಿದ್ದ ವಿಜೆಕೆ ನಾಯರ್ ಹೇಳಿದರು.

ಕೋಝಿಕ್ಕೋಡ್‌ನಲ್ಲಿ ಸಭೆ ಸೇರಿದ್ದ ಸಿಪಿಐ(ಎಂ) ಕೇಂದ್ರ ಸಮಿತಿಯು ಕಾರ್ಮಿಕರಲ್ಲಿ ದೊಡ್ಡ ಪ್ರಮಾಣದಲ್ಲಿರುವ ಅಸಂಘಟಿತ ಕಾರ್ಮಿಕರನ್ನು ಕಾರ್ಮಿಕರ ಹೋರಾಟದಲ್ಲಿ ಮುಂದೆ ತರದೇ ಚಳುವಳಿಯ ಮುನ್ನಡೆ ಸಾಧ್ಯವಿಲ್ಲ ಎಂದು ತೀರ್ಮಾನಿಸಿದೆ. ದೇಶದಲ್ಲಿಯೂ ರಾಜ್ಯದಲ್ಲಿಯೂ ಅಸಂಘಟಿತ ಕಾರ್ಮಿಕರ ಚಳುವಳಿ ಬೆಳೆದು ಬರುತ್ತಿದೆ. ಅದನ್ನು ಬಲಗೊಳಿಸಬೇಕು ಎಂದೂ ನಾಯರ್ ಹೇಳಿದರು.

ಆರಂಭದಲ್ಲಿ ಸಿಪಿಐ(ಎಂ) ಚಿಕ್ಕಬಳ್ಳಾಪುರ ಜಿಲ್ಲಾ ಸಮಿತಿಯ ನೂತನ ಕಾರ್ಯದರ್ಶಿ ಕಾಂ. ಎಂ.ಪಿ. ಮುನಿವೆಂಕಟಪ್ಪ ಪ್ರಾಸ್ತಾವಿಕ ಮಾತುಗಳನ್ನಾಡಿ ಅತಿಥಿಗಳನ್ನು ಸ್ವಾಗತಿಸಿದರು. ಸಿಪಿಐ(ಎಂ) ರಾಜ್ಯ ಸಮಿತಿ ಸದಸ್ಯರುಗಳಾದ ಕೆ.ಎಸ್.ವಿಮಲ, ಕೆ.ಎಸ್. ಲಕ್ಷ್ಮಿ, ಸಿದ್ದಗಂಗಪ್ಪ ಚಿಕ್ಕಬಳ್ಳಾಪುರ ಜಿಲ್ಲಾ ಸಮಿತಿಯ ಕಾರ್ಯದರ್ಶಿ ಮಂಡಳಿ ಸದಸ್ಯರುಗಳು ವೇದಿಕೆಯಲ್ಲಿ ಉಪಸ್ಥಿತರಿದ್ದರು.

ಕವನ

ಕಾಗದ ಬಂದಿದೆ..... ಗಂಜಿಗೆ ಅಕ್ಕಿಯು ಇರಬಾರದೆಂದು

ಕಾಗದ ಬಂದಿದೆ ನಮ್ಮ ಪೋಲಿಸಪ್ಪನದು
ಈ ಕಾಗದವನ್ನು ಓದಿಕೊಂಡು ಕಾಲವ ಕಳೆಯಿರೋ

ಚಾ ಹುಡಿ ಮನೆಯಲ್ಲಿ ಇರಬಾರದೆಂದು ಕಾಗದ ಬಂದಿದೆ
ಸಕ್ಕರೆ ಬೇಳೆ ತರಬೇಡಿರೆಂದು ಕಾಗದ ಬಂದಿದೆ
ಗಂಜಿಗೆ ಅಕ್ಕಿಯೂ ಇರಬಾರದೆಂದು ಕಾಗದ ಬಂದಿದೆ
ಇದ್ದರೆ ನೀವೇ ನಕ್ಸಲರೆಂದು ಕಾಗದ ಬಂದಿದೆ !! 1 !!

ಸಾಯದೆ ಬದುಕುತ ಇರಿ ಎಂದು ಕಾಗದ ಬಂದಿದೆ
ಬದುಕಿಯು ಸತ್ತೂ ಇರಬೇಕೆಂದು ಕಾಗದ ಬಂದಿದೆ
ಬಾಯಿ ಮುಚ್ಚುತ ಇರಿ ಎಂದು ಎಂದು ಕಾಗದ ಬಂದಿದೆ
ಹೇಳಿದನೊಪ್ಪುತ ಬಿದ್ದಿರಿ ಎಂದು ಕಾಗದ ಬಂದಿದೆ!! 2 !!

ಸುಳ್ಳಿನ ಮುಳ್ಳಲೆ ಇರಿ ಎಂದು ಕಾಗದ ಬಂದಿದೆ
ಸತ್ಯ ಹೇಳಿದರೆ ಎಚ್ಚರ ಎಂದು ಕಾಗದ ಬಂದಿದೆ
ಗುಲಾಮರಂತೆ ಇರಬೇಕೆಂದು ಕಾಗದ ಬಂದಿದೆ
ತಪ್ಪಿದರೆ ನೀವು ನಕ್ಸಲರೆಂದು ಕಾಗದ ಬಂದಿದೆ !! 3 !!

ಸಂವಿಧಾನವನೆ ತುಳಿಯಿರಿ ಎಂದು ಕಾಗದ ಬಂದಿದೆ
ಗಾಂಧೀಜಿಯನೆ ಎಸೆಯಿರಿ ಎಂದು ಕಾಗದ ಬಂದಿದೆ
ಸ್ವಾತಂತ್ರ್ಯವೇ ನಿಮಗೆ ಇಲ್ಲ ಎಂದು ಕಾಗದ ಬಂದಿದೆ
ಭಗತ್ ಸಿಂಗ್‌ರ ಪುಸ್ತಕವಿದ್ದರೆ ನಕ್ಸಲರೆಂದಿದೆ !! 4 !!

ವಿಠಲನ ಹೆಸರು ಹೇಳದೆ ಇರಲು ಕಾಗದ ಬಂದಿದೆ
ಹೇಳಿದಾದರೆ ನಕ್ಸಲರೆಂದು ಬಂಧನ ಎಂದಿದೆ
ಪುರಂದರ ವಿಠಲನ ಮರೆಯಿರಿ ಎಂದು ಕಾಗದ ಬಂದಿದೆ
ಪೋಲೀಸಪ್ಪನ ಪೂಜಿಸಿರೆಂದು ಕಾಗದ ಬಂದಿದೆ !! 5 !!

ನ್ಯಾಯ ನೀತಿಯ ಬಿಡಿರೆಂದು ಕಾಗದ ಬಂದಿದೆ
ಬದುಕುವ ಹಕ್ಕನೆ ಮರೆಯಿರಿ ಎಂದು ಕಾಗದ ಬಂದಿದೆ
ನ್ಯಾಯಕ್ಕೆ ಸ್ವರವ ಎತ್ತದೆ ಇರಲು ಕಾಗದ ಬಂದಿದೆ
ಪುರಂದರ ವಿಠಲನೆ ನಕ್ಸಲನೆಂದು ಕಾಗದ ಬಂದಿದೆ!! 6 !!

– ಶ್ಯಾಮರಾಜ್ ಪಟ್ರಮೆ
ಬೆಳ್ತಂಗಡಿ

ಯುಪಿಎ ದರ್ಬಾರ್

ಪುಟ 13 ರಿಂದ

ಮುರಿದು ಬಿದ್ದರೆ, ಅದು ವಿಚ್ಛೇದನೆಗೆ ಒಂದು ಕಾರಣವಾಗಬಹುದು ಎಂದು ಅವಕಾಶ ಕಲ್ಪಿಸುವ ಈ ತಿದ್ದುಪಡಿ, ನ್ಯಾಯಾಲಯ ವೈವಾಹಿಕ ಸಂದರ್ಭದಲ್ಲಿ ಗಳಿಸಿದ ಆಸ್ತಿಯಲ್ಲಿ ಹೆಂಡತಿಗೆ ಪಾಲು ಕೊಡಬಹುದು ಎನ್ನುತ್ತದೆ. ಆದರೆ ಪಾಲು ಕೊಡಬೇಕೇ, ಕೊಡಬಹುದಾದರೆ ಎಷ್ಟು ಎನ್ನುವುದನ್ನು ನ್ಯಾಯಾಲಯದ ಮರ್ಜಿಗೆ ಬಿಡುತ್ತದೆ. ನ್ಯಾಯಾಲಯಗಳಲ್ಲಿನ ಅನುಭವವೆಂದರೆ, ಅವು ಈ ವಿಷಯದಲ್ಲಿ ಸಂಪ್ರದಾಯ ಶರಣತೆಯನ್ನೇ ಹೆಚ್ಚಾಗಿ ಪ್ರದರ್ಶಿಸುತ್ತವೆ, ಮಹಿಳೆಯರಿಗೆ, ಮಕ್ಕಳಿಗೆ ಪರಿಹಾರ ಕೊಡುವಲ್ಲಿ ಬಹಳ ಜಿಪುಣತನ ತೋರುತ್ತವೆ. ಮಹಿಳೆಯರು ನ್ಯಾಯಾಲಯದ ಮೊರೆ ಹೋದಾಗ, ಮಕ್ಕಳ ಪಾಲನೆಯ ಜವಾಬ್ದಾರಿಯನ್ನು ಅವರೇ ಹೊತ್ತಾಗಲೂ ಸಾಮಾನ್ಯವಾಗಿ ಅವು ಆಸ್ತಿಯ 5ಶೇ.ದಿಂದ 35ಶೇ.ದ ವರೆಗೆ ಮಾತ್ರ ಕೊಡುತ್ತವೆ. ಇದು ಈ ರೀತಿ ಪ್ರತ್ಯೇಕಗೊಳ್ಳುವ ಮಹಿಳೆ ಮತ್ತು ಮಕ್ಕಳ ಘನತೆಯ ಬದುಕಿಗೆ ಏನೇನೂ ಸಾಲದು.

ಸರಿಪಡಿಸಲಾಗದಂತೆ ಮದುವೆ ಮುರಿದು ಬಿದ್ದರೆ, ಅದು ವಿಚ್ಛೇದನೆಗೆ ಒಂದು ಕಾರಣವಾಗಬಹುದು ಎನ್ನುವ ಕಾನೂನು ಇರುವ ದೇಶಗಳಲ್ಲಿ ವೈವಾಹಿಕ ಆಸ್ತಿಗಳ ಸಮತ್ವಪೂರ್ಣ ವಿಭಜನೆಯ ಕಾನೂನು ಕೂಡ ಇದೆ. ಏಕೆಂದರೆ ಒಂದು ಕುಟುಂಬವನ್ನು ರಚಿಸುವಲ್ಲಿ ಮಹಿಳೆಯ ಕೊಡುಗೆ, ವಿಶೇಷವಾಗಿ ಮಕ್ಕಳ ಪಾಲನೆಯಲ್ಲಿ ಆಕೆಯ ಪಾತ್ರ ಆರ್ಥಿಕವಾಗಿ ಮೌಲ್ಯಯುತವಾದದ್ದು ಎಂದು ಅಂತಹ ದೇಶಗಳಲ್ಲಿ ಪರಿಗಣಿಸಲಾಗಿದೆ. ಆದರೆ ಯುಪಿಎ–2 ಸರಕಾರ ಇಂತಹ ಒಂದು ಕಾನೂನು ತರದೆಯೇ ಇಂತಹ ತಿದ್ದುಪಡಿಯನ್ನು ಮತ್ತೊಮ್ಮೆ ಮಂಡಿಸಿದೆ. ಆಸ್ತಿಗಳಲ್ಲಿ ಪಾಲು ಕೊಡುವುದನ್ನು ನ್ಯಾಯಾಲಯಗಳಿಗೆ ವಹಿಸುವುದು ಮಹಿಳೆಗೆ ಆಕೆಯ ನ್ಯಾಯಪೂರ್ಣ ಆಸ್ತಿಯ ಗ್ಯಾರಂಟಿಯನ್ನೇನೂ ಕೊಡುವುದಿಲ್ಲ ಎಂದು ಎಐಡಿಡಬ್ಲ್ಯುಎ ಹೇಳಿದೆ.

ಮದುವೆಯಲ್ಲಿ ಮಹಿಳೆಯರನ್ನು ಸಮಾನರಾಗಿ ಕಾಣಬೇಕು. ಅದು ಮುರಿದು ಬಿದ್ದಾಗ ಪುರುಷರಿಗೆ ಸಿಗುವಷ್ಟೇ ಹಣಕಾಸು ಮತ್ತು ಭದ್ರತೆ ಮಹಿಳೆಯರಿಗೆ ಸಿಗುವಂತಾಗಬೇಕು. ಸಮಾನ ವಿಭಜನೆಯು ಈ ಕಾನೂನು ವಿಚ್ಛೇದನೆ ಮಾತ್ರವಲ್ಲ, ಪ್ರತ್ಯೇಕಗೊಂಡಾಗಲೂ ಅನ್ವಯವಾಗಬೇಕು, ಅವರಿಗೆ ಅರ್ಧದಷ್ಟು, ಮಕ್ಕಳ ಜವಾಬ್ದಾರಿಯಿದ್ದರೆ ಅದಕ್ಕಿಂತಲೂ ಹೆಚ್ಚು ಸಿಗುವಂತೆ ಕಾನೂನು ಮಾಡಿದ ಮೇಲೆಯೇ ಈ ತಿದ್ದುಪಡಿಯನ್ನು ತರಲು ಸಾಧ್ಯ ಎಂದು ಎಐಡಿಡಬ್ಲ್ಯುಎ ಹೇಳಿದೆ. ಶಾಸನ ರಚನೆಯಲ್ಲಿ ದೇಶದ ಅತ್ಯುನ್ನತ ಸಂಸ್ಥೆಯಾದ ಸಂಸತ್ತಿನಿಂದಲೇ ಮಹಿಳೆಯರಿಗೆ ಇಂತಹ ಅನ್ಯಾಯ ಆಗಬಾರದು ಎಂದು ಅದು ಹೇಳಿದೆ. •

RNI No. KARKAN /2006/17926 Posted on every Satuarday
Postal Reg. No. RNP/KA/BGS/2078/2010-12 Posted at MBC Bangalore GPO

ಜಗದಗಲ ಕೆಂಪು ಕೆಂಪು ಮೇ ದಿನಾಚರಣೆ



'ಮೇ ದಿನದಂದು ಪುನಃ ವಾಲ್‌ಸ್ಟ್ರೀಟ್ ವಶಪಡಿಸಿಕೊಳ್ಳುತ್ತೇವೆ' ಅಮೆರಿಕದ ನ್ಯೂಯಾರ್ಕಿನಲ್ಲಿ



ಲಂಡನ್‌ನಲ್ಲಿ ಮೇ ದಿನದ ವರ್ಣಮಯ ಪ್ರದರ್ಶನ



ಉಕ್ರೇನ್ ರಾಜಧಾನಿ ಕೀವ್‌ನಲ್ಲಿ ಕೆಂಬಾವುಟಗಳ ಸಾಲು ಸಾಲು



ಫ್ರಾನ್ಸ್‌ನ ಪ್ಯಾರಿಸಿನಲ್ಲಿ ಕಾರ್ಮಿಕರ ಮೆರವಣಿಗೆಯಲ್ಲಿ ಅಧ್ಯಕ್ಷ ಸಾರ್ಕೋಜಿ ಪ್ರತಿಕೃತಿ



ಸ್ಪೈನಿನಲ್ಲಿ ಕಾರ್ಮಿಕರ ಮೆರವಣಿಗೆಯಲ್ಲಿ ಡಾಲರು ನೋಟಿನ ಅಣಕದ ಮೂಲಕ ಹಣಕಾಸು ಬಂಡವಾಳಶಾಹಿಯ ಖಂಡನೆ



ಟರ್ಕಿಯ ರಾಜಧಾನಿ ಇಸ್ತಾನ್‌ಬುಲ್‌ನ ತಕ್ಸೀಂ ಚೌಕವನ್ನು ಕೆಂಪಾಗಿಸಿದ ಕಾರ್ಮಿಕರ ಬೃಹತ್ ಮೆರವಣಿಗೆ



'ಅರಬ್ ವಸಂತ' ಆರಂಭಿಸಿದ ಟುನೇಶಿಯಾದಲ್ಲಿ ಸಮರಶೀಲ ಕಾರ್ಮಿಕರ ಪ್ರದರ್ಶನ



ಪಾಕಿಸ್ತಾನದಲ್ಲಿ ಕಾರ್ಮಿಕ ಮೆರವಣಿಗೆಯಲ್ಲಿ ಮಹಿಳೆಯರು



ನೇಪಾಳದ ಕಠ್ಮಂಡುವಿನಲ್ಲಿ ಯು.ಎಂ.ಎಲ್: ಕಮ್ಯುನಿಸ್ಟ್ ಪಕ್ಷದ ಮೇ ದಿನದ ಮೆರವಣಿಗೆ



ದಕ್ಷಿಣ ಕೊರಿಯಾದ ರಾಜಧಾನಿ ಸಿಯೋಲ್ ನಲ್ಲಿ ಕಾರ್ಮಿಕ ರ‍್ಯಾಲಿಯಲ್ಲಿ ಸಮರಶೀಲ ವೃಂದಗಾನ



ಫಿಲಿಪ್ಪೀನ್ಸ್ ರಾಜಧಾನಿ ಮನಿಲಾದಲ್ಲಿ ಕಾರ್ಮಿಕ ರ‍್ಯಾಲಿಯಲ್ಲಿ ಪ್ರತಿಕೃತಿ ದಹನ

JANASHAKTHI KANNADA VARA PATRIKE: Printed by G.N.NAGARAJ, No.12, 18th Cross, S.R.Nagar, BANGALORE-560027
Published by: G.N.NAGARAJ, No 12, 18th Cross, S.R.Nagar, BANGALORE-560027, Karnataka on behalf of / owned by COMMUNIST PARTY OF INDIA
(MARXIST) and Printed at : Kriya Prakashana, 12, 18th Cross, S.R.Nagar, BANGALORE - 560027 Karnataka (State) and Published at BANGALORE
No 12, 18th Cross, S.R.Nagar, BANGALORE-560027 Editor S.Y.GURURSHANTH, No12, 18th Cross, S.R.Nagar, BANGALORE - 560027
Editor: S.Y.GURUSHANTH